




# ನಮ್ಮ ಕರ್ನಾಟಕಕ್ಕೆ ನಮ್ಮ ವಚನ

## ಭಾರತೀಯ ಜನತಾ ಪಾರ್ಟಿ ಪ್ರಣಾಳಿಕೆ

ಕರ್ನಾಟಕ ವಿಧಾನಸಭಾ ಚುನಾವಣೆ - 2018

ನವ ಕರ್ನಾಟಕ ನಿರ್ಮಾಣಕ್ಕಾಗಿ
ಪರಿವರ್ತನೆಯ ದೃಢ ಸಂಕಲ್ಪ

# ಸರ್ಕಾರ ಬದಲಿಸಿ, ಬಿಜೆಪಿ ಗೆಲ್ಲಿಸಿ

ಬಿಜೆಪಿ

## ಭಾರತೀಯ ಜನತಾ ಪಾರ್ಟಿ
ಕರ್ನಾಟಕ

ನವಕರ್ನಾಟಕದ ಸೃಷ್ಟಿ, ಬಿಜೆಪಿ ಪ್ರಣಾಳಿಕೆಯ ದೃಷ್ಟಿ

# ವಿಷಯ ಸೂಚಿ


A. ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ಸಂದೇಶ ........ 01

B. ಪ್ರಣಾಳಿಕೆಯ ಮುಖ್ಯಾಂಶಗಳು ........ 03

C. ಅಧ್ಯಾಯಗಳು

1. ರೈತರ ಕಲ್ಯಾಣ ರಾಜ್ಯದ ಕಲ್ಯಾಣ ........ 08
2. ಮಹಿಳಾ ಸಬಲೀಕರಣ ........ 14
3. ಉಜ್ವಲ ಭವಿಷ್ಯದೆಡೆಗೆ ಕರ್ನಾಟಕದ ಯುವಜನತೆ ........ 16
4. ಎಲ್ಲರ ಜೊತೆಗೆ ಎಲ್ಲರ ವಿಕಾಸ ........ 18
5. ದಕ್ಷ ಆಡಳಿತ ಸುರಕ್ಷಿತ ಕರ್ನಾಟಕ ........ 24
6. ಶಿಕ್ಷಣ ಕ್ಷೇತ್ರಕ್ಕೆ ನವ ಚೈತನ್ಯ ........ 28
7. ಜನರ ಆರೋಗ್ಯ ನಮ್ಮ ಆದ್ಯತೆ ........ 32
8. ಮೂಲಭೂತ ಸೌಕರ್ಯಗಳ ವಿಸ್ತರಣೆ ........ 36
9. ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಯ ಪುನಶ್ಚೇತನ ........ 40
10. ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ ........ 44
11. ರಾಜ್ಯದ ಎಲ್ಲಾ ವಲಯಗಳ ಸಮಾನ ಅಭಿವೃದ್ಧಿ ........ 50
12. ಸ್ವಚ್ಛ ಮತ್ತು ಹಸಿರು ಕರ್ನಾಟಕ ........ 52
13. ನವ ಬೆಂಗಳೂರಿಗೆ ನಮ್ಮ ವಚನ ........ 54

D. ಪ್ರಣಾಳಿಕೆ ಸಿದ್ಧವಾಗಿದ್ದು ಹೀಗೆ ........ 58


ಬಿಜೆಪಿ

# ನಮ್ಮ ಕರ್ನಾಟಕಕ್ಕೆ ನನ್ನ ವಚನ

ಪ್ರಿಯ ಬಂಧುಗಳೇ,

ಕರ್ನಾಟಕ ತನ್ನ ಶ್ರೀಮಂತ ಇತಿಹಾಸ, ವಿಶಿಷ್ಟ ಸಂಸ್ಕೃತಿ ಮತ್ತು ಅದ್ವಿತೀಯ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲದಿಂದ ಭಾರತದ ಹೆಮ್ಮೆಯ ಭೂಮಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 2008ರಲ್ಲಿ ಅಧಿಕಾರಕ್ಕೆ ಬಂದ ನಮ್ಮ ಬಿಜೆಪಿ ಸರ್ಕಾರ, ಕರ್ನಾಟಕದ ಘನತೆ ಹೆಚ್ಚಿಸುವ ನಿಟ್ಟಿನಲ್ಲಿ ಬದ್ಧತೆಯಿಂದ ಕೆಲಸ ಮಾಡಿತ್ತು. ರೈತರಿಗೆ ಉಚಿತ ವಿದ್ಯುತ್, ಕಡಿಮೆ ಬಡ್ಡಿ ದರದಲ್ಲಿ ಸಾಲ, ಭಾಗ್ಯಲಕ್ಷ್ಮಿ, ಸಂಧ್ಯಾ ಸುರಕ್ಷಾ, ಹಾಲಿಗೆ ಪ್ರೋತ್ಸಾಹಧನ, ಮಕ್ಕಳಿಗೆ ಬೈಸಿಕಲ್, ರೈತರ ಸಾಲಮನ್ನಾ, ಮಡಿಲು ಕಿಟ್, ಸುವರ್ಣಗ್ರಾಮ, ಸುವರ್ಣಭೂಮಿ, ಭೂ ಚೇತನ, ಮತ್ತು ನಗರೋತ್ಥಾನದಂತಹ ಹಲವಾರು ಜನೋಪಯೋಗಿ ಯೋಜನೆಗಳನ್ನು ಜಾರಿಗೊಳಿಸಿ ಜನಪರ ಆಡಳಿತ ನೀಡಿತ್ತು.

ಆದರೆ, ಕಳೆದ ಐದು ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರ ತನ್ನ ಅಸಮರ್ಥತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ರೈತವಿರೋಧಿ ನಿಲುವು, ಹದಗೆಟ್ಟ ಕಾನೂನು ಸುವ್ಯವಸ್ಥೆ, ದಕ್ಷ ಅಧಿಕಾರಿಗಳಿಗೆ ಕಿರುಕುಳ, ನಿರ್ಲಕ್ಷ್ಯದ ಧೋರಣೆಯ ಮೂಲಕ ನಮ್ಮ ಸರ್ಕಾರ ಮಾಡಿದ ಉತ್ತಮ ಕೆಲಸಗಳನ್ನು ವ್ಯರ್ಥವಾಗುವಂತೆ ಮಾಡಿದೆ. 2013ರ ಚುನಾವಣೆ ಸಂದರ್ಭದಲ್ಲಿ ನೀಡಿದ ಭರವಸೆಯನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡದೆ ರಾಜ್ಯದ ಜನರಿಗೆ ದ್ರೋಹ ಬಗೆದಿದೆ.

ನಿಮ್ಮೆಲ್ಲರಿಗೂ ನಿಮ್ಮ ಭಾವನೆಗಳನ್ನು ಅರಿತು ಕೆಲಸ ಮಾಡುವ ಸರ್ಕಾರ ಬೇಕಾಗಿದೆ. ರೈತ, ಮಹಿಳೆ, ಯುವಕ, ವಿದ್ಯಾರ್ಥಿ - ವಿದ್ಯಾರ್ಥಿನಿಯರು ನೆಮ್ಮದಿಯಿಂದ ಬದುಕುವ ಸಂಕಲ್ಪವನ್ನು ನಾವು ಮಾಡಬೇಕಾಗಿದೆ. ನಮಗೆ 5 ವರ್ಷಗಳ ಆಡಳಿತ ಅವಧಿಯನ್ನು ನೀವು ಕೊಟ್ಟಾಗ ಹಲವಾರು ಯೋಜನೆಗಳ ಮೂಲಕ ನಿಮ್ಮ ವಿಶ್ವಾಸ ಉಳಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ. ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಸಮಾನವಾಗಿ ಅಭಿವೃದ್ಧಿ ಮಾಡುವ ಅಗತ್ಯವಿದೆ. ಗ್ರಾಮೀಣ ಪ್ರದೇಶದಲ್ಲಿ ಬದುಕು ಕಷ್ಟ ಎನ್ನುವ ಭಾವನೆ ಜನರಲ್ಲಿ ಹೆಚ್ಚಾಗುತ್ತಿದೆ. ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ತತ್ತರಿಸುವ ರೈತನ ನೆರವಿಗೆ ಒಂದು ನಾಗರಿಕ ಸರ್ಕಾರ ಕೆಲಸ ಮಾಡಬೇಕು. ಕಳೆದ ಐದು ವರ್ಷಗಳಲ್ಲಿ 3,800ಕ್ಕೂ ಹೆಚ್ಚು ರೈತರು ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ. ರೈತರಿಗೆ ಧೈರ್ಯ ತುಂಬುವುದು ನಮ್ಮೆಲ್ಲರ ಕರ್ತವ್ಯ.

ನಮ್ಮ ಗೌರವಾನ್ವಿತ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಮಾರ್ಗದರ್ಶನ, ಪಾರದರ್ಶಕ ಆಡಳಿತ, ರಾಜ್ಯದ ಅಭಿವೃದ್ಧಿಗೆ ಅವರ ಸಹಭಾಗಿತ್ವ - ಕರ್ನಾಟಕವನ್ನು ದೇಶದಲ್ಲೇ ಅಭಿವೃದ್ಧಿಯ ಮುಂಚೂಣಿಯಲ್ಲಿ ನಿಲ್ಲಿಸಲು ಸಹಕಾರಿಯಾಗಲಿದೆ. ತನ್ನ ದಿನದ ಪೂರ್ಣ ಸಮಯವನ್ನು ದೇಶದ ಹಿತದೃಷ್ಟಿಯ ಚಿಂತನೆಯಲ್ಲೇ ಕಳೆಯುವ ಶ್ರೀ ನರೇಂದ್ರ ಮೋದಿಯವರಂತಹ ನಾಯಕತ್ವ ನನಗೆ ಇನ್ನೂ ಹೆಚ್ಚಿನ ಶಕ್ತಿಯನ್ನು ತುಂಬಲಿದೆ. ಕರ್ನಾಟಕ ರಾಜ್ಯದ ನೆಲ, ಜಲ, ಭಾಷೆ ರಕ್ಷಣೆಗೆ ನಾವು ಬದ್ಧರು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಒಂದೇ ಹಾದಿಯಲ್ಲಿ ಅಭಿವೃದ್ಧಿಯ ಚಿಂತನೆ ಮಾಡಿದರೆ ಕರ್ನಾಟಕದ ಅಭಿವೃದ್ಧಿಯ ವೇಗವನ್ನು ಹೆಚ್ಚಿಸಬಹುದು. ನಮ್ಮ ಕರ್ನಾಟಕದ ಸಂಸ್ಕೃತಿ, ಪರಂಪರೆ, ಸರ್ವಧರ್ಮ ಸಮಭಾವ, ಆಚಾರ, ವಿಚಾರ, ಕಲೆಗಳು - ಇವನ್ನು ರಕ್ಷಿಸಿ ಪೋಷಿಸಬೇಕಾದ ಜವಾಬ್ದಾರಿ ನಮ್ಮದು. ವಿಜಯನಗರ ಸಾಮ್ರಾಜ್ಯದ, ಕೆಂಪೇಗೌಡರ ಆಡಳಿತದ, ಮೈಸೂರು ಮಹಾರಾಜರ ಪರಿಕಲ್ಪನೆಯ ಆಧಾರದಲ್ಲಿ ಕನ್ನಡನಾಡನ್ನು ವೈಭವಕ್ಕೆ ಏರಿಸುವ ಸಂಕಲ್ಪ ನಮ್ಮದು.

"ನಮ್ಮ ಕರ್ನಾಟಕಕ್ಕೆ ನಮ್ಮ ವಚನ" ಎಂಬ ಪ್ರಣಾಳಿಕೆಯೊಂದಿಗೆ ಮುಂದಿನ 5 ವರ್ಷಗಳಲ್ಲಿ ನಿರ್ದಿಷ್ಟ ಗುರಿಯನ್ನು ಸಾಧಿಸುವ ಭರವಸೆಯನ್ನು ನಾವು ನಿಮಗೆ ನೀಡುತ್ತಿದ್ದೇವೆ. ಸಮೃದ್ಧ ಕರ್ನಾಟಕದ ನಿರ್ಮಾಣಕ್ಕಾಗಿ ನಿಮ್ಮೆಲ್ಲರ ಆಶೀರ್ವಾದ ನನಗೆ ಬೇಕಾಗಿದೆ. ನನ್ನ ಕನಸುಗಳನ್ನು ನನಸು ಮಾಡಲು ನೀವು ನನ್ನ ಜೊತೆಗಿರಬೇಕು ಎಂಬ ಅಪೇಕ್ಷೆ ನನ್ನದು. ನನಗೆ ಆಶೀರ್ವಾದ ಮಾಡಿ ಮತ್ತು ನನಗೊಂದು ಅವಕಾಶ ಕೊಡಿ ಎಂದು ನಿಮ್ಮೆಲ್ಲರಲ್ಲಿ ಸವಿನಯ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

**ಬಿ.ಎಸ್. ಯಡಿಯೂರಪ್ಪ**
ಬಿಜೆಪಿ ರಾಜ್ಯಾಧ್ಯಕ್ಷರು





# ಪ್ರಣಾಳಿಕೆಯ ಮುಖ್ಯಾಂಶಗಳು

## ರೈತರ ಕಲ್ಯಾಣ ರಾಜ್ಯದ ಕಲ್ಯಾಣ

- ನಮ್ಮ ಸರಕಾರದ ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ರಾಷ್ಟ್ರೀಕೃತ ಬ್ಯಾಂಕು ಮತ್ತು ಸಹಕಾರಿ ಸಂಘಗಳಲ್ಲಿ ಇರುವ ₹ 1 ಲಕ್ಷದವರೆಗೆ ರೈತರ ಬೆಳೆ ಸಾಲ ಮನ್ನಾ ಮಾಡಲಾಗುವುದು.
- 20 ಲಕ್ಷ ಸಣ್ಣ ಮತ್ತು ಅತಿ ಸಣ್ಣ ಒಣ ಭೂಮಿ ರೈತರಿಗೆ ತಲಾ ₹ 10,000 ಆರ್ಥಿಕ ನೆರವು ನೀಡಲಿದೆ "ನೇಗಿಲ ಯೋಗಿ" ಯೋಜನೆ.
- ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಗೆ, ಬೆಳೆಯ ಒಂದೂವರೆ ಪಟ್ಟು ಆದಾಯ ನೀಡಲಾಗುವುದು.
- ಬೆಲೆ ವ್ಯತ್ಯಯದ ಸಂದರ್ಭದಲ್ಲಿ ರೈತರ ಬೆಂಬಲಕ್ಕಾಗಿ ₹ 5,000 ಕೋಟಿ "ರೈತ ಬಂಧು ಆವರ್ತ ನಿಧಿ".
- ರೈತ ಸ್ನೇಹಿ ಯೋಜನೆಗಳ ಅನುಷ್ಠಾನದ ಸೂಕ್ತ ಮೇಲ್ವಿಚಾರಣೆಗಾಗಿ ಮುಖ್ಯಮಂತ್ರಿ ಕಚೇರಿಯಡಿ "ರೈತಬಂಧು ವಿಭಾಗ".
- ಭೂರಹಿತ ಕೃಷಿ ಕಾರ್ಮಿಕರಿಗೆ "ಮುಖ್ಯಮಂತ್ರಿ ರೈತ ಸುರಕ್ಷಾ ವಿಮೆ ಯೋಜನೆ" ಉಚಿತ ₹ 2 ಲಕ್ಷದಷ್ಟು ಅಪಘಾತ ವಿಮೆ.
- ರಾಜ್ಯದಲ್ಲಿ ಎಲ್ಲಾ ನೀರಾವರಿ ಯೋಜನೆಗಳನ್ನು 2023ರ ಒಳಗೆ ಪೂರ್ಣಗೊಳಿಸಲು ₹ 1.5 ಲಕ್ಷ ಕೋಟಿಯ "ಸುಜಲಾಂ ಸುಫಲಾಂ ಕರ್ನಾಟಕ".
- ರಾಜ್ಯದಲ್ಲಿರುವ ಎಲ್ಲಾ ಕೆರೆಗಳ ಪುನಶ್ಚೇತನಕ್ಕಾಗಿ "ಮಿಶನ್ ಕಲ್ಯಾಣಿ" ಯೋಜನೆ.
- ರೈತರ ಪಂಪ್‌ಸೆಟ್‌ಗೆ ಪ್ರತಿ ದಿನ 10 ಗಂಟೆಗಳ ಕಾಲ ತ್ರೀ ಫೇಸ್ ವಿದ್ಯುತ್ ಪೂರೈಕೆ.
- ಕೃಷಿ ಸಂಬಂಧಿತ ತರಬೇತಿ ಪಡೆಯುವ ರೈತರ ಮಕ್ಕಳಿಗಾಗಿ ₹ 100 ಕೋಟಿ ಮೊತ್ತದ "ರೈತಬಂಧು ವಿದ್ಯಾರ್ಥಿ ವೇತನ".
- "ಮುಖ್ಯಮಂತ್ರಿಗಳ ಕೃಷಿ ಫೆಲೋಶಿಪ್" ಅಡಿ ಕೃಷಿಯ ಅತ್ಯುತ್ತಮ ಪದ್ಧತಿ ಅರಿಯಲು ಪ್ರತಿ ವರ್ಷ 1,000 ರೈತರು ಇಸ್ರೇಲ್ ಮತ್ತು ಚೀನಾ ಭೇಟಿಗೆ ವ್ಯವಸ್ಥೆ.
- ಭತ್ತ, ಕಬ್ಬು, ತೆಂಗು, ಅಡಿಕೆ, ಕಾಫಿ ಸೇರಿದಂತೆ ರಾಜ್ಯದಲ್ಲಿ ವ್ಯಾಪಕವಾಗಿ ಬೆಳೆಯುವ ಎಲ್ಲಾ ಬೆಳೆಗಳಿಗೆ ನಿರ್ದಿಷ್ಟ ಕಾರ್ಯತಂತ್ರ ರಚಿಸಲಾಗುವುದು
- ಕೆಎಂಎಫ್ ಮೂಲಕ ಹಣ್ಣು ಮತ್ತು ತರಕಾರಿಗಳ ರಫ್ತಿನ ಉತ್ತೇಜನಕ್ಕಾಗಿ ₹ 3,000 ಕೋಟಿ ನಿಧಿ.
- ಪಶು ಸಂಗೋಪನೆ, ಹೈನುಗಾರಿಕೆಗೆ ಬೇಕಾಗುವ ಮೂಲಸೌಕರ್ಯ ಅಭಿವೃದ್ಧಿಗೆ ₹ 3,000 ಕೋಟಿಯ "ಕಾಮಧೇನು ಅನುದಾನ".
- ಗ್ರಾಮೀಣ ಪ್ರದೇಶಗಳಲ್ಲಿ ದನಕರುಗಳು ಮತ್ತು ಇತರ ಪ್ರಾಣಿಗಳಿಗೆ ಕರ್ನಾಟಕ ಹಾಲು ಒಕ್ಕೂಟದ ಮೂಲಕ ಪಶುವೈದ್ಯಕೀಯ ಸೇವೆ ಒದಗಿಸಲು ₹ 1,000 ಕೋಟಿ ಮೀಸಲಿಡಲಾಗುವುದು.
- "ಕರ್ನಾಟಕ ಗೋಹತ್ಯೆ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ 2012"ಕ್ಕೆ ಮರು ಚಾಲನೆ.
- ಶ್ರೀ ಬಿ ಎಸ್ ಯಡಿಯೂರಪ್ಪ ಪ್ರಾರಂಭಿಸಿದ್ದ "ಗೋ ಸೇವಾ ಆಯೋಗ" ಪುನರಾರಂಭ.
- ಹಾಲು ಉತ್ಪಾದನೆಯನ್ನು ಪ್ರಸ್ತುತ 77 ಲಕ್ಷ ಲೀಟರ್‌ಗಳಿಂದ 1 ಕೋಟಿ ಲೀಟರ್‌ಗೆ ಏರಿಕೆ.
- ರೇಷ್ಮೆ ಬೆಳೆಗೆ 1,000 ಚದರ ಅಡಿ ಯೂನಿಟ್‌ಗೆ ₹ 75,000 ದಿಂದ ₹ 3 ಲಕ್ಷಕ್ಕೆ ಸಬ್ಸಿಡಿ ದರ ಏರಿಸಲಾಗುವುದು ಹಾಗೂ ಕೆಳಗಿನ ಯೂನಿಟ್‌ಗೆ ಅನುಗುಣವಾಗಿ ಸಬ್ಸಿಡಿ ದರ ಏರಿಕೆ.

## ಮಹಿಳಾ ಸಬಲೀಕರಣ

- ಮಹಿಳೆಯರೇ ನಡೆಸುವ ಅತಿದೊಡ್ಡ ಸಹಕಾರಿ ಸಂಸ್ಥೆ ಸ್ಥಾಪಿಸಿ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಅದರ ಉತ್ಪನ್ನಗಳನ್ನು ಮಾರಾಟ ಮಾಡುವ ಮಳಿಗೆಗಳ ನಿರ್ಮಾಣಕ್ಕೆ ₹ 10,000 ಕೋಟಿ. ಇದಕ್ಕಾಗಿ "ಸ್ತ್ರೀ ಉನ್ನತಿ ನಿಧಿ".
- ಸ್ತ್ರೀಶಕ್ತಿ ಮತ್ತು ಸ್ವಸಹಾಯ ಸಂಘಗಳ ಮಹಿಳೆಯರಿಗೆ ಶೇಕಡಾ 1 ರ ಬಡ್ಡಿದರದಲ್ಲಿ ₹ 2 ಲಕ್ಷದ ವರೆಗೆ ಸಾಲ.
- ₹ 100 ಕೋಟಿಯ "ಕರ್ನಾಟಕ ಮಹಿಳಾ ಎಂಟರ್‌ಪ್ರೈಸಸ್ ಕ್ಲಸ್ಟರ್ ಪ್ರೋಗ್ರಾಮ್" ಸ್ಥಾಪನೆ ಮತ್ತು ಅದರ ಅಡಿಯಲ್ಲಿ ಮಹಿಳೆಯರಿಂದ ನಡೆಸಲ್ಪಡುವ ವ್ಯಾಪಾರ ಬೆಂಬಲಕ್ಕೆ 30 ಹೊಸ MSME ಮಿನಿ ಕ್ಲಸ್ಟರ್‌ಗಳ ಸ್ಥಾಪನೆ.
- ಹೈನುಗಾರಿಕಾ ಕ್ಷೇತ್ರದಲ್ಲಿ ಮಹಿಳೆಯರ ಪ್ರೋತ್ಸಾಹಕ್ಕಾಗಿ ₹ 100 ಕೋಟಿ ನಿಧಿ ಮೀಸಲಿಡಲಾಗುವುದು.
- "ಮುಖ್ಯಮಂತ್ರಿ ಸ್ಮಾರ್ಟ್‌ಫೋನ್ ಯೋಜನೆ" ಅಡಿ ಬಿಪಿಎಲ್ ಕುಟುಂಬದ ಮಹಿಳೆಯರಿಗೆ ಉಚಿತ ಸ್ಮಾರ್ಟ್‌ಫೋನ್.
- "ಸ್ತ್ರೀ ಸುವಿಧಾ" ಯೋಜನೆಯಡಿ ಬಿಪಿಎಲ್ ಕುಟುಂಬದ ಮಹಿಳೆಯರು, ವಿದ್ಯಾರ್ಥಿನಿಯರಿಗೆ ಉಚಿತ ನ್ಯಾಪ್ಕಿನ್, ಉಳಿದ ಮಹಿಳೆಯರಿಗೆ ₹ 1 ಕ್ಕೆ ಸ್ಯಾನಿಟರಿ ನ್ಯಾಪ್ಕಿನ್ ನೀಡಲಾಗುವುದು.
- ಭಾಗ್ಯಲಕ್ಷ್ಮೀ ಯೋಜನೆಯಡಿ ಹೆಣ್ಣುಮಕ್ಕಳಿಗೆ ನೀಡುವ ಮೊತ್ತ ₹ 2 ಲಕ್ಷಕ್ಕೆ ಹೆಚ್ಚಳ.
- "ವಿವಾಹ ಮಂಗಳ" ಯೋಜನೆ ಅಡಿ ಬಿಪಿಎಲ್ ಕುಟುಂಬದ ಯುವತಿಯರ ಮದುವೆಗೆ ₹ 25,000 ಮತ್ತು 3 ಗ್ರಾಂ ಚಿನ್ನದ ತಾಳಿ.
- ಮಹಿಳೆಯರ ಮೇಲಿನ ಇತ್ಯರ್ಥಗೊಳ್ಳದ ದೌರ್ಜನ್ಯ ಪ್ರಕರಣಗಳ ತನಿಖೆಗೆ ಮಹಿಳಾ ಪೊಲೀಸ್ ಅಧಿಕಾರಿಯ ನೇತೃತ್ವದಲ್ಲಿ 1,000 ಮಹಿಳಾ ಪೊಲೀಸ್ ಸಿಬ್ಬಂದಿ ಇರುವ ವಿಶೇಷ ತನಿಖಾ ತಂಡ ರಚನೆ.

## ಉಜ್ವಲ ಭವಿಷ್ಯದೆಡೆಗೆ ಕರ್ನಾಟಕದ ಯುವಜನತೆ

- ಕೌಶಲ್ಯಾಭಿವೃದ್ಧಿ, ಸ್ವಯಂ ಉದ್ಯೋಗ, ಉದ್ಯೋಗ ಸೃಷ್ಟಿ ಮೂಲಕ ಪ್ರತಿಯೊಬ್ಬರಿಗೂ ಉತ್ತಮ ಉದ್ಯೋಗಾವಕಾಶ.
- ರಾಜ್ಯದಲ್ಲಿ 60 'ನಮ್ಮ ಎಂಎಸ್ಎಂಇ ಸಂಕೀರ್ಣ' ಸ್ಥಾಪನೆ. ಎಂಎಸ್ಎಂಇ ಉದ್ದಿಮೆ ಸ್ಥಾಪಿಸಿ ಉದ್ಯೋಗಾವಕಾಶ ಸೃಷ್ಟಿಸಲು ಸ್ಥಳೀಯ ಉದ್ಯಮಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ₹ 250 ಕೋಟಿ.
- "ಮುಖ್ಯಮಂತ್ರಿ ಲ್ಯಾಪ್‌ಟಾಪ್" ಯೋಜನೆಯಡಿ ಕಾಲೇಜಿಗೆ ಸೇರುವ ಪ್ರತಿ ವಿದ್ಯಾರ್ಥಿಗೆ ಉಚಿತ ಲ್ಯಾಪ್ ಟಾಪ್.
- ಹುಬ್ಬಳ್ಳಿ, ಬೆಂಗಳೂರು, ರಾಯಚೂರು, ಕಲಬುರಗಿ, ಮೈಸೂರು, ಮಂಗಳೂರಿನಲ್ಲಿ ಸ್ಟಾರ್ಟ್‌ಅಪ್ ಕಂಪನಿಗಳಿಗೆ ಸ್ಥಳಾವಕಾಶ ಇನ್ನಿತರ ಸೌಲಭ್ಯಗಳಿರುವ 6 "ಕೆ-ಹಬ್"ಗಳ ಸ್ಥಾಪನೆ.
- ಸರ್ಕಾರಿ ಶಾಲೆ ಹಾಗೂ ಕಾಲೇಜುಗಳಲ್ಲಿ ಕ್ರೀಡಾ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ₹ 100 ಕೋಟಿ ನಿಧಿ.
- ಪ್ರತಿ ತಾಲೂಕಿನಲ್ಲಿ ಅಥ್ಲೆಟಿಕ್ ಟ್ರ್ಯಾಕ್, ಈಜುಕೊಳ, ಒಳಾಂಗಣ ಕ್ರೀಡಾಂಗಣದಂಥ ಸೌಲಭ್ಯಗಳಿರುವ ಯುವ ಸಮುದಾಯ ಕೇಂದ್ರಗಳ ಅಭಿವೃದ್ಧಿ.

## ಎಲ್ಲರ ಜೊತೆಗೆ ಎಲ್ಲರ ವಿಕಾಸ

- ಎಲ್ಲರಿಗೂ ಆಹಾರ ಒದಗಿಸುವ "ಅನ್ನದಾಸೋಹ ಯೋಜನೆ". ಬಿಪಿಎಲ್ ಕಾರ್ಡುದಾರರಿಗೆ ಆಯಾ ಪ್ರದೇಶಕ್ಕೆ ತಕ್ಕಂತೆ ಆಹಾರ ಧಾನ್ಯ ವಿತರಣೆ ಮತ್ತು ಎಪಿಎಲ್ ಕಾರ್ಡುದಾರರಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯ ವಿತರಣೆ.
- ಕೈಗೆಟುಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಆಹಾರ ಒದಗಿಸಲು 300ಕ್ಕಿಂತಲೂ ಹೆಚ್ಚು "ಮುಖ್ಯಮಂತ್ರಿ ಅನ್ನಪೂರ್ಣ ಕ್ಯಾಂಟೀನ್"ಗಳ (ಜಿಲ್ಲಾ ಕೇಂದ್ರಗಳಲ್ಲಿ 3 ಮತ್ತು ಪ್ರತಿ ತಾಲೂಕು ಕೇಂದ್ರದಲ್ಲಿ 1) ಸ್ಥಾಪನೆ.
- ಅಸ್ತಿತ್ವದಲ್ಲಿರುವ ಎಲ್ಲಾ ಎಸ್‌ಟಿ ವಿದ್ಯಾರ್ಥಿ ವೇತನ ಹೆಚ್ಚಿಸಲು, 400 ಎಸ್‌ಟಿ ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವಂತಾಗಲು ಮತ್ತು ರಾಷ್ಟ್ರೀಯ ಖ್ಯಾತಿಯ ಸಂಸ್ಥೆಗಳಲ್ಲಿ ಸೇರ್ಪಡೆಯಾದ ಎಸ್‌ಟಿ ವಿದ್ಯಾರ್ಥಿಗಳ ಶುಲ್ಕ ಪಾವತಿಗೆ ₹ 1,500 ಕೋಟಿ ಮೊತ್ತದ "ಮಹರ್ಷಿ ವಾಲ್ಮೀಕಿ ವಿದ್ಯಾರ್ಥಿವೇತನ ಯೋಜನೆ".
- ಪ್ರಸ್ತುತ ಇರುವ ಎಲ್ಲಾ ಎಸ್‌ಸಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಹೆಚ್ಚಿಸಲು, 600 ಎಸ್‌ಸಿ ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಸಹಕಾರಿಯಾಗಲು ₹ 3,000 ಕೋಟಿ ಮೊತ್ತದ "ಬಾಬು ಜಗಜೀವನ ರಾಮ್ ವಿದ್ಯಾರ್ಥಿವೇತನ ಯೋಜನೆ".
- 8ನೇ ತರಗತಿಯಲ್ಲಿ ಉತ್ತೀರ್ಣರಾದ ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಗಳಿಗೆ ₹ 500, 9ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ₹ 750, 10ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ₹ 1,000 ಒಂದು ಬಾರಿಯ ನಗದು ಬಹುಮಾನ.
- "ಮದಕರಿ ನಾಯಕ ವಸತಿ ಯೋಜನೆ"ಯಡಿ ಎಸ್‌ಟಿ ಸಮುದಾಯಗಳಿಗೆ ವಸತಿ ನಿರ್ಮಿಸಲು ₹ 6,500 ಕೋಟಿ ಮೀಸಲು.
- ₹ 8,500 ಕೋಟಿ ಮೊತ್ತದ 'ಮಾದಾರ ಚೆನ್ನಯ್ಯ ವಸತಿ ಯೋಜನೆ'ಯಡಿ ಎಸ್‌ಸಿ ಸಮುದಾಯಗಳಿಗೆ ಆಧುನಿಕ ಮನೆಗಳ ನಿರ್ಮಾಣ.
- ಡಾ. ಭೀಮರಾವ್ ರಾಮ್ ಜೀ ಅಂಬೇಡ್ಕರ್ ಅವರ ಬದುಕಿನ ಜತೆ ಸಂಬಂಧ ಹೊಂದಿರುವ ಸ್ಥಳಗಳಾದ ಮೌವ್, ನಾಗಪುರ, 26 ಅಲಿಪುರ ರಸ್ತೆ (ದೆಹಲಿ), ದಾದರ್ ಮತ್ತು ಲಂಡನ್ ಮುಂತಾದೆಡೆ ಭೇಟಿ ನೀಡಲು "ಡಾ. ಭೀಮರಾವ್ ರಾಮ್ ಜೀ ಅಂಬೇಡ್ಕರ್ ತೀರ್ಥಸ್ಥಳ ಯಾತ್ರೆ" ನಿಧಿಗೆ ಹಣ ಮೀಸಲಿಡಲಾಗುವುದು.
- ಸಾಂಪ್ರದಾಯಿಕ ಕಸುಬುಗಳನ್ನು ಲಾಭದಾಯಕವನ್ನಾಗಿಸಲು ಮತ್ತು ಸಾಂಪ್ರದಾಯಿಕ ಕಸುಬು ನಡೆಸುವವರ ಕಲ್ಯಾಣಕ್ಕಾಗಿ "ಒಬಿಸಿ ನಿಧಿ"ಯಡಿ ₹ 1,000 ಕೋಟಿ ಹಣ.
- ಒಬಿಸಿಗಳಿಗೆ ಆಧುನಿಕ ಸೌಲಭ್ಯ ಹೊಂದಿರುವ ವಸತಿ ಸಂಕೀರ್ಣಗಳನ್ನು ನಿರ್ಮಿಸಲು ₹ 7500 ಕೋಟಿ ಮೊತ್ತ ನಿಗದಿ.
- ನಮ್ಮ ಸರಕಾರ ರಚನೆಯಾದ 3 ತಿಂಗಳೊಳಗೆ ನೇಕಾರರ ₹ 1 ಲಕ್ಷದವರೆಗೆ ಸಾಲ ಮನ್ನಾ ಮಾಡಲಾಗುವುದು.
- ತಿಗಳ, ಸವಿತಾ ಸಮಾಜ, ಈಡಿಗ, ಬಿಲ್ಲವ ಹಾಗೂ ಯಾದವ ಸಮುದಾಯಗಳ ಕಲ್ಯಾಣಕ್ಕಾಗಿ ಕಲ್ಯಾಣ ಮಂಡಳಿ/ಅಭಿವೃದ್ಧಿ ನಿಗಮ ಸ್ಥಾಪನೆ.
- ಪ್ರತಿ ವರ್ಷ ಅಮರಶಿಲ್ಪಿ ಜಕಣಾಚಾರಿ ಜಯಂತಿ.

## ದಕ್ಷ ಆಡಳಿತ ಸುರಕ್ಷಿತ ಕರ್ನಾಟಕ

- ಕರ್ನಾಟಕ ಜ್ಞಾನ ಆಯೋಗ ಮತ್ತು ರಾಜ್ಯ ಯೋಜನಾ ಮಂಡಳಿ ಬದಲಿಸಿ ಕೀರ್ತಿ(KIRTI) ಆಯೋಗದ ಸ್ಥಾಪನೆ ಮಾಡಲಾಗುವುದು.
- ಕಾಂಗ್ರೆಸ್ ಸರ್ಕಾರ ದುರ್ಬಲಗೊಳಿಸಿದ್ದ ಸಕಾಲ ಕಾಯಿದೆಯನ್ನು ಬಲಪಡಿಸಿ ಸಕಾಲ ಕಾಯಿದೆಯ ವ್ಯಾಪ್ತಿಯನ್ನು ಎಲ್ಲಾ ಸರಕಾರಿ ಸೇವೆಗಳಿಗೆ ವಿಸ್ತರಿಸಲಾಗುವುದು.
- ಮೂಲಸೌಕರ್ಯ ಯೋಜನೆಗಳ ತ್ವರಿತ ಅನುಷ್ಠಾನಕ್ಕಾಗಿ ಮುಖ್ಯಮಂತ್ರಿ ಕಚೇರಿಯ ಅಡಿಯಲ್ಲಿ "ನವ ಕರ್ನಾಟಕ ನಿರ್ಮಾಣ ಟಾಸ್ಕ್ ಫೋರ್ಸ್" ರಚಿಸಲಾಗುವುದು.
- ಸಿ ಮತ್ತು ಡಿ ವರ್ಗದ ನೌಕರರ ನೇಮಕಾತಿ ಪ್ರಕ್ರಿಯೆಯಲ್ಲಿ ಸಂದರ್ಶನ ರದ್ದುಗೊಳಿಸಲಾಗುವುದು.
- ಸರಕಾರ ಅಸ್ತಿತ್ವಕ್ಕೆ ಬಂದ 100 ದಿನಗಳ ಒಳಗಾಗಿ ಕಾಂಗ್ರೆಸ್ ಸರ್ಕಾರದ ಆರ್ಥಿಕ ನಿರ್ವಹಣೆ ಕುರಿತ ಶ್ವೇತ ಪತ್ರವನ್ನು ಬಿಡುಗಡೆ ಮಾಡಲಾಗುವುದು.
- ನಮ್ಮ ಮೊದಲ ಸಂಪುಟ ಸಭೆಯಲ್ಲಿ ಲೋಕಾಯುಕ್ತವನ್ನು ಅದರ ಸಂಪೂರ್ಣ ಅಧಿಕಾರದೊಂದಿಗೆ ಮರುಸ್ಥಾಪನೆಗೊಳಿಸಲಾಗುವುದು.
- ಭ್ರಷ್ಟಾಚಾರದ ವಿರುದ್ಧ ದೂರು ನೀಡಲು ನಾಗರಿಕರಿಗೆ ಸಹಾಯವಾಗುವಂತೆ ನೇರವಾಗಿ ಮುಖ್ಯಮಂತ್ರಿ ಕಚೇರಿ ಅಡಿಯಲ್ಲಿ 24x7 "ಭ್ರಷ್ಟಾಚಾರ ವಿರೋಧಿ ಸಹಾಯವಾಣಿ" ಪ್ರಾರಂಭಿಸಲಾಗುವುದು.

- ಭ್ರಷ್ಟಾಚಾರ ಬಹಿರಂಗಪಡಿಸುವವರನ್ನು ರಕ್ಷಿಸಲು ಕರ್ನಾಟಕ ವಿಶಲ್ ಬ್ಲೋವರ್ ಕಾಯಿದೆಯನ್ನು ಜಾರಿಗೊಳಿಸಲಾಗುವುದು.
- ನಮ್ಮ ಸರಕಾರ ಅಧಿಕಾರಕ್ಕೆ ಬಂದ 30 ದಿನದೊಳಗಾಗಿ ರಾಜ್ಯದಲ್ಲಿ ಮರಳು, ಭೂ ಮತ್ತು ಕಾನೂನುಬಾಹಿರ ಗಣಿಗಾರಿಕೆ ಮಾಫಿಯಾ ಮುಂತಾದ ಮಾಫಿಯಾರಾಜ್ ಕೊನೆಗೊಳಿಸಲು ಶಾಶ್ವತ ವಿಶೇಷ ಕಾರ್ಯ ಪಡೆ ಸ್ಥಾಪಿಸಲಾಗುವುದು.
- ನಾಗರಿಕರು, ವಿಶೇಷವಾಗಿ ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರ ಸುರಕ್ಷತೆಯನ್ನು ಹೆಚ್ಚಿಸಲು ರಾಜ್ಯಾದ್ಯಂತ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸುತ್ತೇವೆ.
- ಮಂಗಳೂರಿನಲ್ಲಿ ರಾಷ್ಟ್ರೀಯ ತನಿಖಾ ಏಜೆನ್ಸಿಯ ಕಚೇರಿ ಸ್ಥಾಪನೆಗೆ ಕೇಂದ್ರ ಸರ್ಕಾರಕ್ಕೆ ಸಹಕಾರ.
- ಕೋಮು ಪ್ರಚೋದಿಸುವ ಪಿಎಫ್ಐ ಮತ್ತು ಕೆಎಫ್‌ಡಿ ಮುಂತಾದ ಗುಂಪುಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು.
- ರಾಜ್ಯ ಪೋಲೀಸ್ ಪಡೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡಲಾಗುವುದು.
- ಕೆಳ ನ್ಯಾಯಾಲಯದಲ್ಲಿರುವ ಎಲ್ಲಾ ಹುದ್ದೆಯನ್ನು ತ್ವರಿತವಾಗಿ ಭರ್ತಿ ಮಾಡಲಾಗುವುದು.

## ಶಿಕ್ಷಣ ಕ್ಷೇತ್ರಕ್ಕೆ ನವ ಚೈತನ್ಯ

- "ಕರ್ನಾಟಕ ಶಾಲಾ-ಕಾಲೇಜು ಶುಲ್ಕನಿಯಂತ್ರಣ ಪ್ರಾಧಿಕಾರದ" ಸ್ಥಾಪನೆ.
- ₹ 1,300 ಕೋಟಿ ಅನುದಾನದಲ್ಲಿ ಅಗತ್ಯವಿರುವ ತಾಲೂಕು ಕೇಂದ್ರಗಳಲ್ಲಿ ಹೊಸ ಪದವಿ ಪೂರ್ವ ಕಾಲೇಜುಗಳ ಸ್ಥಾಪನೆ
- ₹ 3,000 ಕೋಟಿಯ "ರಾಷ್ಟ್ರಕವಿ ಕುವೆಂಪು ಜ್ಞಾನ ಯೋಜನೆ"ಯಡಿ 70 ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ನಿರ್ಮಾಣ ಮತ್ತು ಅಸ್ತಿತ್ವದಲ್ಲಿರುವ ಕಾಲೇಜುಗಳು ಮೇಲ್ದರ್ಜೆಗೆ.
- ವೃತ್ತಿಪರ ಕೋರ್ಸುಗಳನ್ನು ಹೊರತುಪಡಿಸಿ ಪದವಿ ಮಟ್ಟದವರೆಗೆ ಎಲ್ಲ ವಿದ್ಯಾರ್ಥಿ- ವಿದ್ಯಾರ್ಥಿನಿಯರಿಗೆ ಸರ್ಕಾರಿ ಕಾಲೇಜುಗಳಲ್ಲಿ ಉಚಿತ ಶಿಕ್ಷಣ.
- ಬಡ ಮತ್ತು ಹಿಂದುಳಿದ ವಿದ್ಯಾರ್ಥಿಗಳ ಅನುಕೂಲಕ್ಕೆ ಅತ್ಯಾಧುನಿಕ ಸೌಲಭ್ಯವಿರುವ 750 ವಸತಿ ನಿಲಯಗಳ ಸ್ಥಾಪನೆ.
- ಜೆಇಇ, ಕ್ಯಾಟ್, ಕೆಪಿಎಸ್ಸಿ ಮತ್ತು ಯುಪಿಎಸ್ಸಿ ಯಂತಹ ಪ್ರವೇಶ ಪರೀಕ್ಷೆ ಬರೆಯುವ ಎಸ್ಸಿ / ಎಸ್ಟಿ / ಒಬಿಸಿ / ಬಿಪಿಎಲ್ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಕೇಂದ್ರಗಳ ಸ್ಥಾಪನೆ.
- ಉನ್ನತ ಶಿಕ್ಷಣ ಪಡೆಯುವ ಬಿಪಿಎಲ್ ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲ. ಪದವಿ ವಿದ್ಯಾರ್ಥಿಗಳಿಗೆ ₹ 3 ಲಕ್ಷ ಮತ್ತು ಉನ್ನತ ಶಿಕ್ಷಣ ವಿದ್ಯಾರ್ಥಿಗಳಿಗೆ ₹ 5 ಲಕ್ಷದವರೆಗೂ ಸಾಲ.

## ಜನರ ಆರೋಗ್ಯ ನಮ್ಮ ಆದ್ಯತೆ

- ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಏಮ್ಸ್ ಮಾದರಿಯಲ್ಲಿ 2 "ಕರ್ನಾಟಕ ರಾಜ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ"ಗಳ ಸ್ಥಾಪನೆ.
- ರಾಜ್ಯದಲ್ಲಿರುವ ಎಲ್ಲಾ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ (CHCs) ಜನೌಷಧಿ ಸ್ಟೋರ್‌ಗಳ ಸ್ಥಾಪನೆ.
- ಎಲ್ಲಾ ಬಡ ಮತ್ತು ದುರ್ಬಲ ವರ್ಗದವರ ಚಿಕಿತ್ಸೆಗಾಗಿ ₹ 5 ಲಕ್ಷ ವಿಮೆ ಒದಗಿಸಲು "ಆಯುಷ್ಮಾನ್ ಕರ್ನಾಟಕ ಯೋಜನೆ" ಜಾರಿ.
- 108 - ತುರ್ತು ವಾಹನ ಸೇವೆಯಡಿ ಇನ್ನಷ್ಟು ಅಂಬುಲೆನ್ಸ್‌ಗಳ ಒದಗಿಸಿ ಅತಿ ಶೀಘ್ರವಾಗಿ ರೋಗಿಗಳನ್ನು ತಲುಪುವಂತೆ ಮಾಡಲಾಗುವುದು.
- ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ "ಆಯುಶ್ ಆರೋಗ್ಯ" ಕೇಂದ್ರ.
- ಎಲ್ಲಾ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಮಕ್ಕಳಿಗೆ ಸೀತಾಳ ಸಿಡುಬು, ಹೆಪಟೈಟಿಸ್ ಎ, ನ್ಯುಮೋನಿಯಾಗೆ ಉಚಿತ ಲಸಿಕೆ.
- ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಕನಿಷ್ಟ 1 ಸರ್ಕಾರಿ ವೈದ್ಯಕೀಯ ಕಾಲೇಜು ಇರುವಂತೆ ನೋಡಿಕೊಳ್ಳಲಾಗುವುದು.
- ಆಯುರ್ವೇದ, ನ್ಯಾಚುರೋಪತಿ ಮತ್ತು ಇತರ ಭಾರತೀಯ ವೈದ್ಯಕೀಯ ವ್ಯವಸ್ಥೆಗಳನ್ನೊಳಗೊಂಡ ವಿಶ್ವದರ್ಜೆಯ ಸಮಗ್ರ ಪಠ್ಯಕ್ರಮ ಇರುವ ಹೊಸ ಆಯುಶ್ ವಿಶ್ವವಿದ್ಯಾಲಯ.

## ಮೂಲಭೂತ ಸೌಕರ್ಯಗಳ ವಿಸ್ತರಣೆ

- "ಸೌಭಾಗ್ಯ ಯೋಜನೆ" ಯಡಿಯಲ್ಲಿ ಪ್ರತಿ ಮನೆಗೆ ವಿದ್ಯುತ್ ಸಂಪರ್ಕ ಮತ್ತು 24x7 ವಿದ್ಯುಚ್ಛಕ್ತಿ ಪೂರೈಕೆ.
- ರಾಜ್ಯದಾದ್ಯಂತ ನದಿ ನೀರು ಮತ್ತು ಮೇಲ್ಮೈ ನೀರನ್ನು ಬಳಸಿ ಶುದ್ಧ ಕುಡಿಯುವ ನೀರಿನ ಯೋಜನೆ ರೂಪಿಸಲು ಹಾಗೂ ಜಾರಿಗೊಳಿಸಲು ಪ್ರತ್ಯೇಕ ಸಚಿವಾಲಯ.
- ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಸರಿಯಾದ ಅನುಷ್ಠಾನದ ಮೂಲಕ ರಾಜ್ಯವನ್ನು ಗುಡಿಸಲು ಮತ್ತು ಕೊಳಗೇರಿ ಮುಕ್ತವಾಗಿಸಲು ಪ್ರತ್ಯೇಕ ಸಚಿವಾಲಯ ರಚಿಸಲಾಗುವುದು.
- ರಾಜ್ಯದ ವಿದ್ಯುತ್ ಉತ್ಪಾದನೆ ಸಾಮರ್ಥ್ಯವನ್ನು 20,000 ಮೆಗಾವ್ಯಾಟ್‌ಗೆ ದುಪ್ಪಟ್ಟುಗೊಳಿಸಿ, ರಾಜ್ಯದ ಸೌರಶಕ್ತಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚುವರಿ 4,000 ಮೆಗಾವ್ಯಾಟ್‌ಗೆ ಏರಿಸಲು ಕ್ರಮ.
- ರಾಜ್ಯದಲ್ಲಿನ ಎಲ್ಲಾ ಪ್ರದೇಶಗಳಿಗೆ ನೀರಿನ ಪೂರಕ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ನೀರಿನ ಸರಬರಾಜಿಗೆಂದು ಗ್ರಿಡ್ ರಚನೆ ಮಾಡಲಾಗುವುದು.
- "ಸ್ವಚ್ಛ ಭಾರತ ಅಭಿಯಾನ"ದಲ್ಲಿ ಪ್ರತಿ ಮನೆಗೂ ಶೌಚಾಲಯದ ನಿರ್ಮಾಣ.
- ರಾಜ್ಯದ ಎಲ್ಲ ಜಿಲ್ಲೆಗಳನ್ನು ಸಂಪರ್ಕಿಸುವ ಷಟ್ಪಥ "ಕರ್ನಾಟಕ ಮಾಲಾ" ಹೆದ್ದಾರಿಯ ನಿರ್ಮಾಣ.

- ಅಸ್ತಿತ್ವದಲ್ಲಿರುವ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಒಂದೇ ವೇದಿಕೆಯಡಿ ತರುವ ನಿಟ್ಟಿನಲ್ಲಿ "ನಾಲ್ವಡಿ ಕೃಷ್ಣರಾಜ ಒಡೆಯರ್ ಗ್ರಾಮೀಣಾಭಿವೃದ್ಧಿ ಮಿಷನ್" ಸ್ಥಾಪನೆ ಮಾಡಿ, ಗ್ರಾಮೀಣ ಪ್ರದೇಶಗಳ ಕುಡಿಯುವ ನೀರು, ನೈರ್ಮಲ್ಯ, ಶಾಲಾ ಮೂಲಸೌಕರ್ಯ, ವಿದ್ಯುತ್ ಆಧುನೀಕರಣ ಮತ್ತು ಆರೋಗ್ಯ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಗಮನ.
- ರಾಜ್ಯದ ಗ್ರಾಮೀಣ ರಸ್ತೆಗಳನ್ನು ಮತ್ತು ಸಾರಿಗೆಯನ್ನು ಸುಧಾರಿಸಲು "ಮುಖ್ಯಮಂತ್ರಿ ಗ್ರಾಮ ರಸ್ತೆ" ಮತ್ತು "ಸಾರಿಗೆ ಮಿಷನ್".
- ಎಟಿಎಂ ಇಲ್ಲದಿರುವ ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಹೊಸ ಮೊಬೈಲ್ ಎಟಿಎಂಗಳಿಗೆ ಚಾಲನೆ ನೀಡಲಾಗುವುದು.
- ನೀರು ಸರಬರಾಜು, ಒಳಚರಂಡಿ ನಿರ್ಮಾಣ, ರಸ್ತೆಗಳು ಮತ್ತು ಸಮಗ್ರ ಸುಧಾರಣೆ ಆಧಾರಿತ ಚೌಕಟ್ಟಿನಲ್ಲಿ ಸಂಚಾರಕ್ಕಾಗಿ "ಮುಖ್ಯಮಂತ್ರಿ ನಗರೋತ್ಥಾನ ಯೋಜನೆ" ಯ ವ್ಯಾಪ್ತಿ ಮತ್ತು ಗಾತ್ರದ ವಿಸ್ತರಣೆ.
- 3 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಎಲ್ಲಾ ಪಟ್ಟಣಗಳಲ್ಲಿ ಪೈಪ್‌ಲೈನ್ ಮೂಲಕ ಅನಿಲ ಪೂರೈಕೆ ಸೌಕರ್ಯ ನಿರ್ಮಾಣ.

# ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಯ ಪುನಶ್ಚೇತನ

- ಯಾವುದೇ ಅಡೆತಡೆ ಇಲ್ಲದೆ, ಸರಾಗವಾಗಿ ಉದ್ಯಮಗಳನ್ನು ನಡೆಸಲು ಏಕಗವಾಕ್ಷಿ ವ್ಯವಸ್ಥೆಯ ಸುಧಾರಣೆ.
- ದೊಡ್ಡ ಮಟ್ಟದ ಸಂಸ್ಥೆಗಳಾಗಿ ಬೆಳೆದ ನಂತರವೂ ಸಣ್ಣ ಹಾಗೂ ಅತಿಸಣ್ಣ ಉದ್ದಿಮೆಗಳಿಗೆ ನೀಡುವ ಸೌಲಭ್ಯಗಳನ್ನು ಮೂರು ವರ್ಷಗಳ ಕಾಲ ಮುಂದುವರಿಸಲಾಗುವುದು.
- ಮಾನವ ಸಂಪನ್ಮೂಲ ಆಧಾರಿತ ಕೈಗಾರಿಕೆಗಳಲ್ಲಿ ಹೊಸ ಉದ್ಯೋಗ ಸೃಷ್ಟಿಗೆ ಒತ್ತು ನೀಡಲು "ಸರ್ ಎಂ. ವಿಶ್ವೇಶ್ವರಯ್ಯ ಉದ್ಯೋಗ ಯೋಜನೆ" ಯನ್ನು ಜಾರಿ ಮಾಡಲಾಗುವುದು.
- ಹೊಸ ಮರಳು ಗಣಿಗಾರಿಕೆ ನೀತಿ ಹಾಗೂ ಮರಳು ಗಣಿಗಾರಿಕೆ ನಿಯಂತ್ರಣ ಹಾಗೂ ಹಂಚಿಕೆಗೆ ಸೂಕ್ತ ಕ್ರಮ.
- ನಷ್ಟದಲ್ಲಿರುವ ಎಂಎಸ್‌ಎಂಇಗಳನ್ನು ಗುರುತಿಸಿ ಅವುಗಳ ಪುನಶ್ಚೇತನಕ್ಕೆ ಕ್ರಮ ಸೂಚಿಸಲು "ಎಂಎಸ್‌ಎಂಇ ಪುನಶ್ಚೇತನ ಕಾರ್ಯಪಡೆ" ರಚನೆ ಮಾಡಲಾಗುವುದು.
- ಸಣ್ಣ ವ್ಯಾಪಾರಿಗಳ ಕಲ್ಯಾಣಕ್ಕಾಗಿ ₹ 500 ಕೋಟಿ ಮೊತ್ತದ "ಸಣ್ಣ ವ್ಯಾಪಾರಿ ಕಲ್ಯಾಣ ನಿಧಿ" ಸ್ಥಾಪನೆ ಮಾಡಲಾಗುವುದು. ಈ ನಿಧಿಯಿಂದ ಸುಧಾರಿತ ತಂತ್ರಜ್ಞಾನ ಅಳವಡಿಕೆ, ಉತ್ತಮ ಮಾರುಕಟ್ಟೆ ಸೃಷ್ಟಿಗೆ ಬಡ್ಡಿರಹಿತ ಸಾಲ ಸೌಲಭ್ಯ ಹಾಗೂ ಅಗತ್ಯ ಬಂಡವಾಳ ಹೂಡಿಕೆಗೆ ಕಡಿಮೆ ಬಡ್ಡಿ ದರದ ಅಲ್ಪಾವಧಿ ಸಾಲ ಸೌಲಭ್ಯ ನೀಡಲಾಗುವುದು.

# ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ

- ದೇವಸ್ಥಾನಗಳ ಆದಾಯವನ್ನು ಸಂಪೂರ್ಣವಾಗಿ ದೇವಸ್ಥಾನಗಳ ಖರ್ಚು ವೆಚ್ಚ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಮಾತ್ರ ಮೀಸಲಿಡಲಾಗುವುದು.
- ದೇವಸ್ಥಾನಗಳ ಪುನರುಜ್ಜೀವನ ಹಾಗೂ ಪುನರುತ್ಥಾನಕ್ಕಾಗಿ ಮತ್ತು ಮಠಗಳ ಮೂಲಸೌಕರ್ಯಕ್ಕಾಗಿ ಆರಂಭಿಕ ₹ 500 ಕೋಟಿಯ ಮೂಲನಿಧಿಯೊಂದಿಗೆ "ದೇವಾಲಯ ಪುನರುತ್ಥಾನ ನಿಧಿ"ಗೆ ಚಾಲನೆ ನೀಡಲಾಗುವುದು.
- ಕನ್ನಡ ಮಾತನಾಡಲು ಬಾರದ ವಿದ್ಯಾರ್ಥಿಗಳು ಸುಲಭವಾಗಿ ಸಮ್ಮಿಳಿತಗೊಳ್ಳಲು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕನ್ನಡವನ್ನು ಕಡ್ಡಾಯ ಪರೀಕ್ಷಾ ರಹಿತ ಪ್ರಾಸ್ತಾವಿಕ ವಿಷಯವಾಗಿ ಅಳವಡಿಸಲಾಗುವುದು.
- ಕರ್ನಾಟಕದ ಸಂಸ್ಕೃತಿ, ಪ್ರದರ್ಶನ ಕಲೆ, ಮತ್ತು ಕಲಾ ಸಂಸ್ಕೃತಿಯ ಸಂಭ್ರಮಾಚರಣೆಗಾಗಿ ದಸರಾ ಉತ್ಸವದ ಸಂದರ್ಭದಲ್ಲಿ ಪ್ರತಿ ವರ್ಷ ಮೈಸೂರಿನಲ್ಲಿ "ನವ ಕರುನಾಡೋತ್ಸವ" ಹೆಸರಿನ ಬೃಹತ್ ಸಾಂಸ್ಕೃತಿಕ ಮೇಳ ಆಯೋಜಿಸಲಾಗುವುದು.
- ಬರಹಗಾರರು, ಕವಿಗಳು ಮತ್ತು ಇತರ ಸಾಹಿತ್ಯಿಕ ವ್ಯಕ್ತಿಗಳ ಬೆಂಬಲಕ್ಕಾಗಿ ಹಾಗೂ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರಲು ನಿಧಿ ನೀಡಲಾಗುವುದು.
- ಅನುಭವ ಮಂಟಪದ ಮಾದರಿಯಲ್ಲಿ ಜಗಜ್ಯೋತಿ ಬಸವೇಶ್ವರರ ಬದುಕು, ಸಾಧನೆಗಳು ಮತ್ತು ಸಾಮಾಜಿಕ ಬದಲಾವಣೆ ಕುರಿತು ಪ್ರಚಾರ ಮಾಡಲು ಅಂತಾರಾಷ್ಟ್ರೀಯ ಕೇಂದ್ರ ಸೇರಿದಂತೆ ಬಸವ ಕಲ್ಯಾಣದಲ್ಲಿ ಭವ್ಯ ಸ್ಮಾರಕ ನಿರ್ಮಿಸಲಾಗುವುದು.
- ಚಿತ್ರದುರ್ಗದಲ್ಲಿ "ವೀರ ಮದಕರಿ ನಾಯಕ" ಸ್ಮಾರಕ ನಿರ್ಮಿಸಲಾಗುವುದು
- ಚಿತ್ರದುರ್ಗದಲ್ಲಿ "ವೀರ ವನಿತೆ ಒನಕೆ ಓಬ್ಬವ್ವ" ಸ್ಮಾರಕ ನಿರ್ಮಿಸಲಾಗುವುದು
- ದೇವನಹಳ್ಳಿಯಲ್ಲಿ "ಡಾ ರಾಜ್ ಕುಮಾರ್ ಮೆಗಾ ಫಿಲ್ಮ್ ಸಿಟಿ" ಹೆಸರಿನಲ್ಲಿ ವಿಶ್ವ ದರ್ಜೆಯ ಫಿಲ್ಮ್ ಸಿಟಿ ನಿರ್ಮಾಣ.
- ಕನ್ನಡ ಚಿತ್ರ ರಂಗದಲ್ಲಿ ದುಡಿಯುತ್ತಿರುವ ಸಿನೆಮಾ ಕಲಾವಿದರ ಕಲ್ಯಾಣಕ್ಕಾಗಿ "ಪುಟ್ಟಣ್ಣ ಕಣಗಾಲ್ ಮೂಲ ನಿಧಿ".
- ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ₹ 2,500 ಕೋಟಿ ಅನುದಾನ ನೀಡಲಾಗುವುದು.
- ದೇಗುಲ ದರ್ಶನ, ಕರಾವಳಿ ಪ್ರವಾಸೋದ್ಯಮ, ಪರಿಸರ, ಪಾರಂಪರಿಕ, ಅನುಭವ, ಆರೋಗ್ಯ, ಆಹಾರ ಪ್ರವಾಸೋದ್ಯೋಮದ ಪ್ರವರ್ತನೆಗೆ "ವಿಶೇಷ ಪ್ರವಾಸೋದ್ಯಮ ವಲಯ"ಗಳ ಅಭಿವೃದ್ಧಿ.

# ರಾಜ್ಯದ ಎಲ್ಲಾ ವಲಯಗಳ ಸಮಾನ ಅಭಿವೃದ್ಧಿ

- ವಿಧಿ 371 (ಜೆ) ಪ್ರಕಾರ ನೀಡಲಾದ ವಿಶೇಷ ಸ್ಥಾನಮಾನ ಸಂಬಂಧಿತ ಸಮಗ್ರ ಬೆಳಣಿಗೆಗೆ ಕೇಂದ್ರ ಸರ್ಕಾರ ನೀಡುವ ನಿಧಿಯನ್ನು ಸಂಪೂರ್ಣವಾಗಿ ಬಳಸಲಾಗುವುದು.

- ವಿಧಿ 371 (ಜೆ) ಆಧಾಲಿತ ವಿಶೇಷ ಸ್ಥಾನಮಾನ ಸಂಬಂಧಿತ ಹೈದರಾಬಾದ್ ಕರ್ನಾಟಕ ವಲಯದ ಆಯ್ದ ಒಂದು ಜಿಲ್ಲಾ ಕೇಂದ್ರದಲ್ಲಿ ವಿಶೇಷ ಕೈಗಾರಿಕಾ ಹೂಡಿಕೆ ಸಮ್ಮೇಳನವನ್ನು ಎರಡು ವರ್ಷಗಳಿಗೊಮ್ಮೆ ಆಯೋಜಿಸುವ ಮೂಲಕ ಆ ಪ್ರದೇಶಕ್ಕೆ ಹೂಡಿಕೆಯನ್ನು ಆಕರ್ಷಿಸಲಾಗುವುದು.

- ಹೊಸಪೇಟೆಯಿಂದ ಹೈದರಾಬಾದ್‌ವರೆಗಿನ ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ ಮತ್ತು ಬೀದರ್ ಮೂಲಕ ಹಾದುಹೋಗುವ "ಹೈದರಾಬಾದ್ ಕರ್ನಾಟಕ ಕೈಗಾರಿಕಾ ಮೆಗಾ ಕಾರಿಡಾರ್" ಅನ್ನು ಸ್ಥಾಪಿಸಲಾಗುವುದು.

- ರಾಜ್ಯದ ಎಲ್ಲ ಪ್ರಾಂತ್ಯಗಳ ಅಭಿವೃದ್ಧಿಯಲ್ಲಿ ಸಮಾನತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ"30 ಜಿಲ್ಲೆಗಳ- 30 ಹಬ್" ಮೆಗಾ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗುವುದು. ಪ್ರತಿ ಹಬ್ ನಿರ್ದಿಷ್ಟ ಮತ್ತು ತುಲನಾತ್ಮಕ ಪ್ರಯೋಜನವಿರುವ ಉದ್ಯಮವನ್ನು ಅಭಿವೃದ್ಧಿಪಡಿಸುವ ಬಗ್ಗೆ ಗಮನಹರಿಸಲಿದೆ.

# ಸ್ವಚ್ಛ ಮತ್ತು ಹಸಿರು ಕರ್ನಾಟಕ

- ಅರಣ್ಯ ಪ್ರದೇಶದ ಒತ್ತುವರಿಯನ್ನು ತಡೆಗಟ್ಟುವ ಮೂಲಕ ಕಾಡು ಪ್ರಾಣಿಗಳು ನಾಡಿಗೆ ನುಗ್ಗದಂತೆ ತಡೆಯಲಾಗುವುದು. ಕಾಡುಪ್ರಾಣಿಗಳಿಂದ ನಾಗರಿಕರನ್ನು ರಕ್ಷಣೆ ಮಾಡುವುದು ಮತ್ತು ತೊಂದರೆಗೊಳಗಾದ ನಾಗರಿಕರಿಗೆ ಸೂಕ್ತ ಪರಿಹಾರವನ್ನು ನೀಡಲಾಗುವುದು.

- ನಮ್ಮ ಕಾಡುಗಳ ರಕ್ಷಣೆ, ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ "ಜಿಯೋಸ್ಪೇಷಿಯಲ್ ತಾಂತ್ರಿಕತೆ" ಬಳಕೆ.

- ರಾಜ್ಯದ ಎಲ್ಲಾ ನಗರ ಕೇಂದ್ರಗಳಲ್ಲಿ "ಮಾಲಿನ್ಯ ರಹಿತ ನಗರ" ಅಭಿಯಾನ ಕೈಗೊಳ್ಳುವುದು ಮತ್ತು ವೈಜ್ಞಾನಿಕ ವಿಧಾನಗಳ ಮೂಲಕ ನಗರ ಪ್ರದೇಶಗಳಲ್ಲಿ ಮಾಲಿನ್ಯ ತಡೆಗಟ್ಟಲು ಸಮಯ ಮಿತ ಆಧಾರಿತ ಯೋಜನೆ ರೂಪಿಸಲಾಗುವುದು.

- ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ಲಾಲ್ ಬಾಗ್ ಉದ್ಯಾನದ ಮಾದರಿಯಲ್ಲಿ ಬೃಹತ್ ಉದ್ಯಾನಗಳ ನಿರ್ಮಾಣ.

# ನವ ಬೆಂಗಳೂರಿಗೆ ನಮ್ಮ ವಚನ

- ಬೆಂಗಳೂರನ್ನು ವಿಶ್ವದರ್ಜೆ ನಗರವನ್ನಾಗಿಸಲು ನಗರಕ್ಕೆ ಅತ್ಯಾಧುನಿಕ ಮೂಲಸೌಕರ್ಯ, ಗುಣಮಟ್ಟದ ಜೀವನ ಹಾಗೂ ನಾಗರಿಕರ ಆಶೋತ್ತರಗಳನ್ನು ಈಡೇರಿಸಲು ನಾನಾ ಅವಕಾಶಗಳನ್ನು ಸೃಷ್ಟಿಸಲಾಗುವುದು. ಕರ್ನಾಟಕ ಹಾಗೂ ದೇಶದ ಜನರಿಗಷ್ಟೇ ಅಲ್ಲ ವಿಶ್ವದ ಜನರಿಗೆ ಹೆಮ್ಮೆಯ ನಗರವಾಗಿ ಪರಿವರ್ತಿಸಲಾಗುವುದು.

- ಬೆಂಗಳೂರಿನ ಅಗತ್ಯಗಳನ್ನು ಪೂರೈಸಲು "ನವ ಬೆಂಗಳೂರು ಕಾಯಿದೆ" ಎಂಬ ಹೊಸ ಕಾನೂನು ಜಾರಿಗೊಳಿಸಲಾಗುವುದು.

- ಬೆಂಗಳೂರಿನ ಮಹಾನಗರ ವಲಯದ ಎಲ್ಲಾ ನಗರ ಪ್ರದೇಶಗಳಿಗೆ ಹಂತ ಹಂತವಾಗಿ ಮೆಟ್ರೊ ವಿಸ್ತರಿಸಲಾಗುವುದು.

- ಕೇಂದ್ರ ಸರ್ಕಾರ ಘೋಷಿಸಿದ ₹ 17,000 ಕೋಟಿಗಳನ್ನು ಬಳಸಿ ಬೆಂಗಳೂರಿನ ಉಪನಗರ ರೈಲ್ವೆ ಜಾಲವನ್ನು ಪೂರ್ಣಗೊಳಿಸಲು ಬಿ-ರೈಡ್ (ಬೆಂಗಳೂರು ರೈಲ್ವೆ ಇನ್ಫ್ರಾಸ್ಟ್ರಕ್ಚರ್ ಡೆವಲ್‌ಮೆಂಟ್ ಕಾರ್ಪೋರೇಶನ್) ಸ್ಥಾಪಿಸಲಾಗುವುದು.

- ಬೆಂಗಳೂರಿನಲ್ಲಿ ತೊಂದರೆಯಲ್ಲಿರುವ ಮಹಿಳೆಯರ ಕರೆಗೆ "ಕಿತ್ತೂರು ರಾಣಿ ಚೆನ್ನಮ್ಮ ಫ್ಲೈಯಿಂಗ್ ಸ್ಕ್ವಾಡ್"ನಿಂದ ತಕ್ಷಣವೇ ಸ್ಪಂದಿಸುವ ವ್ಯವಸ್ಥೆ ಮಾಡಲಾಗುವುದು.

- ಬೆಂಗಳೂರಿನ ಕೆರೆಗಳನ್ನು ಸ್ವಚ್ಛಗೊಳಿಸಿ, ಪುನರುಜ್ಜೀವನಗೊಳಿಸಲು ₹ 2,500 ಕೋಟಿ "ನಾಡಪ್ರಭು ಕೆಂಪೇಗೌಡ ನಿಧಿ" ಸ್ಥಾಪನೆ.

- ಬೆಂಗಳೂರನ್ನು "ಕಸ ಮುಕ್ತ" ನಗರವನ್ನಾಗಿ ಮಾಡುವ ಭರವಸೆಯನ್ನು ನಾವು ನೀಡುತ್ತೇವೆ.

- ಬಿಎಂಟಿಸಿ ಬಸ್ ಸಂಖ್ಯೆ ದ್ವಿಗುಣಗೊಳಿಸಲಾಗುವುದು.

# 1



# ರೈತರ ಕಲ್ಯಾಣ ರಾಜ್ಯದ ಕಲ್ಯಾಣ

## ರೈತರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು

### ರೈತರ ಆದಾಯ ದುಪ್ಪಟ್ಟುಗೊಳಿಸುವುದು

- ಅನ್ನದಾತರ ಸಾಲದ ಹೊರೆಯನ್ನು ನೀಗಿಸಲು ನಮ್ಮ ಸರಕಾರ ಬದ್ಧ. ನಮ್ಮ ಸರಕಾರದ ಮೊದಲ ಸಚಿವ ಸಂಪುಟದ ಸಭೆಯಲ್ಲಿಯೇ ರಾಷ್ಟ್ರೀಕೃತ ಬ್ಯಾಂಕು ಮತ್ತು ಸಹಕಾರಿ ಸಂಘಗಳಲ್ಲಿ ಇರುವ ರೈತರ ಬೆಳೆ ಸಾಲವನ್ನು ₹ 1 ಲಕ್ಷದವರೆಗೆ ಮನ್ನಾ ಮಾಡಲಾಗುವುದು.
- 20 ಲಕ್ಷ ಸಣ್ಣ ಮತ್ತು ಅತಿ ಸಣ್ಣ ಒಣ ಭೂಮಿ ರೈತರಿಗೆ ತಲಾ ₹ 10,000 ಆರ್ಥಿಕ ನೆರವು ನೀಡುವುದಕ್ಕಾಗಿ "ನೇಗಿಲ ಯೋಗಿ" ಯೋಜನೆ ತರಲಾಗುವುದು.
- ರೈತರ ಆದಾಯ ದುಪ್ಪಟ್ಟುಗೊಳಿಸುವ ಮಾನ್ಯ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಗುರಿಯಂತೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ - MSP) ರೈತರಿಗೆ ತಾವು ಬೆಳೆದ ಬೆಳೆಗೆ ಒಂದೂವರೆ ಪಟ್ಟು ಆದಾಯ ನೀಡಲಾಗುವುದು.
- ಬೆಲೆ ವ್ಯತ್ಯಯದ ಸಂದರ್ಭದಲ್ಲಿ ರೈತರ ಬೆಂಬಲಕ್ಕಾಗಿ ₹ 5,000 ಕೋಟಿ "ರೈತ ಬಂಧು ಆವರ್ತ ನಿಧಿ" ಸ್ಥಾಪಿಸಲಾಗುವುದು.
- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಉಪಕರಣಗಳನ್ನು ಖರೀದಿಸುವುದಕ್ಕಾಗಿ ಬಡ್ಡಿರಹಿತ ಸಾಲದ ವ್ಯವಸ್ಥೆ ಮಾಡಲಾಗುವುದು.
- ಪ್ರತಿ ಕೃಷಿ ಉತ್ಪಾದನಾ ಸಂಸ್ಥೆಗಳಿಗೆ (ಎಫ್‌ಪಿಒ) ₹ 2 ಲಕ್ಷ ಅನುದಾನ ಮತ್ತು ಎಫ್‌ಪಿಒ ರಚನೆ ಉತ್ತೇಜಿಸುವ ಸಲುವಾಗಿ ಸಾರ್ವಜನಿಕ ದಾಸ್ತಾನು ಖರೀದಿಗಾಗಿ ಶೇ. 15ರಷ್ಟು ಕೋಟಾ ನೀಡಲಾಗುವುದು.
- ನೇರವಾಗಿ ಉತ್ಪನ್ನಗಳ ಮಾರಾಟಕ್ಕೆ ಅನುವಾಗುವಂತೆ ಬೆಂಗಳೂರಿನಲ್ಲಿ 5, ಮಂಗಳೂರು, ಮೈಸೂರು, ಕಲಬುರ್ಗಿ ಮತ್ತು ಹುಬ್ಬಳ್ಳಿ-ಧಾರವಾಡದಲ್ಲಿ ತಲಾ 2 ಮತ್ತು ಉಳಿದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ತಲಾ 1 ರೈತಬಂಧು ಬೃಹತ್ ರೈತ ಮಾರುಕಟ್ಟೆಗಳನ್ನು ನಿರ್ಮಿಸಲಾಗುವುದು.
- ಶ್ರೀ ಬಿ.ಎಸ್ ಯಡಿಯೂರಪ್ಪ ನೇತೃತ್ವದಲ್ಲಿ ಪ್ರಾರಂಭಿಸಲಾದ ಭೂ ಚೇತನ ಯೋಜನೆಯನ್ನು ಬಲಪಡಿಸುವುದು ಹಾಗೂ ಸಾವಯವ ಕೃಷಿಗೆ ಪರಿವರ್ತನೆಗೊಳ್ಳುವವರಿಗೆ ಪ್ರೋತ್ಸಾಹ ಧನದೊಂದಿಗೆ 3 ವರ್ಷಗಳ ಒಪ್ಪಂದ. ಪರಿಸರ ಸ್ನೇಹಿ ಭೂಮಿಯನ್ನು ನೀಡುವ ರೈತರ ಕರಾರು ಮುಂದುವರಿಸುವುದು ಹಾಗೂ ಸೂಕ್ತ ಪ್ರೋತ್ಸಾಹ ಧನ ನೀಡಲಾಗುವುದು.
- ಎಲ್ಲಾ ರೈತರಿಗೆ ಮಣ್ಣಿನ ಆರೋಗ್ಯ ಕಾರ್ಡ್ ವಿತರಣೆ ಮಾಡಿ, ಅದನ್ನು ಭೂ ದಾಖಲೆಯೊಂದಿಗೆ ಜೋಡಣೆ ಮಾಡಲಾಗುವುದು. ಸ್ಥಿರ ಮತ್ತು ಸಂಚಾರಿ ಮಣ್ಣಿನ ಪರೀಕ್ಷಾಲಯಗಳ ಸ್ಥಾಪನೆ ಮಾಡಲಾಗುವುದು.

### ಆಡಳಿತಾತ್ಮಕ ಕ್ರಮಗಳು

- ಕೃಷಿ, ಸಣ್ಣ ನೀರಾವರಿ ಮತ್ತು ಜಲ ಸಂಪನ್ಮೂಲ ಸಚಿವಾಲಯಗಳ ರೈತ ಸ್ನೇಹಿ ಯೋಜನೆಗಳ ಅನುಷ್ಠಾನದ ಸೂಕ್ತ ಮೇಲ್ವಿಚಾರಣೆಗಾಗಿ ಮುಖ್ಯಮಂತ್ರಿ ಕಚೇರಿಯಡಿ "ರೈತಬಂಧು ವಿಭಾಗ" ಸ್ಥಾಪನೆ ಮಾಡಲಾಗುವುದು.
- "ರೈತಬಂಧು ಸೇವೆ" ಎಂಬ ಹೊಸ ಕೃಷಿ ಸೇವಾ ಪಡೆ ಸ್ಥಾಪನೆ ಹಾಗೂ ಅದರ ಅಡಿಯಲ್ಲಿ ರೈತ ಸಂಬಂಧಿ ಯೋಜನೆಗಳ ಮೇಲ್ವಿಚಾರಣೆಗೆ ಪ್ರತಿ ತಾಲೂಕಿಗೆ 5 ಮಂದಿ ಅಧಿಕಾರಿಗಳನ್ನು ನೇಮಿಸಲಾಗುವುದು.
- ರೈತರ ಅಗತ್ಯ ಹಾಗೂ ಕೃಷಿ ಬಗ್ಗೆ ದೂರದೃಷ್ಟಿ ಹೊಂದಿರುವ ನಾಯಕ ಶ್ರೀ ಬಿ. ಎಸ್. ಯಡಿಯೂರಪ್ಪ ಅವರು ಮಂಡಿಸಿದ್ದ ಪ್ರತ್ಯೇಕ ಕೃಷಿ ಬಜೆಟ್ ಮುಂದುವರಿಸಲಾಗುವುದು.
- ಆದಾಯ ಅಸ್ಥಿರತೆಯಿಂದ ರೈತರು ಸಂಕಷ್ಟಕ್ಕೀಡಾಗುವುದನ್ನು ತಪ್ಪಿಸಲು ಸೂಕ್ತ ಸಮಯದಲ್ಲಿ ಬೆಂಬಲ ಬೆಲೆ ಘೋಷಿಸಲಾಗುವುದು.
- ಅನ್ನದಾತರ ಸಂಕಷ್ಟ ನಿವಾರಣೆಗೆ ಪ್ರಧಾನ ಮಂತ್ರಿ ಫಸಲು ವಿಮಾ ಯೋಜನೆಯ ಸೂಕ್ತ ಅನುಷ್ಠಾನ ಕೈಗೊಳ್ಳಲಾಗುವುದು.
- ಕರ್ನಾಟಕದ ರೈತರಿಗೆ ಕೃಷಿ ಬೆಲೆ, ಹೊಸ ಕೃಷಿ ವಿಧಾನಗಳು ಮುಂತಾದ ಮಾಹಿತಿಗಾಗಿ "ರೈತಬಂಧು ಟಿವಿ ಚಾನೆಲ್" ಪ್ರಾರಂಭ ಮಾಡಲಾಗುವುದು.
- ನೇರ ಸಹಾಯಧನ ವರ್ಗಾವಣೆ (ಡಿಬಿಟಿ) ಮೂಲಕ ರೈತರಿಗೆ ನೇರವಾಗಿ ರಸಗೊಬ್ಬರ ಸಬ್ಸಿಡಿ ನೀಡಲಾಗುವುದು.
- ನೇರ ಸಹಾಯಧನ ವರ್ಗಾವಣೆ ಸಾಧ್ಯವಾಗಿಸಲು ರೈತರು ಮತ್ತು ಭೂರಹಿತ ಕಾರ್ಮಿಕರ ಮಾಹಿತಿಕೋಶ (ಡಾಟಾಬೇಸ್) ರೂಪಿಸಿ ರೈತರ ಹಕ್ಕು ಸಂರಕ್ಷಣೆ ಅಭಿಯಾನ ನಡೆಸಲಾಗುವುದು.
- ರೈತರ ವಿರುದ್ಧದ ರಾಜಕೀಯ ಪ್ರೇರಿತ ಕೇಸುಗಳನ್ನು ವಾಪಸ್ ಪಡೆಯಲಾಗುವುದು.

### ಭೂರಹಿತ ರೈತರ ಸಶಕ್ತೀಕರಣ

- ಭೂರಹಿತ ಕೃಷಿ ಕಾರ್ಮಿಕರಿಗೆ ಉಚಿತ ₹ 2 ಲಕ್ಷದಷ್ಟು ಅಪಘಾತ ವಿಮೆ ನೀಡಲು "ಮುಖ್ಯಮಂತ್ರಿ ರೈತ ಸುರಕ್ಷಾ ವಿಮೆ ಯೋಜನೆ" ಪ್ರಾರಂಭಿಸಲಾಗುವುದು.

- ಭೂರಹಿತ ಕೃಷಿ ಕಾರ್ಮಿಕರ ಆದಾಯ ವೃದ್ಧಿಗಾಗಿ ಜಾನುವಾರು ಖರೀದಿಗೆ ಸಬ್ಸಿಡಿ ನೀಡಲಾಗುವುದು.
- ಭೂರಹಿತ ಕೃಷಿ ಕಾರ್ಮಿಕರು ಸರ್ಕಾರಿ ಯೋಜನೆಗಳ ಲಾಭ ಪಡೆಯಲು ಅನುವಾಗುವಂತೆ ಆದ್ಯತೆ ಮೇರೆಗೆ ಎಲ್ಲಾ ದಾಖಲೆಗಳನ್ನು ಒದಗಿಸಲಾಗುವುದು.

## ಕೃಷಿ ಸಂಬಂಧಿತ ಮೂಲಭೂತ ಸೌಕರ್ಯ

- ರಾಜ್ಯದಲ್ಲಿ ಎಲ್ಲಾ ನೀರಾವರಿ ಯೋಜನೆಗಳನ್ನು 2023ರ ಒಳಗೆ ಪೂರ್ಣಗೊಳಿಸಲು ಹಾಗೂ ಹನಿ ನೀರಾವರಿ, ಜಲಕೃಷಿಯಂತಹ ನವೀನ ವಿಧಾನಗಳನ್ನು ಉತ್ತೇಜಿಸುವ ಸಲುವಾಗಿ "ಸುಜಲಾಂ ಸುಫಲಾಂ ಕರ್ನಾಟಕ" ಯೋಜನೆಗೆ ₹ 1.5 ಲಕ್ಷ ಕೋಟಿ ಹಣ ನಿಗದಿಪಡಿಸಲಾಗುವುದು.
- ರೈತರ ಪಂಪ್‌ಸೆಟ್‌ಗೆ ಪ್ರತಿ ದಿನ 10 ಗಂಟೆಗಳ ಕಾಲ ತ್ರೀ ಫೇಸ್ ವಿದ್ಯುತ್ ಪೂರೈಕೆ ಮಾಡಲಾಗುವುದು.
- ಸೌರ ಪಂಪ್‌ಸೆಟ್ ಅಳವಡಿಸಲು ರೈತರಿಗೆ ಶೇ. 100ರಷ್ಟು ಸಬ್ಸಿಡಿ ನೀಡಲಾಗುವುದು.
- ನೀರಾವರಿ ಮತ್ತು ಜಲ ವಿದ್ಯುತ್ ಉತ್ಪಾದನೆಗೆ ಆಲಮಟ್ಟಿ ಅಣೆಕಟ್ಟಿನ ಗರಿಷ್ಠ ಬಳಕೆಗಾಗಿ ಎತ್ತರವನ್ನು 524.25 ಮೀಟರ್‌ಗೆ ಹೆಚ್ಚಿಸುವುದು. ಈ ಯೋಜನೆಯಿಂದ ಸಂಕಷ್ಟಕ್ಕೀಡಾಗುವ ರೈತರಿಗೆ ಮತ್ತು ಇತರ ನಿವಾಸಿಗಳಿಗೆ ಸೂಕ್ತ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಲಾಗುವುದು.
- ರಾಜ್ಯದಲ್ಲಿರುವ ಎಲ್ಲಾ ಕೆರೆಗಳ ಪುನಶ್ಚೇತನಕ್ಕಾಗಿ "ಮಿಶನ್ ಕಲ್ಯಾಣಿ" ಯೋಜನೆ.
- ಒಣ ಮತ್ತು ಮಳೆ ಆಧಾರಿತ ಪ್ರದೇಶಗಳ ಸಂಪನ್ಮೂಲ ಸಂರಕ್ಷಣೆ, ಪುನರ್ ಸೃಷ್ಟಿ ಮತ್ತು ಮಿತ ಬಳಕೆಗೆ ನಬಾರ್ಡ್ ಜತೆ ಸೇರಿ ರಾಜ್ಯಾದ್ಯಂತ 30 ಜಲಾನಯನ ಯೋಜನೆ ಜಾರಿ ಮಾಡಲಾಗುವುದು.
- ಬ್ಲಾಕ್ ಮಟ್ಟದಿಂದ ವಲಯ ಮಟ್ಟದವರೆಗೆ ಸಂಯೋಜಿತ ಶೀತಲೀಕರಣ ಸೌಕರ್ಯ ಜಾಲವನ್ನು ರೂಪಿಸುವ ಮೂಲಕ ಶೀತಲೀಕರಣ ಸಾಮರ್ಥ್ಯವನ್ನು 20 ಲಕ್ಷ ಮೆಟ್ರಿಕ್ ಟನ್‌ಗೆ ಹೆಚ್ಚಿಸಲಾಗುವುದು.
- ಎಲ್ಲಾ ಕೃಷಿ ಮಾರುಕಟ್ಟೆಗಳ ಉನ್ನತೀಕರಣ ಮತ್ತು ಆಧುನೀಕರಣಕ್ಕಾಗಿ "ರೈತ ಬಂಧು ಎಪಿಎಂಸಿ ಉನ್ನತೀಕರಣ ಯೋಜನೆ" ಪ್ರಾರಂಭಿಸಲಾಗುವುದು.
- ವಿಜಯಪುರದಲ್ಲಿ ಮೆಗಾ ಫುಡ್ ಪಾರ್ಕ್ ಸ್ಥಾಪಿಸಿ, ಅದನ್ನು ಆಹಾರ ಸಂಸ್ಕರಣೆಯ ಹಬ್ (ಕೇಂದ್ರ) ಆಗಿ ಅಭಿವೃದ್ಧಿಗೊಳಿಸಲಾಗುವುದು.
- ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯಲ್ಲಿ ಯೋಜಿತ ಫುಡ್ ಪಾರ್ಕ್‌ನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲಾಗುವುದು.
- ಕೋಲಾರ, ಬೆಳಗಾವಿ, ವಿಜಯಪುರ, ಚಿತ್ರದುರ್ಗ ಮತ್ತು ಹಾವೇರಿಯಲ್ಲಿ ಹಣ್ಣು ಮತ್ತು ತರಕಾರಿ ಕೃಷಿ ಸಂಸ್ಕರಣೆ ಸಮುಚ್ಚಯಗಳನ್ನು "ಪ್ರಧಾನಮಂತ್ರಿ ಕಿಸಾನ್ ಸಂಪದ" ಯೋಜನೆಯಡಿ ಅಭಿವೃದ್ಧಿಪಡಿಸಲಾಗುವುದು.

## ಕೃಷಿಯಲ್ಲಿ ಸಂಶೋಧನೆ ಮತ್ತು ತರಬೇತಿ

- ಹರಿಹರ (ದಾವಣಗೆರೆ) ಮತ್ತು ಬೆಳ್ತಂಗಡಿಯಲ್ಲಿ (ದಕ್ಷಿಣ ಕನ್ನಡ) ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ಸ್ಥಾಪನೆ.
- 5 ತೋಟಗಾರಿಕಾ ವಲಯಗಳಾದ ಕೋಲಾರ, ಬೆಳಗಾವಿ, ವಿಜಯಪುರ, ಚಿತ್ರದುರ್ಗ ಮತ್ತು ಹಾವೇರಿ ಜಿಲ್ಲೆಗಳಿಗಾಗಿ "ರೈತ ಬಂಧು ಕೃಷಿ ಸಂಸ್ಕರಣಾ ತಾಂತ್ರಿಕ ತರಬೇತಿ ಕೇಂದ್ರ"ಗಳ ಸ್ಥಾಪನೆ.
- ಕೃಷಿ ಆಧುನೀಕರಣ ಮತ್ತು ಫಸಲು ಹೆಚ್ಚಳ ಹಾಗೂ ವಿಶ್ವ ಗುಣಮಟ್ಟದ ತಾಂತ್ರಿಕತೆ ಅಭಿವೃದ್ಧಿಗಾಗಿ ಎಲ್ಲಾ ಜಿಲ್ಲೆಗಳಲ್ಲಿ "ರೈತ ಬಂಧು ಸಂಶೋಧನಾ ಕೇಂದ್ರ" ಸ್ಥಾಪಿಸಲು ₹ 1,000 ಕೋಟಿ ನಿಧಿ ಮೀಸಲು ಇಡಲಾಗುವುದು.
- ಹೊಸಕೋಟೆಯಲ್ಲಿ ಅತ್ಯಾಧುನಿಕ ವ್ಯವಸ್ಥೆಗಳಿಂದ ಕೂಡಿದ ಹೂವು ಕೃಷಿ ಕೇಂದ್ರದ ಸ್ಥಾಪನೆ ಮಾಡಲಾಗುವುದು.
- ರೈತರ ಮಕ್ಕಳಿಗಾಗಿ ಕೃಷಿ ಮತ್ತು ಈ ಕ್ಷೇತ್ರಕ್ಕೆ ಸಂಬಂಧಿಸಿದ ತರಬೇತಿಗಳನ್ನು ಪಡೆಯುವುದಕ್ಕಾಗಿ ₹ 100 ಕೋಟಿ ಮೊತ್ತದ "ರೈತಬಂಧು ವಿದ್ಯಾರ್ಥಿ ವೇತನ" ನೀಡಲಾಗುವುದು.
- "ಮುಖ್ಯಮಂತ್ರಿಗಳ ಕೃಷಿ ಫೆಲೋಶಿಪ್" ಅಡಿ ಕೃಷಿಯ ಅತ್ಯುತ್ತಮ ಪದ್ಧತಿ ಅರಿಯಲು ಪ್ರತಿ ವರ್ಷ 1,000 ರೈತರ ಇಸ್ರೇಲ್ ಮತ್ತು ಚೀನಾ ಭೇಟಿಗೆ ವ್ಯವಸ್ಥೆ ಕಲ್ಪಿಸಲಾಗುವುದು.

## ನಿಗದಿತ ಬೆಳೆ ಅಭಿವೃದ್ಧಿಗಾಗಿ ಕೇಂದ್ರೀಕೃತ ಯತ್ನ

### ಟೊಮ್ಯಾಟೊ, ಈರುಳ್ಳಿ ಮತ್ತು ಆಲೂಗಡ್ಡೆ (TOP)

- ಟೊಮ್ಯಾಟೊ, ಈರುಳ್ಳಿ ಮತ್ತು ಆಲೂಗಡ್ಡೆ ದರದಲ್ಲಿ ಉಂಟಾಗುವ ಏರುಪೇರು ನಿಭಾಯಿಸಲು "ಟಾಪ್ ಬೆಲೆ ರಕ್ಷಣೆ ನಿಧಿ" ಸ್ಥಾಪನೆ ಮಾಡಲಾಗುವುದು.
- ಹರಿಹರದಲ್ಲಿ ಸ್ಥಾಪನೆಗೊಳ್ಳಲಿರುವ ಕೃಷಿ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ "ಟಾಪ್" ಪೀಠದ ಸ್ಥಾಪನೆ.

### ಕಬ್ಬು

- ರೈತರು, ರಾಜ್ಯ ಸರ್ಕಾರ ಮತ್ತು ಮಿಲ್ ಮಾಲೀಕರ ನಡುವಿನ ತ್ರಿಪಕ್ಷ ಒಪ್ಪಂದದ ಮೂಲಕ ಸರ್ಕಾರ ಅಸ್ತಿತ್ವಕ್ಕೆ ಬಂದ 180 ದಿನಗಳೊಳಗೆ ಸಕ್ಕರೆ ಕಂಪನಿಗಳು ಕಬ್ಬು ಬೆಳೆಯುವ ರೈತರಿಗೆ ನೀಡಲು ಬಾಕಿ ಇರುವ ಮೊತ್ತ ಪಾವತಿಗೆ ವ್ಯವಸ್ಥೆ ಮಾಡಲಾಗುವುದು.

### ಕಾಫಿ ಬೆಳೆಗಾರರು

- ಕಾಫಿ ತೋಟ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಪ್ರತಿ ವರ್ಷ ಕಾಫಿ ಬೆಳೆಯುವ ಜಿಲ್ಲೆಗಳಿಗೆ ₹ 10 ಲಕ್ಷ ಅನುದಾನ ನೀಡಲಾಗುವುದು.
- ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರತಿ ವರ್ಷ ಅಂತಾರಾಷ್ಟ್ರೀಯ ಕಾಫಿ ವ್ಯಾಪಾರ ಮೇಳ ಆಯೋಜನೆ ಮಾಡಲಾಗುವುದು.

- ಕರ್ನಾಟಕದ ಕಾಫಿಗೆ ಪ್ರೋತ್ಸಾಹ ನೀಡಲು ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ಎಲ್ಲಾ ರಾಜ್ಯ ಕೇಂದ್ರಗಳಲ್ಲಿ ಕರ್ನಾಟಕ ಕಾಫಿ ಹೌಸ್ ಮಳಿಗೆಗಳನ್ನು ಸ್ಥಾಪಿಸಲಾಗುವುದು.
- ಖರೀದಿದಾರರು ಮತ್ತು ಪ್ರವಾಸಿಗರಿಗೆ "ಕ್ರಾಪ್ ಟು ಕಪ್" ಅನುಭವ ನೀಡುವುದಕ್ಕಾಗಿ ಮೂಡಿಗೆರೆ ಮತ್ತು ವಿರಾಜಪೇಟೆಯಲ್ಲಿ ಏಕೀಕೃತ ಕಾಫಿ ಪಾರ್ಕ್ ನಿರ್ಮಿಸಲಾಗುವುದು.
- ಕಾಫಿ ಕಾರ್ಮಿಕರು ಮತ್ತು ಅವರ ಕುಟುಂಬದ ಆರೋಗ್ಯ ಪಾಲನೆಗಾಗಿ ಕೇಂದ್ರ ಸರ್ಕಾರದ ಸಹಾಯದೊಂದಿಗೆ ಇಎಸ್ಐ ಆಸ್ಪತ್ರೆ ಸ್ಥಾಪಿಸಲಾಗುವುದು.

## ಅಡಿಕೆ ಬೆಳೆ

- ತೀರ್ಥಹಳ್ಳಿಯಲ್ಲಿ ಜಾಗತಿಕ ಮಟ್ಟದ ಅಡಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಸ್ಥಾಪನೆ ಮಾಡಲಾಗುವುದು.
- ಅಡಿಕೆ ಸಂಸ್ಕರಣೆಯಲ್ಲಿ ನಾವೀನ್ಯ ತರಲು ₹ 50 ಕೋಟಿ ವೆಚ್ಚದ "ಅಡಿಕೆ ನಾವೀನ್ಯ ನಿಧಿ" ಸ್ಥಾಪನೆ ಮಾಡಲಾಗುವುದು.
- ಅಡಿಕೆ ಬೆಳೆಗಾರರು ಪಾವತಿ ಮಾಡಬೇಕಿರುವ ಶೇಕಡಾ 1.5 ಎಪಿಎಂಸಿ ಸೆಸ್ ತೆಗೆಯಲಾಗುವುದು.
- ಅಡಿಕೆ ಕ್ಷೇತ್ರದ ಅಭಿವೃದ್ಧಿಗಾಗಿ ರಾಜ್ಯ ಅಡಿಕೆ ಮಂಡಳಿ ಸ್ಥಾಪಿಸಲಾಗುವುದು.
- ಕಳಪೆ ದರ್ಜೆಯ ಅಡಿಕೆ ಆಮದು ನಿಲ್ಲಿಸಲು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು.
- ಒಡೆಯುವಿಕೆ, ಹಾಳಾಗುವಿಕೆ ಮತ್ತು ಸಣ್ಣ ಪ್ರಮಾಣದ ಕಳ್ಳತನ ತಪ್ಪಿಸಲು ಸಂಬಂಧಿತ ಕೃಷಿ ಮಾರುಕಟ್ಟೆಗಳಲ್ಲಿ ಅಡಿಕೆ ಪ್ಯಾಕೇಜಿಂಗ್ ಘಟಕಗಳನ್ನು ಸ್ಥಾಪಿಸಲಾಗುವುದು.
- ಅಡಿಕೆಯ ಆರೋಗ್ಯ ಲಾಭಗಳನ್ನು ಉಲ್ಲೇಖಿಸಿ, ಕ್ಯಾನ್ಸರ್‌ಕಾರಕ ಎಂಬ ಆರೋಪದಿಂದ ಮುಕ್ತಗೊಳಿಸಲು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗುವುದು.

## ತೆಂಗು

- ತಿಪಟೂರಿನಲ್ಲಿ "ಕಲ್ಪವೃಕ್ಷ" ಹೆಸರಿನ ವಿಶ್ವ ದರ್ಜೆಯ ತೆಂಗು ಕೃಷಿ ಕೇಂದ್ರ ಸ್ಥಾಪಿಸಲಾಗುವುದು.
- ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು ಮತ್ತು ಮಂಡ್ಯದಲ್ಲಿ ಆಧುನಿಕ ತೆಂಗು ಸಂಸ್ಕರಣಾ ಘಟಕ ಸ್ಥಾಪಿಸಲಾಗುವುದು.
- ಕೊಬ್ಬರಿ ಬೆಳೆಗಾಗಿ ತಿಪಟೂರಿನಲ್ಲಿ ವಿಶೇಷ ಆರ್ಥಿಕ ವಲಯ ಸ್ಥಾಪನೆ.
- ನೀರಾವರಿ ಮೂಲಕ ಬೆಳೆದ ಕೊಬ್ಬರಿ ದರವನ್ನು ಗಣನೆಗೆ ತೆಗೆದುಕೊಂಡು ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಕೇಂದ್ರ ಸರ್ಕಾರದ ಜತೆಗೆ ಸಹಯೋಗ ಮಾಡಲಾಗುವುದು.

## ಹತ್ತಿ

- ಮಳೆ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಕಾಲುವೆ ವ್ಯವಸ್ಥೆ ನಿರ್ಮಾಣ ಮಾಡಲಾಗುವುದು.
- ರಾಯಚೂರು, ಬೆಳಗಾವಿ, ಧಾರವಾಡ ಮತ್ತು ಉತ್ತರ ಕರ್ನಾಟಕದ ಇತರೆ ಜಿಲ್ಲೆಗಳಲ್ಲಿ ಎಕ್ಸ್‌ಟ್ರಾ ಲಾಂಗ್ ಸ್ಟೇಪಲ್ ಹತ್ತಿ ಬೆಳೆಯಲು ಉತ್ತೇಜನ ನೀಡಲಾಗುವುದು.

## ತೊಗರಿ ಬೇಳೆ

- ಸ್ವಸಹಾಯ ಸಂಘಗಳು ಮತ್ತು ಕೃಷಿ ಉತ್ಪಾದಕರ ಸಂಸ್ಥೆಗಳಿಗೆ (ಎಫ್‌ಪಿಒ) ಮಿನಿ ಬೇಳೆ ಮಿಲ್ ಯಂತ್ರಗಳನ್ನು ಖರೀದಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡಲಾಗುವುದು.
- ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಕಲಬುರ್ಗಿಯಲ್ಲಿ ಆರಂಭಿಸಿದ ತೊಗರಿ ಬೇಳೆ ಪಾರ್ಕ್ ಅನ್ನು ಮಿಷನ್ ಮೋಡ್‌ನಲ್ಲಿ ಪೂರ್ಣಗೊಳಿಸಲಾಗುವುದು.

## ಭತ್ತ

- ಸಿಸ್ಟಮ್ಸ್ ಆಫ್ ರೈಸ್ ಇಂಟೆನ್ಸಿಫಿಕೇಶನ್ (ಎಸ್‌ಆರ್‌ಐ), ಡೈರೆಕ್ಟ್ ಸೀಡೆಡ್ ರೈಸ್ (ಡಿಎಸ್‌ಆರ್) ಮುಂತಾದ ಭತ್ತ ಬೆಳೆಯುವ ಸೂಕ್ತ ವಿಧಾನಗಳಿಗೆ ಉತ್ತೇಜನ ನೀಡಲಾಗುವುದು.
- ಕರ್ನಾಟಕದಲ್ಲಿ ಬೆಳೆಯುವ ಸೋನಾ ಮಸೂರಿ ಅಕ್ಕಿಗೆ ಭೌಗೋಳಿಕ ಅಸ್ಮಿತೆ ದೊರಕಿಸಲು ಯತ್ನಿಸಲಾಗುವುದು (Geographical Indication).
- ಮಧುಮೇಹಿಗಳಿಗೆ ಉಪಯುಕ್ತ ಎನಿಸಿರುವ ಕೆಂಪು ಅಕ್ಕಿಯ ಸೇವನೆಯನ್ನು ಪ್ರೋತ್ಸಾಹಿಸಲು "ಕೆಂಪು ಅಕ್ಕಿ ಅಭಿಯಾನ"ಕ್ಕೆ ಚಾಲನೆ ನೀಡಲಾಗುವುದು.

## ಮೆಕ್ಕೆ ಜೋಳ

- ಕ್ವಿಂಟಾಲ್‌ಗೆ ₹ 1,500 ಮೊತ್ತದಲ್ಲಿ ಮೆಕ್ಕೆ ಜೋಳ ಖರೀದಿಸಲಾಗುವುದು.
- ಬೆಳಗಾವಿ, ವಿಜಯಪುರ, ಬಾಗಲಕೋಟೆ, ಬಳ್ಳಾರಿ, ಗದಗ, ಧಾರವಾಡ ಮತ್ತು ದಾವಣಗೆರೆ ಹಾಗೂ ಮೆಕ್ಕೆ ಜೋಳ ಬೆಳೆಯುವ ಇತರ ಜಿಲ್ಲೆಗಳಲ್ಲಿ ಮೆಕ್ಕೆ ಜೋಳ ಸಂಗ್ರಹಣಾ ಕೇಂದ್ರ ಸ್ಥಾಪಿಸಲಾಗುವುದು.
- ಗದಗ ಜಿಲ್ಲೆಯಲ್ಲಿ ಬೃಹತ್ ಪ್ರಮಾಣದ ಮೆಕ್ಕೆ ಜೋಳ ಸಂಸ್ಕರಣಾ ಘಟಕ ಸ್ಥಾಪಿಸಲಾಗುವುದು.

## ಗೋಡಂಬಿ

- ದಕ್ಷಿಣ ಕನ್ನಡದಲ್ಲಿ ಗೋಡಂಬಿ ಅಭಿವೃದ್ಧಿಗಾಗಿ ಸಾಂದ್ರ ಅಭಿವೃದ್ಧಿ ಮಿಷನ್‌ಗೆ ಚಾಲನೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ಹಾಗೂ ಉಡುಪಿ ಜಿಲ್ಲೆಯಲ್ಲಿ 1 ಸಣ್ಣ ಪ್ರಮಾಣದ ಗೋಡಂಬಿ ಸಂಸ್ಕರಣಾ ಘಟಕ ಸ್ಥಾಪಿಸಲಾಗುವುದು.
- ಗೋಡಂಬಿ ಸಂಬಂಧಿತ ಆಹಾರ ಸಂಸ್ಕರಣೆ ಮತ್ತು ರಫ್ತು ಗುಣಮಟ್ಟದ ಗೇರು ಬೀಜ ಬೆಳೆಯಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಕಾರ್ಯಾಗಾರ ನಡೆಸಲಾಗುವುದು.
- ಹೊನ್ನಾವರವನ್ನು ಗೋಡಂಬಿ ರಫ್ತು ವಲಯವಾಗಿ ಅಭಿವೃದ್ಧಿಪಡಿಸಲಾಗುವುದು.
- ಗೋಡಂಬಿ ಕಾರ್ಮಿಕರು ಮತ್ತು ಅವರ ಕುಟುಂಬದ ಆರೋಗ್ಯ ಪಾಲನೆಗಾಗಿ ಕೇಂದ್ರ ಸರ್ಕಾರದ ಸಹಾಯದೊಂದಿಗೆ ಇಎಸ್ಐ ಆಸ್ಪತ್ರೆ ಸ್ಥಾಪಿಸಲಾಗುವುದು.

# ಇತರ ಕಾರ್ಯಚಟುವಟಿಕೆಗಳ ಮೂಲಕ ಆದಾಯ ಸೃಷ್ಟಿ

## ತೋಟಗಾರಿಕೆ

- ಕರ್ನಾಟಕ ಹಾಲು ಒಕ್ಕೂಟದ (ಕೆಎಂಎಫ್) ಮೂಲಕ ಹಣ್ಣು ಹಂಪಲುಗಳು ಮತ್ತು ತರಕಾರಿಗಳ ಸಂಗ್ರಹ, ದಾಸ್ತಾನು, ಸಂಸ್ಕರಣೆ, ಮಾರಾಟ ಮತ್ತು ರಫ್ತಿನ ಉತ್ತೇಜನಕ್ಕಾಗಿ ₹ 3,000 ಕೋಟಿ ವೆಚ್ಚದ ನಿಧಿ ಸ್ಥಾಪಿಸಲಾಗುವುದು.

- ತೋಟಗಾರಿಕೆಯಲ್ಲಿ ಭಾಗಿಯಾಗಿರುವ ರೈತರ ಆದಾಯ ಹೆಚ್ಚಿಸುವ ಉದ್ದೇಶದಿಂದ ಹಣ್ಣು ಹಂಪಲುಗಳು ಮತ್ತು ತರಕಾರಿ ಬೆಳೆಗಳಲ್ಲಿ ಮಾದರಿ ಹೈಬ್ರೀಡ್ ಬೀಜಗಳ ಬಳಕೆ ಉತ್ತೇಜನಕ್ಕಾಗಿ ನೀತಿ ರೂಪಿಸಲಾಗುವುದು.

- ರಾಜ್ಯದಾದ್ಯಂತ ಸುವಾಸನೆಯುಕ್ತ ಮತ್ತು ವೈದ್ಯಕೀಯ ಗಿಡಗಳು, ಹಣ್ಣು ಹಂಪಲು, ತರಕಾರಿಗಳು ಮತ್ತು ಮಸಾಲೆಗಳಿಗಾಗಿ ಹೊಸ ಕೃಷಿ ರಫ್ತು ವಲಯ ಸ್ಥಾಪಿಸಲಾಗುವುದು.

- ಮಾವು, ಸಪೋಟ, ದಾಳಿಂಬೆ, ಟೊಮ್ಯಾಟೊ ಮತ್ತು ಇತರ ಹಣ್ಣು ಮತ್ತು ತರಕಾರಿ ಬೆಳೆಗಳ ಮೌಲ್ಯ ವರ್ಧಿಸಲು ಮತ್ತು ಮಾರುಕಟ್ಟೆ ಸಂಪರ್ಕ ಕಲ್ಪಿಸಲು ತರಬೇತಿ ಮತ್ತು ತಾಂತ್ರಿಕ ಬೆಂಬಲ ನೀಡಲಾಗುವುದು.

- ತೋಟಗಾರಿಕಾ ಬೆಳೆಗಳನ್ನು ವಾಯು ಮಾರ್ಗದಲ್ಲಿ ಸಾಗಿಸಲು ಅನುವಾಗುವಂತೆ ರಾಜ್ಯದ ವಿಮಾನ ನಿಲ್ದಾಣಗಳಲ್ಲಿ ಸೌಲಭ್ಯಗಳನ್ನು ಒದಗಿಸಲಾಗುವುದು.

## ಸಾವಯವ ಕೃಷಿ

- ಪ್ರತಿ ಜಿಲ್ಲಾ ಕೇಂದ್ರದಲ್ಲಿ "ಸಜೀವ ಸಾವಯವ ಕೃಷಿ ಮಳಿಗೆ"ಗಳನ್ನು ಸ್ಥಾಪಿಸುವುದು ಮತ್ತು ಪ್ರಸ್ತುತ ಚಾಲನೆಯಲ್ಲಿರುವ ಸಾವಯವ ಉತ್ಪನ್ನ ಅಂಗಡಿಗಳನ್ನು ಅತ್ಯಾಧುನಿಕ ತಾಂತ್ರಿಕತೆಯೊಂದಿಗೆ ಉನ್ನತೀಕರಿಸಲಾಗುವುದು.

- ಸಾವಯವ ಕೃಷಿ ಕುರಿತು ರೈತರು ಯಾವುದೇ ಮಾಹಿತಿ ಪಡೆಯಲು ಅಥವಾ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಲು ವಿಶೇಷ ಸಹಾಯವಾಣಿ (ಹೆಲ್ಪ್ ಲೈನ್) ಸ್ಥಾಪಿಸಲಾಗುವುದು.

## ಹೈನುಗಾರಿಕೆ ಮತ್ತು ಪಶು ಸಂಗೋಪನೆ

- "ಕರ್ನಾಟಕ ಗೋಹತ್ಯೆ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ 2012" ಇದಕ್ಕೆ ಮರು ಚಾಲನೆ ನೀಡಲಾಗುವುದು.

- ಪಶು ಸಂಗೋಪನೆ ಮತ್ತು ಹೈನುಗಾರಿಕೆಗೆ ಬೇಕಾಗುವ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ₹ 3,000 ಕೋಟಿ "ಕಾಮಧೇನು ಅನುದಾನ" ನೀಡಲಾಗುವುದು.

- ಹಾಲು ಉತ್ಪಾದನೆಯನ್ನು ಪ್ರಸ್ತುತ 77 ಲಕ್ಷ ಲೀಟರ್‌ಗಳಿಂದ 1 ಕೋಟಿ ಲೀಟರ್‌ಗೆ ಏರಿಕೆ ಮಾಡಲಾಗುವುದು.

- ಹಸು ಸಗಣಿಯಿಂದ "ಗೋಬರ್ಧನ ಯೋಜನೆ" ಮೂಲಕ ಆದಾಯ ಗಳಿಕೆ ವಿಧಾನಗಳನ್ನು ಉತ್ತೇಜಿಸಲಾಗುವುದು.

- ರಫ್ತು ಗುಣಮಟ್ಟದ ಹಾಲು ಉತ್ಪಾದನೆ ಮತ್ತು ಹೊಸ ಹೈನುಗಾರಿಕಾ ಉತ್ಪನ್ನಗಳ ಅಭಿವೃದ್ಧಿಗಾಗಿ ದಾವಣಗೆರೆಯಲ್ಲಿ ಕರ್ನಾಟಕ ಡೈರಿ ಸಂಶೋಧನಾ ಸಂಸ್ಥೆ ಸ್ಥಾಪಿಸಲಾಗುವುದು.

- ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಜಾರಿಗೆ ತಂದ ಹಾಗೂ ಪ್ರಸ್ತುತ ಸರ್ಕಾರ ನಿಲ್ಲಿಸಿರುವ "ಗೋವು ಸೇವಾ ಆಯೋಗ"ಕ್ಕೆ ಮತ್ತೆ ಚಾಲನೆ. ಗೋವು ಸೇವಾ ಆಯೋಗವು ಸ್ಥಳೀಯ ತಳಿಗಳಾದ ಹಳ್ಳಿಕಾರ್, ಕೃಷ್ಣ ವ್ಯಾಲಿ, ಮಲೆನಾಡು ಗಿಡ್ಡ, ಅಮೃತ ಮಹಲ್ ಮುಂತಾದುವುಗಳ ರಕ್ಷಣೆಗೆ ವಿಶೇಷ ಒತ್ತು ನೀಡಲಾಗುವುದು.

- ಹಾಲು ಉತ್ಪಾದಕರಿಗೆ ಉತ್ತಮ ತಳಿ ಹಾಗೂ ಮೇವು ಖರೀದಿಗೆ ಹಣ ಸೌಲಭ್ಯವನ್ನು ನೀಡಲಾಗುವುದು.

## ಜಾನುವಾರುಗಳ ಯೋಗಕ್ಷೇಮ

- ಗ್ರಾಮೀಣ ಪ್ರದೇಶಗಳಲ್ಲಿ ದನಕರುಗಳು ಮತ್ತು ಇತರ ಪ್ರಾಣಿಗಳಿಗೆ ಕರ್ನಾಟಕ ಹಾಲು ಒಕ್ಕೂಟದ ಮೂಲಕ ಪಶುವೈದ್ಯಕೀಯ ಸೇವೆ ಒದಗಿಸಲು ₹ 1,000 ಕೋಟಿ ಮೀಸಲಿಡಲಾಗುವುದು.

- ರಾಜ್ಯದಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ದುಪ್ಪಟ್ಟುಗೊಳಿಸಲಾಗುವುದು.

- ಸಣ್ಣ ಮತ್ತು ಅತಿ ಸಣ್ಣ ರೈತರು ಹೊಂದಿರುವ ಜಾನುವಾರುಗಳು ಮತ್ತು ಹಾಲಿನ ಹಸುಗಳಿಗೆ ಸರ್ಕಾರಿ ಪಶು ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು.

- ದಾವಣಗೆರೆ, ಹೊಸಕೋಟೆ ಮತ್ತು ಬಬಲೇಶ್ವರದಲ್ಲಿ ಗೋವಿನ ಆಹಾರ ಫ್ಯಾಕ್ಟರಿಗಳನ್ನು ತೆರೆಯಲಾಗುವುದು.

## ರೇಷ್ಮೆ

- ಉತ್ತಮ ಗುಣಮಟ್ಟದ ರೇಷ್ಮೆ, ಮುಖ್ಯವಾಗಿ ಮುಗ ತಳಿಯ ಉತ್ಪಾದನೆಯನ್ನು ದುಪ್ಪಟ್ಟುಗೊಳಿಸಲು ₹ 1,700 ಕೋಟಿಯ "ಮಿಶನ್ ಸೆರಿಕಲ್ಚರ್" ಆರಂಭಿಸಲಾಗುವುದು.

- ಮಲ್ಬೆರಿಗೆ ಸ್ವಯಂಚಾಲಿತ ರೀಲಿಂಗ್ ಯಂತ್ರ ಮತ್ತು ವನ್ಯ ರೇಷ್ಮೆ ಬುನಿಯಾದ್ ರೀಲಿಂಗ್ ಯಂತ್ರಕ್ಕೆ ಸಬ್ಸಿಡಿ ನೀಡಲಾಗುವುದು.

- ರೇಷ್ಮೆ ಕೃಷಿಯಲ್ಲಿ ನಿರತರಾದವರಿಗೆ ನವೀನ ತಂತ್ರಜ್ಞಾನ ದೊರೆಯುವಂತೆ ಮಾಡಲು ಮಂಡ್ಯದಲ್ಲಿ "ರೇಷ್ಮೆ ಪಾರ್ಕ್" ಸ್ಥಾಪನೆ.

- ರೇಷ್ಮೆ ಹುಳು ಪಾಲನೆ ಮಾಡುವ ಕೇಂದ್ರಗಳಿಗೆ 1,000 ಚದರ ಅಡಿಗೆ ಪ್ರಸ್ತುತ ನೀಡುವ ₹ 75,000 ಸಬ್ಸಿಡಿಯನ್ನು ₹ 3,00,000ಕ್ಕೆ ಏರಿಸುವುದು ಹಾಗೂ ಇದೇ ಪ್ರಮಾಣದಲ್ಲಿ ಸಣ್ಣ ರೇಷ್ಮೆ ಹುಳು ಪಾಲನೆ ಕೇಂದ್ರಗಳಿಗೂ ಸಬ್ಸಿಡಿಯನ್ನು ಹೆಚ್ಚಿಸಲಾಗುವುದು.

## ಮೀನುಗಾರಿಕೆ

- ಮೀನುಗಾರರಿಗೆ ನಿಗದಿಪಡಿಸಿರುವ ಸಬ್ಸಿಡಿ ಡೀಸೆಲ್ ಪ್ರಮಾಣವನ್ನು ದ್ವಿಗುಣಗೊಳಿಸಿ 1,80,000 ಲೀಟರ್‌ಗೆ ಏರಿಸಲಾಗುವುದು.

- ಪ್ರತಿ ವರ್ಷ ಮೀನುಗಾರರಿಗೆ ಸಬ್ಸಿಡಿ ದರದಲ್ಲಿ 400 ಲೀಟರ್ ಸೀಮೆ ಎಣ್ಣೆಯನ್ನು ಒದಗಿಸಲಾಗುವುದು.
- ಮೀನುಗಾರಿಕಾ ಉದ್ದೇಶಕ್ಕೆ ಮುಖ್ಯವಾಗಿ ಯಾಂತ್ರೀಕೃತ ದೋಣಿಗಳು ಮತ್ತು ಇತರ ಉಪಕರಣಗಳ ಖರೀದಿಗಾಗಿ ಮೀನುಗಾರರ ಸಹಕಾರಿ ಸಂಘಗಳ ಮೂಲಕ ಬಡ್ಡಿ ರಹಿತ ಸಾಲ ಸೌಲಭ್ಯ ನೀಡಲಾಗುವುದು.
- ಭಟ್ಕಳ, ಕುಂದಾಪುರ, ಮತ್ತು ಹಂಗಾರಕಟ್ಟೆ, ಅಳಿವೆ ಬಾಗಿಲಿನಲ್ಲಿ ಹೂಳೆತ್ತಲು ಮತ್ತು ಮೇಲ್ದರ್ಜೆಗೇರಿಸಲು ರೂ 135 ಕೋಟಿ ನಿಧಿ ಮೀಸಲಿಡಲಾಗುವುದು.
- ಪ್ರತಿ ಹೊಸ "ಮೀನುಗಾರಿಕೆ ಉತ್ಪಾದನಾ ಕೇಂದ್ರ"ಕ್ಕೆ ₹ 2 ಲಕ್ಷದಷ್ಟು ವಿಶೇಷ ಸಹಾಯ ನಿಧಿ ಮೀಸಲಿಡಲಾಗುವುದು.
- ₹ 20 ಕೋಟಿ ಅನುದಾನದಲ್ಲಿ 100 ಆಧುನಿಕ ಸೌಲಭ್ಯಗಳನ್ನು ಒಳಗೊಂಡ ಮೀನು ಮಾರಾಟ ಮಳಿಗೆಗಳನ್ನು ಸ್ಥಾಪಿಸುವುದು ಹಾಗೂ ಸ್ಥಳೀಯ ಮಹಿಳೆಯರಿಗೆ ಮಳಿಗೆಯನ್ನು ನಿರ್ವಹಿಸಲು ಅವಕಾಶ ಕಲ್ಪಿಸಲಾಗುವುದು.
- "ನವ ಮತ್ಸ್ಯ ಆಶ್ರಯ ಯೋಜನೆ"ಯಡಿ ಮನೆಗಳನ್ನು ನಿರ್ಮಿಸಲು ₹ 40 ಕೋಟಿ ಮೀಸಲಿಡಲಾಗುವುದು.
- ನೋಂದಾಯಿತ ಮೀನುಗಾರರಿಗೆ ಮೋಟಾರ್ ಸೈಕಲ್ ಐಸ್ ಬಾಕ್ಸ್ ಖರೀದಿಸಲು ಶೇ. 70ರಷ್ಟು ಸಬ್ಸಿಡಿ ನೀಡಲಾಗುವುದು.
- ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ತೆಪ್ಪ ಮತ್ತು ಗುಣಮಟ್ಟದ ಮೀನು ಮರಿ ಒದಗಿಸಲು ₹ 35 ಕೋಟಿ ಮೂಲಧನ ನೀಡಲಾಗುವುದು.
- ಮೀನುಗಾರಿಕಾ ಕ್ಷೇತ್ರದಲ್ಲಿ ಹೂಡಿಕೆಯನ್ನು ಆಕರ್ಷಿಸಲು "ರಾಜ್ಯ ಮೀನುಗಾರ ಹೂಡಿಕೆ ಮಂಡಳಿ" ಸ್ಥಾಪನೆ.
- ರಾಜ್ಯದಲ್ಲಿರುವ ಎಲ್ಲಾ ಮೀನುಗಾರರ ಕಾಲೋನಿ ಬಳಿ ಬೋಟ್ ತಂಗುದಾಣ ನಿರ್ಮಿಸಲಾಗುವುದು.
- ಮೀನುಗಾರರ ಮಕ್ಕಳ ಶಿಕ್ಷಣಕ್ಕೆ ವಿದ್ಯಾರ್ಥಿವೇತನ ನೀಡಲಾಗುವುದು.
- ಕಾಣೆಯಾಗಿರುವ ಮೀನುಗಾರರ ಮರಣ ಪ್ರಮಾಣ ಪತ್ರಕ್ಕೆ ಮೃತರ ಕುಟುಂಬಗಳು 7 ವರ್ಷಗಳ ಕಾಲ ಕಾಯದಂತೆ ತ್ವರಿತಗತಿಯಲ್ಲಿ ಪ್ರಮಾಣ ಪತ್ರ ನೀಡಲಾಗುವುದು.
- "ಅಟಲ್ ಪಿಂಚಣಿ ಯೋಜನೆ"ಯಲ್ಲಿ ಮೀನುಗಾರರ ನೋಂದಣಿಗೆ ಬೃಹತ್ ಆಂದೋಲನ ಕೈಗೊಳ್ಳಲಾಗುವುದು.
- ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೀನು ತ್ಯಾಜ್ಯ ಆಧಾರಿತ ಸಾಮುದಾಯಿಕ ಜೈವಿಕ ಅನಿಲ ಸ್ಥಾವರ ನಿರ್ಮಿಸಲಾಗುವುದು.
- ಮೀನುಗಾರಿಕೆ ರಜೆ ಸಂದರ್ಭದಲ್ಲಿ ಮೀನುಗಾರರು ತಮ್ಮ ಕಸುಬನ್ನು ನಡೆಸಲು ಸಾಧ್ಯವಾಗದೆ ಇದ್ದಾಗ ₹ 1,800 ಮೊತ್ತವನ್ನು ಮೀನುಗಾರರಿಗೆ ಪಾವತಿಸಲಾಗುವುದು.
- ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಪ್ರಾಣ ಕಳೆದುಕೊಳ್ಳುವ ಮೀನುಗಾರರ ಕುಟುಂಬಗಳಿಗೆ ವಿಕೋಪ ಪರಿಹಾರ ನಿಧಿ ನೀಡಲಾಗುವುದು.
- ಕರಾವಳಿಯಲ್ಲಿ 2 ಹೊಸ ಮೀನುಗಾರಿಕಾ ಕಾಲೇಜುಗಳ ಸ್ಥಾಪನೆ ಮಾಡಲಾಗುವುದು.
- ಮೀನು ಕೃಷಿಯಲ್ಲಿ ಉಪಗ್ರಹ ಮ್ಯಾಪಿಂಗ್‌ನಂತಹ ಆಧುನಿಕ ವಿಧಾನಗಳ ಬಳಕೆಗೆ ಉತ್ತೇಜನ ನೀಡಲಾಗುವುದು.





2

# ಮಹಿಳಾ ಸಬಲೀಕರಣ

## ಆರ್ಥಿಕ ಸಬಲೀಕರಣ

- ಮಹಿಳೆಯರೇ ನಡೆಸುವ ಅತಿದೊಡ್ಡ ಸಹಕಾರಿ ಸಂಸ್ಥೆಯ ಸ್ಥಾಪನೆ. ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡುವ ಮಳಿಗೆಗಳ ನಿರ್ಮಾಣಕ್ಕೆ ₹ 10,000 ಕೋಟಿ. ಇದಕ್ಕಾಗಿ "ಸ್ತ್ರೀ ಉನ್ನತಿ ನಿಧಿ" ಸ್ಥಾಪಿಸಲಾಗುವುದು.
- ಸ್ತ್ರೀಶಕ್ತಿ ಮತ್ತು ಸ್ವಸಹಾಯ ಸಂಘಗಳ ಮಹಿಳೆಯರಿಗೆ ಶೇಕಡಾ 1ರ ಬಡ್ಡಿದರದಲ್ಲಿ ₹ 2 ಲಕ್ಷವರೆಗೆ ಸಾಲ ನೀಡಲಾಗುವುದು.
- ಮಹಿಳೆಯರಿಗೆ ಆರ್ಥಿಕ, ಕಾರ್ಯನಿರ್ವಹಣಾ ಬೆಂಬಲ ಹಾಗೂ ಕೌಶಲ್ಯ ತರಬೇತಿ ನೀಡಲು ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲೂ ಒಂದೊಂದು "ಸ್ತ್ರೀ ಉನ್ನತಿ ಕೇಂದ್ರ" ಸ್ಥಾಪಿಸಲಾಗುವುದು.
- ಮಹಿಳೆಯರಿಗೆ ಸ್ವಯಂ ಉದ್ಯೋಗ ಅವಕಾಶಗಳನ್ನು ನೀಡುವುದಕ್ಕಾಗಿ ಹೊಸ ನೀತಿ ಜಾರಿಗೊಳಿಸಲಾಗುವುದು.
- ₹ 100 ಕೋಟಿ ಮೊತ್ತದ "ಕರ್ನಾಟಕ ಮಹಿಳಾ ಎಂಟರ್‌ಪ್ರೈಸಸ್ ಕ್ಲಸ್ಟರ್ ಪ್ರೋಗ್ರಾಮ್" ಸ್ಥಾಪನೆ ಮತ್ತು ಅದರ ಅಡಿಯಲ್ಲಿ ಮಹಿಳೆಯರಿಂದ ನಡೆಸಲ್ಪಡುವ ವ್ಯಾಪಾರ ಬೆಂಬಲಕ್ಕೆ 30 ಹೊಸ ಮಧ್ಯಮ, ಸಣ್ಣ ಹಾಗೂ ಅತಿಸೂಕ್ಷ್ಮ ಸಣ್ಣ ಉದ್ದಿಮೆ (ಎಂಎಸ್‌ಎಂಇ -MSME) ಕ್ಲಸ್ಟರ್‌ಗಳನ್ನು ಸ್ಥಾಪಿಸಲಾಗುವುದು.
- ಸಾರ್ವಜನಿಕ ದಾಸ್ತಾನು ಖರೀದಿ (ಪಬ್ಲಿಕ್ ಪ್ರೊಕ್ಯೂರ್‌ಮೆಂಟ್) ಯಲ್ಲಿ ಮಹಿಳೆಯರು ನಡೆಸುವ MSMEಗಳಿಗೆ 5% ಮೀಸಲು ನೀಡಲಾಗುವುದು.
- ಹೈನುಗಾರಿಕಾ ಕ್ಷೇತ್ರದಲ್ಲಿ ಮಹಿಳೆಯರ ಪ್ರೋತ್ಸಾಹಕ್ಕಾಗಿ ₹ 100 ಕೋಟಿ ನಿಧಿ ಮೀಸಲಿಡಲಾಗುವುದು.
- ಕೃಷಿ ಮತ್ತು ಪಶು ಸಂಗೋಪನೆ ಕುರಿತ ಮಾಹಿತಿಗೆ ಮಹಿಳೆಯರೇ ನಿರ್ವಹಿಸುವ ಮಹಿಳಾ "ರೈತ ಸಹಾಯವಾಣಿ" ಸ್ಥಾಪಿಸಲಾಗುವುದು.
- ಮಹಿಳೆಯರ ಕೃಷಿ ಆದಾಯ ಹೆಚ್ಚಿಸಲು ಮಹಿಳೆಯರಿಂದ ನಡೆಸಲ್ಪಡುವ ಎಫ್‌ಪಿಓಗಳಿಗೆ ಸದ್ಯ ನೀಡುತ್ತಿರುವ ಪ್ರೋತ್ಸಾಹ ಧನಕ್ಕಿಂತ ಹೆಚ್ಚುವರಿಯಾಗಿ ₹1 ಲಕ್ಷ ಸಹಾಯ ಧನ ನೀಡಲಾಗುವುದು.
- ಕರ್ನಾಟಕದ ಮಹಿಳಾ ಕ್ರೀಡಾಪಟುಗಳಿಗೆ ಅಂತಾರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಲು ಬೇಕಾಗಿರುವ ತರಬೇತಿಗಾಗಿ ಬೆಂಗಳೂರಿನಲ್ಲಿ ಮಹಿಳಾ ಕ್ರೀಡಾ ಶಿಕ್ಷಣ ಕೇಂದ್ರದ ಸ್ಥಾಪನೆ.
- ಉದ್ಯೋಗಸ್ಥ ಮಹಿಳೆಯರಿಗಾಗಿ ರಾಜ್ಯದೆಲ್ಲೆಡೆ 75 ಹೊಸ ವಸತಿನಿಲಯ ನಿರ್ಮಿಸಲಾಗುವುದು.

## ಮಹಿಳಾ ಮತ್ತು ಮಕ್ಕಳ ಕಲ್ಯಾಣ

- "ಮುಖ್ಯಮಂತ್ರಿ ಸ್ಮಾರ್ಟ್‌ಫೋನ್ ಯೋಜನೆ" ಅಡಿ ಬಿಪಿಎಲ್ ಕುಟುಂಬದ ಮಹಿಳೆಯರಿಗೆ ಉಚಿತ ಸ್ಮಾರ್ಟ್‌ಫೋನ್ ನೀಡಲಾಗುವುದು.
- "ಸ್ತ್ರೀ ಸುವಿಧಾ" ಯೋಜನೆಯಡಿ ಬಿಪಿಎಲ್ ಕುಟುಂಬದ ಮಹಿಳೆಯರು, ವಿದ್ಯಾರ್ಥಿನಿಯರಿಗೆ ಉಚಿತ ನ್ಯಾಪ್ಕಿನ್, ಉಳಿದ ಮಹಿಳೆಯರಿಗೆ ₹ 1 ಕ್ಕೆ ಸ್ಯಾನಿಟರಿ ನ್ಯಾಪ್ಕಿನ್ ನೀಡಲಾಗುವುದು.
- ಭಾಗ್ಯಲಕ್ಷ್ಮೀ ಯೋಜನೆಯಡಿ ಹೆಣ್ಣುಮಕ್ಕಳಿಗೆ ನೀಡುವ ಮೊತ್ತ ₹ 2 ಲಕ್ಷಕ್ಕೆ ಹೆಚ್ಚಳ ಮಾಡಲಾಗುವುದು.
- "ವಿವಾಹ ಮಂಗಳ" ಯೋಜನೆ ಅಡಿ ಬಿಪಿಎಲ್ ಕುಟುಂಬದ ಯುವತಿಯರ ಮದುವೆಗೆ ₹ 25,000 ಮತ್ತು 3 ಗ್ರಾಂ ಚಿನ್ನದ ತಾಳಿ ನೀಡಲಾಗುವುದು.
- ಪ್ರಸವ ಪೂರ್ವ ಆರೋಗ್ಯ ತಪಾಸಣೆಗೆ ಬರುವ ಎಲ್ಲ ಗರ್ಭಿಣಿಯರಿಗೂ ಗೋಡಂಬಿ, ತುಪ್ಪ ಮತ್ತು ಬಾದಾಮಿ ಇರುವ ನ್ಯೂಟ್ರಿಶನ್ ಕಿಟ್ ವಿತರಿಸಲಾಗುವುದು.
- ವಿಧವೆಯರು ಮತ್ತು ಪರಿತ್ಯಕ್ತ ಮಹಿಳೆಯರಿಗೆ ಕೊಡಲಾಗುವ ಪಿಂಚಣಿಯ ಮೊತ್ತ ಪ್ರತಿ ತಿಂಗಳಿಗೆ ₹ 1,200 ಕ್ಕೆ ಹೆಚ್ಚಳ ಹಾಗೂ ಕನಿಷ್ಠ ವಯೋಮಿತಿ ರದ್ದು ಮಾಡಲಾಗುವುದು.
- ದೇವದಾಸಿಯರ ಕಲ್ಯಾಣ ಯೋಜನೆಯಲ್ಲಿ ನೀಡಲಾಗುವ ಪಿಂಚಣಿ ಮೊತ್ತ ₹ 1,200ಕ್ಕೆ ಹೆಚ್ಚಳ ಮಾಡಲಾಗುವುದು.
- ಎಲ್ಲ ಗ್ರಾಮೀಣ ಪ್ರದೇಶ ಮತ್ತು ನಗರ ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಲಾಗುವುದು.
- ಕೌಟುಂಬಿಕ ದೌರ್ಜನ್ಯ, ಆಸಿಡ್ ದಾಳಿ ಮತ್ತು ಅತ್ಯಾಚಾರ ಸಂತ್ರಸ್ತೆಯರಿಗೆ ಆಪ್ತ ಸಮಾಲೋಚನೆ ಮತ್ತು ಕೌಶಲ್ಯ ತರಬೇತಿ ನೀಡಲಾಗುವುದು.
- ಮಕ್ಕಳ ಹಕ್ಕು ಹಾಗೂ ರಕ್ಷಣೆಗೆ ಪ್ರತ್ಯೇಕ ನಿರ್ದೇಶನಾಲಯ ರಚಿಸಲಾಗುವುದು.
- ಎಲ್ಲಾ ನಾಲ್ಕು ಕಂದಾಯ ವಿಭಾಗದ ಪ್ರಧಾನ ಕಚೇರಿಗಳಲ್ಲಿ ಮಹಿಳೆಯರಿಗಾಗಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಪ್ರಾದೇಶಿಕ ಕಚೇರಿ ಸ್ಥಾಪಿಸಲಾಗುವುದು.

## ಮಹಿಳಾ ಸುರಕ್ಷತೆ

- ಪ್ರತಿ ತಾಲೂಕಿನಲ್ಲಿ ಮಹಿಳಾ ಪೋಲೀಸ್ ಠಾಣೆ ಸ್ಥಾಪಿಸಲಾಗುವುದು.
- ಮಹಿಳಾ ಭದ್ರತೆಯನ್ನು ಹೆಚ್ಚಿಸಲು "ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಪೋಲೀಸ್ ಪಡೆ" ರಚಿಸಲಾಗುವುದು.
- ರಾಜ್ಯ ಮತ್ತು ಕೇಂದ್ರ ಪೋಲೀಸ್ ಪಡೆಗಳು, ಬಿಎಸ್‌ಎಫ್ ಮತ್ತು ಇತರ ಅರೆಸೈನಿಕ ಪಡೆಗಳ ನೇಮಕಾತಿಯಲ್ಲಿ ಯುವತಿಯರ ತರಬೇತಿಗಾಗಿ ನಾಲ್ಕು ವಿಭಾಗಗಳಲ್ಲಿ "ಒನಕೆ ಓಬವ್ವ ಶಾಲೆ" ಸ್ಥಾಪಿಸಲಾಗುವುದು.
- ಮಹಿಳೆಯರ ಮೇಲಿನ ಇತ್ಯರ್ಥಗೊಳ್ಳದ ದೌರ್ಜನ್ಯ ಪ್ರಕರಣಗಳ ತನಿಖೆಗೆ ಮಹಿಳಾ ಪೋಲೀಸ್ ಅಧಿಕಾರಿಯ ನೇತೃತ್ವದಲ್ಲಿ 1,000 ಮಹಿಳಾ ಪೋಲೀಸ್ ಸಿಬ್ಬಂದಿ ಇರುವ ವಿಶೇಷ ತನಿಖಾ ತಂಡ ರಚಿಸಲಾಗುವುದು.
- ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಇತ್ಯರ್ಥಕ್ಕೆ 100 ತ್ವರಿತಗತಿಯ ನ್ಯಾಯಾಲಯಗಳ ಸ್ಥಾಪನೆ.

3



# ಉಜ್ವಲ ಭವಿಷ್ಯದೆಡೆಗೆ ಕರ್ನಾಟಕದ ಯುವಜನತೆ

## ಯುವ ಉದ್ಯೋಗ

- ಕೌಶಲ್ಯಾಭಿವೃದ್ಧಿ, ಸ್ವಯಂ ಉದ್ಯೋಗ ಮತ್ತು ಉದ್ಯೋಗ ಸೃಷ್ಟಿ ಮೂಲಕ ಪ್ರತಿಯೊಬ್ಬರಿಗೂ ಉತ್ತಮ ಉದ್ಯೋಗಾವಕಾಶ ಕಲ್ಪಿಸಲಾಗುವುದು.
- ರಾಜ್ಯದಲ್ಲಿ 60 "ನಮ್ಮ ಬಿಪಿಓ ಸಂಕೀರ್ಣ" ಸ್ಥಾಪನೆ ಹಾಗೂ ಬಿಪಿಓ ಉದ್ದಿಮೆ ಸ್ಥಾಪಿಸಿ ಉದ್ಯೋಗಾವಕಾಶ ಸೃಷ್ಟಿಸಲು ಸ್ಥಳೀಯ ಉದ್ಯಮಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ₹ 250 ಕೋಟಿ ನಿಧಿ ಸ್ಥಾಪನೆ.
- ಕಂಪ್ಯೂಟರ್, ಭಾಷೆ ಹಾಗೂ ಇತರ ಪೂರಕ ಕೌಶಲ್ಯ ತರಬೇತಿ ನೀಡುವ ಮೂಲಕ ಉದ್ಯೋಗಾಕಾಂಕ್ಷಿಗಳಿಗೆ ಸೂಕ್ತ ಉದ್ಯೋಗ ಹುಡುಕಿಕೊಳ್ಳಲು ನೆರವಾಗುವಂತೆ ರಾಜ್ಯದ ಎಲ್ಲ ಉದ್ಯೋಗ ವಿನಿಮಯ ಕೇಂದ್ರಗಳನ್ನು ಮಾದರಿ ಉದ್ಯೋಗ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು.
- ಮುಖ್ಯಮಂತ್ರಿಗಳ ಯುವ ನಾಯಕತ್ವ ಕಾರ್ಯಕ್ರಮ (ಚೀಫ್ ಮಿನಿಸ್ಟರ್ಸ್ ಯಂಗ್ ಲೀಡರ್ಸ್ ಪ್ರೋಗ್ರಾಂ, ಸಿಎಂ-ವೈಎಲ್‌ಪಿ) ದ ಅಡಿಯಲ್ಲಿ 50 ಅರ್ಹ ಅಭ್ಯರ್ಥಿಗಳಿಗೆ ಆಡಳಿತದಲ್ಲಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಲಾಗುವುದು.
- ರಾಜ್ಯದ ಪ್ರತಿ ಜಿಲ್ಲೆಯ ಎಲ್ಲ ವರ್ಗದ ಯುವ ಜನರಿಗಾಗಿ ಇ-ಕಾಮರ್ಸ್‌ನಂತಹ ವಿಶೇಷ ಕೌಶಲ್ಯದ ಸರ್ಟಿಫಿಕೇಟ್ ಕೋರ್ಸ್ ಆರಂಭಿಸಲಾಗುವುದು.
- ಕೌಶಲ್ಯ ಅಭಿವೃದ್ಧಿ ಕೇಂದ್ರದ ತರಬೇತುದಾರರ ತರಬೇತಿಗಾಗಿ ಉನ್ನತ ಮಟ್ಟದ ನೈಪುಣ್ಯ ಸಾಧಿಸಲು ನೆರವಾಗುವಂತಹ ಬಹುಕೌಶಲ್ಯ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು.

## ಯುವ ಉದ್ಯಮಶೀಲತೆ

- "ಮುಖ್ಯಮಂತ್ರಿ ಲ್ಯಾಪ್‌ಟಾಪ್" ಯೋಜನೆಯಡಿ ಕಾಲೇಜಿಗೆ ಸೇರುವ ಪ್ರತಿ ವಿದ್ಯಾರ್ಥಿಗೆ ಉಚಿತ ಲ್ಯಾಪ್ ಟಾಪ್ ನೀಡಲಾಗುವುದು.
- "ಸರ್ ಎಂ. ವಿಶ್ವೇಶ್ವರಯ್ಯ ವೆಂಚರ್ ಕ್ಯಾಪಿಟಲ್ ಫಂಡ್" ಯೋಜನೆಯಡಿ, ವಿನೂತನ ಉದ್ದಿಮೆ ಪರಿಕಲ್ಪನೆ ಉತ್ತೇಜಿಸುವ ಮೂಲಕ ರಾಜ್ಯದ ಯುವಜನರ ಉದ್ಯಮಶೀಲತೆಗೆ ಪ್ರೋತ್ಸಾಹ ನೀಡುವುದು.
- ಹುಬ್ಬಳ್ಳಿ, ಬೆಂಗಳೂರು, ರಾಯಚೂರು, ಕಲಬುರಗಿ, ಮೈಸೂರು ಮತ್ತು ಮಂಗಳೂರಿನಲ್ಲಿ ಸ್ಟಾರ್ಟ್‌ಅಪ್ ಕಂಪನಿಗಳಿಗೆ ಸ್ಥಳಾವಕಾಶ, ಹಣ ಹಾಗೂ ಇನ್ನಿತರ ಸೌಲಭ್ಯಗಳಿರುವ 6 "ಕೆ-ಹಬ್"ಗಳನ್ನು ಸ್ಥಾಪಿಸಲಾಗುವುದು.

## ರಾಜ್ಯದಲ್ಲಿ ಕ್ರೀಡಾ ಉತ್ತೇಜನ

- ಕೊಡಗಿನಲ್ಲಿ ಫೀಲ್ಡ್ ಮಾರ್ಷಲ್ ಕಾರಿಯಪ್ಪ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪಿಸಿ ವಿವಿಧ ಕ್ರೀಡೆಗಳ ಕಲಿಕೆಗೆ ಅವಕಾಶ, ಕೋಚ್ ತರಬೇತಿ ಹಾಗೂ ಕ್ರೀಡಾ ನಿರ್ವಹಣೆಗೆ ಸೂಕ್ತ ತರಬೇತಿ ನೀಡಲಾಗುವುದು. ಈ ವಿಶ್ವವಿದ್ಯಾಲಯದಲ್ಲಿ ಕ್ರೀಡಾ ವೈದ್ಯಕೀಯ ಕೇಂದ್ರ ನಿರ್ಮಾಣ ಮಾಡಲಾಗುವುದು.
- ಪ್ರತಿ ತಾಲೂಕಿನಲ್ಲಿ ಅಥ್ಲೆಟಿಕ್ ಟ್ರ್ಯಾಕ್, ಈಜುಕೊಳ, ಒಳಾಂಗಣ ಕ್ರೀಡಾಂಗಣದಂಥ ಸೌಲಭ್ಯಗಳಿರುವ ಯುವ ಸಮುದಾಯ ಕೇಂದ್ರಗಳನ್ನು ಅಭಿವೃದ್ಧಿ ಪಡಿಸಲಾಗುವುದು.
- ಹುಬ್ಬಳ್ಳಿ, ಶಿವಮೊಗ್ಗ, ಮಲ್ಪೆ, ಕೊಪ್ಪಳ ಮತ್ತು ಚಾಮರಾಜನಗರದಲ್ಲಿ ವಸತಿ ನಿಲಯ ಸೌಲಭ್ಯದೊಂದಿಗೆ ವಿಶ್ವದರ್ಜೆಯ ಕ್ರೀಡಾ ಕೇಂದ್ರ ಸ್ಥಾಪಿಸಲಾಗುವುದು.
- ಜಮಖಂಡಿ, ಬೆಳಗಾವಿ, ವಿಜಯಪುರದಲ್ಲಿ ವಿಶ್ವಪ್ರಸಿದ್ಧ ವೆಲೋಡ್ರೋಮ್ (ಸೈಕ್ಲಿಂಗ್ ಟ್ರ್ಯಾಕ್) ಸ್ಥಾಪಿಸಲಾಗುವುದು.
- ಸರ್ಕಾರಿ ಶಾಲೆ ಹಾಗೂ ಕಾಲೇಜುಗಳಲ್ಲಿ ಕ್ರೀಡಾ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ₹ 100 ಕೋಟಿ ನಿಧಿ ನೀಡಲಾಗುವುದು.
- ಗರಡಿ ಮನೆ, ಮಲ್ಲಕಂಬ, ಕಬಡ್ಡಿ ಮುಂತಾದ ಸಾಂಪ್ರದಾಯಿಕ ಅಂಗಸಾಧನೆ ಕೇಂದ್ರಗಳ ಪುನರುಜ್ಜೀವನಕ್ಕೆ ₹ 5 ಕೋಟಿ ನಿಧಿ ನೀಡಲಾಗುವುದು.
- ಮೈಸೂರು ದಸರಾದಲ್ಲಿ "ರಣಧೀರ ಕಂಠೀರವ ಅಂತಾರಾಷ್ಟ್ರೀಯ ಕುಸ್ತಿ ಪಂದ್ಯಾವಳಿ" ಆಯೋಜಿಸಲಾಗುವುದು.
- ರಾಜ್ಯ ಮತ್ತು ದೇಶವನ್ನು ಪ್ರತಿನಿಧಿಸುವ ಕರ್ನಾಟಕದ ಆಟಗಾರರ ಪ್ರಾಯೋಜಕತ್ವಕ್ಕೆ ₹ 100 ಕೋಟಿ ನಿಧಿ ಸ್ಥಾಪನೆ. ಆಟದ ವೇಳೆ ಗಾಯಗೊಳ್ಳುವ ಕ್ರೀಡಾಪಟುಗಳಿಗೆ ವಿಮೆ, ಸುಧಾರಿತ ಕ್ರೀಡಾ ಉಪಕರಣಗಳ ಖರೀದಿಗೆ ಬಡ್ಡಿರಹಿತ ಸಾಲ ನೀಡಲಾಗುವುದು.
- ಕ್ರೀಡೆಯಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ವಿಶೇಷ ಕ್ರೀಡಾ ಶಿಷ್ಯವೇತನ ನೀಡಲಾಗುವುದು. ಅದರಲ್ಲಿ ಶೇ.25ರಷ್ಟು ವೇತನ ಎಸ್ಸಿ/ಎಸ್ಟಿ ಸಮುದಾಯದವರಿಗೆ ಮೀಸಲಿಡಲಾಗುವುದು.

# 4



# ಎಲ್ಲರ ಜೊತೆಗೆ ಎಲ್ಲರ ವಿಕಾಸ

## ಎಲ್ಲರಿಗೂ ಆಹಾರ ಭದ್ರತೆ

- ಎಲ್ಲರಿಗೂ ಆಹಾರ ಒದಗಿಸುವ "ಅನ್ನದಾಸೋಹ ಯೋಜನೆ". ಬಿಪಿಎಲ್ ಕಾರ್ಡುದಾರರಿಗೆ ಆಯಾ ಪ್ರದೇಶಕ್ಕೆ ತಕ್ಕಂತೆ ಆಹಾರ ಧಾನ್ಯ ವಿತರಣೆ ಮತ್ತು ಎಪಿಎಲ್ ಕಾರ್ಡುದಾರರಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯ ವಿತರಣೆ.
- ಸರಕಾರ ರಚಿಸಿದ 100 ದಿನಗಳ ಒಳಗೆ ರೇಷನ್ ಕಾರ್ಡ್ ತಾರತಮ್ಯ ನಿವಾರಣೆ ಕಾರ್ಯ ಆರಂಭ ಮಾಡಲಾಗುವುದು.
- ಕೈಗೆಟುಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಆಹಾರ ಒದಗಿಸಲು 300ಕ್ಕಿಂತಲೂ ಹೆಚ್ಚು "ಮುಖ್ಯಮಂತ್ರಿ ಅನ್ನಪೂರ್ಣ ಕ್ಯಾಂಟೀನ್"ಗಳ (ಜಿಲ್ಲಾ ಕೇಂದ್ರಗಳಲ್ಲಿ 3 ಮತ್ತು ಪ್ರತಿ ತಾಲೂಕು ಕೇಂದ್ರದಲ್ಲಿ 1).

## ಪರಿಶಿಷ್ಟ ಪಂಗಡಗಳ ಕಲ್ಯಾಣ

- ಅಸ್ತಿತ್ವದಲ್ಲಿರುವ ಎಲ್ಲಾ ಎಸ್‌ಟಿ ವಿದ್ಯಾರ್ಥಿ ವೇತನ ಹೆಚ್ಚಿಸಲು, 400 ಎಸ್‌ಟಿ ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವಂತಾಗಲು ಮತ್ತು ರಾಷ್ಟ್ರೀಯ ಖ್ಯಾತಿಯ ಸಂಸ್ಥೆಗಳಲ್ಲಿ ಸೇರ್ಪಡೆಯಾದ ಎಸ್‌ಟಿ ವಿದ್ಯಾರ್ಥಿಗಳ ಶುಲ್ಕ ಪಾವತಿಗೆ ₹ 1,500 ಕೋಟಿ ಮೊತ್ತದ "ಮಹರ್ಷಿ ವಾಲ್ಮೀಕಿ ವಿದ್ಯಾರ್ಥಿವೇತನ ಯೋಜನೆ" ಪ್ರಾರಂಭಿಸಲಾಗುವುದು.
- 8ನೇ ತರಗತಿಯಲ್ಲಿ ಉತ್ತೀರ್ಣರಾದ ಎಸ್‌ಟಿ ವಿದ್ಯಾರ್ಥಿಗಳಿಗೆ ₹ 500, 9ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ₹ 750, 10ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ₹ 1,000, ಒಂದು ಬಾರಿಯ ನಗದು ಬಹುಮಾನ ನೀಡಲಾಗುವುದು.
- ಎಸ್‌ಟಿ ಉದ್ಯೋಗ ಆಕಾಂಕ್ಷಿಗಳಿಗೆ ಮೀಸಲಾದ ಸರ್ಕಾರಿ ಹುದ್ದೆಗಳ ಭರ್ತಿಗೆ ತ್ವರಿತ ಕ್ರಮ ಕೈಗೊಳ್ಳಲಾಗುವುದು.
- ಎಸ್‌ಟಿ ಮಹಿಳಾ ಸ್ವಸಹಾಯ ಸಂಘಗಳಿಗೆ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ನೀಡುವ ಶೇಕಡಾ 1ರ ಬಡ್ಡಿದರದ ಸಾಲ ಮೇಲೆ ನೆರವು ಒದಗಿಸಿ ₹ 5,000 ಸಬ್ಸಿಡಿ ಕೊಡಲಾಗುವುದು.
- ಬುಡಕಟ್ಟು ಯುವಕರಿಗೆ ಬಿಎಸ್‌ಎಫ್, ಸಿಆರ್‌ಪಿಎಫ್ ಮತ್ತು ಪೊಲೀಸ್ ಪಡೆಗಳಿಗೆ ಸೇರುವ ತಯಾರಿ ಮಾಡಲು ಚಿತ್ರದುರ್ಗ, ಮೈಸೂರು, ಉತ್ತರ ಕನ್ನಡ ಮತ್ತು ಬಾಗಲಕೋಟೆಯಲ್ಲಿ "ಸಿಂಧೂರ ಲಕ್ಷ್ಮಣ ತರಬೇತಿ ಕೇಂದ್ರ"ಗಳನ್ನು ಸ್ಥಾಪಿಸಲಾಗುವುದು
- ₹ 100 ಕೋಟಿ ಅನುದಾನದಲ್ಲಿ ಹೆಚ್.ಡಿ ಕೋಟೆಯಲ್ಲಿ ಬುಡಕಟ್ಟು ಔಷಧ ಕೇಂದ್ರವನ್ನು ಸ್ಥಾಪಿಸಲಾಗುವುದು.
- "ಸೋಲಿಗ ಅಭಿವೃದ್ಧಿ ನಿಗಮ" ಸ್ಥಾಪಿಸಲು ₹ 25 ಕೋಟಿ ಮೀಸಲಿಡಲಾಗುವುದು.
- ಆದ್ಯತೆ ಮೇರೆಗೆ ಸಮೀಪದ ಜಿಲ್ಲಾ ಕೇಂದ್ರದಿಂದ ಬುಡಕಟ್ಟು ಪ್ರದೇಶಗಳನ್ನು ಸಂಪರ್ಕಿಸುವ ಎಲ್ಲಾ ರಸ್ತೆಗಳ ಕಾಂಕ್ರೀಟೀಕರಣ ಮಾಡಲಾಗುವುದು.
- ನ್ಯಾಷನಲ್ ಪಾರ್ಕ್ ಮತ್ತು ವನ್ಯ ಜೀವಿಗಳ ಸಂರಕ್ಷಿತ ತಾಣಗಳ ಅಧಿಸೂಚನೆಯಿಂದ ಸಂತ್ರಸ್ತರಾದ ಬುಡಕಟ್ಟು ಸಮುದಾಯದವರಿಗೆ ಹಾಗೂ ಕಾಡು ಸಮುದಾಯದವರಿಗೆ ಪುನರ್ವಸತಿ ಮತ್ತು ಪುನರ್‌ವ್ಯವಸ್ಥೆ ನೀತಿ ರೂಪಿಸಲಾಗುವುದು.
- "ಮದಕರಿ ನಾಯಕ ವಸತಿ ಯೋಜನೆ"ಯಡಿ ಎಸ್‌ಟಿ ಸಮುದಾಯಗಳಿಗೆ ವಸತಿ ನಿರ್ಮಿಸಲು ₹ 6,500 ಕೋಟಿ ಮೀಸಲಿಡಲಾಗುವುದು.
- ಶಿಗ್ಗಾಂವ್‌ನ ಜಾನಪದ ವಿಶ್ವವಿದ್ಯಾಲಯದಲ್ಲಿ ಬುಡಕಟ್ಟು ಕಲೆ, ಸಂಸ್ಕೃತಿ ಮತ್ತು ಭಾಷೆಗಳ ಸಂಶೋಧನೆ ಮತ್ತು ಉತ್ತೇಜನೆಗಾಗಿ ಬುಡಕಟ್ಟು ಪರಂಪರಾ ಕೇಂದ್ರದ ನಿರ್ಮಾಣ ಮಾಡಲಾಗುವುದು.
- ರಾಯಚೂರು, ಬಳ್ಳಾರಿ, ಕೋಲಾರ, ಚಾಮರಾಜನಗರ ಮತ್ತು ವಿರಾಜಪೇಟೆಯಲ್ಲಿ ಬೃಹತ್ ವಾಲ್ಮೀಕಿ ಭವನಗಳ ನಿರ್ಮಾಣ ಮತ್ತು ಹಾಲಿ ಇರುವ ಭವನಗಳ ಉನ್ನತೀಕರಣಕ್ಕೆ "ವಾಲ್ಮೀಕಿ ಸಂಸ್ಕೃತಿ ಯೋಜನೆ" ಅಡಿಯಲ್ಲಿ ₹ 125 ಕೋಟಿ ಮೀಸಲಿಡಲಾಗುವುದು.
- ರಾಜ್ಯದ ಶಾಲಾ ಪಠ್ಯಕ್ರಮವನ್ನು ಮರುಪರಿಶೀಲಿಸುವುದು ಮತ್ತು ಬುಡಕಟ್ಟು ನಾಯಕರಾದ ಸಿಂಧೂರ ಲಕ್ಷ್ಮಣ, ಮದಕರಿ ನಾಯಕ ಮುಂತಾದವರು ಕರ್ನಾಟಕದ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಉಲ್ಲೇಖಿಸುವ ಪಠ್ಯವನ್ನು ಸೇರಿಸಲಾಗುವುದು.

## ಪರಿಶಿಷ್ಟ ಜಾತಿ ಸಮುದಾಯಗಳ ಕಲ್ಯಾಣ

- ಪ್ರಸ್ತುತ ಇರುವ ಎಲ್ಲಾ ಎಸ್‌ಸಿ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಹೆಚ್ಚಿಸಲು, 600 ಎಸ್‌ಸಿ ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯಲು ಸಹಕಾರಿಯಾಗಲು ಮತ್ತು ರಾಷ್ಟ್ರೀಯ ಖ್ಯಾತಿಯ ಸಂಸ್ಥೆಗಳಿಗೆ ಸೇರಿದ ವಿದ್ಯಾರ್ಥಿಗಳ ಶುಲ್ಕ ಪಾವತಿಸಲು ₹ 3,000 ಕೋಟಿ ಮೊತ್ತದ "ಬಾಬು ಜಗಜೀವನ ರಾಮ್ ವಿದ್ಯಾರ್ಥಿವೇತನ ಯೋಜನೆ"ಗೆ ಚಾಲನೆ ನೀಡಲಾಗುವುದು.
- ಪರಿಶಿಷ್ಟ ಜಾತಿ ಉದ್ಯಮಿಗಳಿಗಾಗಿ ಉದ್ಯಮಶೀಲತೆ ಅಭಿವೃದ್ಧಿ ಮತ್ತು ಇನ್‌ಕ್ಯುಬೇಶನ್ ಕಾರ್ಯಕ್ರಮ ಕೈಗೊಳ್ಳಲು "ಡಾ. ಭೀಮರಾವ್ ರಾಮ್ ಜಿ ಅಂಬೇಡ್ಕರ್ ಉದ್ಯಮಶೀಲತಾ ಯೋಜನೆ"ಗೆ ₹ 500 ಕೋಟಿ ಮೀಸಲಿಡಲಾಗುವುದು.

- ಎಸ್‌ಸಿ ಮಹಿಳಾ ಸ್ವಸಹಾಯ ಸಂಘಗಳಿಗೆ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ನೀಡುವ ಶೇಕಡಾ 1ರ ಬಡ್ಡಿದರದ ಸಾಲ ಮೇಲೆ ನೆರವು ಒದಗಿಸಿ ₹ 5 ಸಾವಿರ ಸಬ್ಸಿಡಿ ಕೊಡಲಾಗುವುದು.

- ಎಸ್‌ಸಿ ಅಭ್ಯರ್ಥಿಗಳಿಗೆ ಮೀಸಲಾದ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡಲು ತ್ವರಿತ ಕ್ರಮ ಕೈಗೊಳ್ಳಲಾಗುವುದು.

- ₹ 8,500 ಕೋಟಿ ಮೊತ್ತದ "ಮಾದಾರ ಚೆನ್ನಯ್ಯ ವಸತಿ ಯೋಜನೆ"ಯಡಿ ಎಸ್‌ಸಿ ಸಮುದಾಯಗಳಿಗೆ ಆಧುನಿಕ ಮನೆಗಳನ್ನು ನಿರ್ಮಿಸಿ ಕೊಡಲಾಗುವುದು.

- ಡಾ. ಭೀಮರಾವ್ ರಾಮ್ ಜೀ ಅಂಬೇಡ್ಕರ್ ಅವರ ಬದುಕಿನ ಜತೆ ಸಂಬಂಧ ಹೊಂದಿರುವ ಸ್ಥಳಗಳಾದ ಮೌವ್, ನಾಗಪುರ, 26 ಅಲಿಪುರ ರಸ್ತೆ (ದೆಹಲಿ), ದಾದರ್ ಮತ್ತು ಲಂಡನ್ ಮುಂತಾದೆಡೆ ಭೇಟಿ ನೀಡಲು "ಡಾ. ಭೀಮರಾವ್ ರಾಮ್ ಜೀ ಅಂಬೇಡ್ಕರ್ ತೀರ್ಥಸ್ಥಳ ಯಾತ್ರೆ" ನಿಧಿಗೆ ಹಣ ಮೀಸಲಿಡಲಾಗುವುದು.

- 8ನೇ ತರಗತಿಯಲ್ಲಿ ಉತ್ತೀರ್ಣರಾದ ಎಸ್‌ಸಿ ವಿದ್ಯಾರ್ಥಿಗಳಿಗೆ ₹ 500, 9ನೇತರಗತಿಯಲ್ಲಿ ಉತ್ತೀರ್ಣರಾದವರಿಗೆ ₹ 750, 10ನೇ ತರಗತಿಯಲ್ಲಿ ಉತ್ತೀರ್ಣರಾದವರಿಗೆ ₹ 1,000, ಒಂದು ಬಾರಿಯ ನಗದು ಪ್ರಶಸ್ತಿ ನೀಡಲಾಗುವುದು.

## ಹಿಂದುಳಿದ ವರ್ಗಗಳ ಕಲ್ಯಾಣ

- ಸಾಂಪ್ರದಾಯಿಕ ಕಸುಬುಗಳನ್ನು ಲಾಭದಾಯಕವನ್ನಾಗಿಸಲು ಮತ್ತು ಸಾಂಪ್ರದಾಯಿಕ ಕಸುಬು ನಡೆಸುವವರ ಕಲ್ಯಾಣಕ್ಕಾಗಿ "ಒಬಿಸಿ ನಿಧಿ"ಯಡಿ ₹ 1,000 ಕೋಟಿ ಹಣವನ್ನು ಮೀಸಲಿಡಲಾಗುವುದು.

- ಒಬಿಸಿಗಳಿಗೆ ಆಧುನಿಕ ಸೌಲಭ್ಯ ಹೊಂದಿರುವ ವಸತಿ ಸಂಕೀರ್ಣಗಳನ್ನು ನಿರ್ಮಿಸಲು ₹ 7,500 ಕೋಟಿ ಮೊತ್ತವನ್ನು ನಿಗದಿಪಡಿಸಲಾಗುವುದು.

- ತಿಗಳ ಸಮುದಾಯದ ಕಲ್ಯಾಣಕ್ಕಾಗಿ "ತಿಗಳ ಅಭಿವೃದ್ಧಿ ನಿಗಮ"ವನ್ನು ಸ್ಥಾಪಿಸಲಾಗುವುದು.

- ಸವಿತಾ ಸಮಾಜ ಸಮುದಾಯದ ಕಲ್ಯಾಣಕ್ಕಾಗಿ "ಸವಿತಾ ಸಮಾಜ ಕಲ್ಯಾಣ ಮಂಡಳಿ"ಯ ಸ್ಥಾಪನೆ ಮಾಡಲಾಗುವುದು.

- ಈಡಿಗ ಮತ್ತು ಬಿಲ್ಲವ ಸಮುದಾಯದ ಅಭಿವೃದ್ಧಿಗಾಗಿ "ಶ್ರೀ ನಾರಾಯಣಗುರು ಕಲ್ಯಾಣ ಮಂಡಳಿ"ಯ ಸ್ಥಾಪನೆ ಮಾಡಲಾಗುವುದು.

- ಯಾದವ ಸಮುದಾಯದ ಅಭಿವೃದ್ಧಿಗಾಗಿ "ಯಾದವ ಕಲ್ಯಾಣ ಅಭಿವೃದ್ಧಿ ಮಂಡಳಿ" ಸ್ಥಾಪನೆ ಮಾಡಲಾಗುವುದು. ಎಲ್ಲ ಗೊಲ್ಲರಹಟ್ಟಿಗಳನ್ನು ಕಂದಾಯ ಹಳ್ಳಿಗಳಾಗಿ ಪರಿವರ್ತಿಸಲು ಸಹ ಈ ಮಂಡಳಿ ಕಾರ್ಯ ನಿರ್ವಹಿಸಲಿದೆ.

- ಪ್ರತಿ ವರ್ಷ ಅಮರಶಿಲ್ಪಿ ಜಕಣಾಚಾರಿ ಜಯಂತಿ ಆಚರಿಸಲಾಗುವುದು.

## ಅಲ್ಪಸಂಖ್ಯಾತರ ಕಲ್ಯಾಣ

- ಅಲ್ಪಸಂಖ್ಯಾತರ ಸಾಮಾಜಿಕ ಕಲ್ಯಾಣ ಯೋಜನೆಗಳು ಹೆಚ್ಚು ಪ್ರಭಾವ ಬೀರುವಂತೆ ಮಾಡಲು ಮುಖ್ಯಮಂತ್ರಿಗಳ ಅಲ್ಪಸಂಖ್ಯಾತ ಅಭಿವೃದ್ಧಿ ಕಾರ್ಯಕ್ರಮವನ್ನು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಡಿ ತರಲಾಗುವುದು.

- ಈಗಾಗಲೇ ಸರ್ಕಾರ ಅಂಗೀಕರಿಸಿರುವ ಕಾನೂನಿನಂತೆ ವಕ್ಫ್ ಬೋರ್ಡ್ ಅವ್ಯವಹಾರಗಳ ಕುರಿತು ಅನ್ವರ್ ಮಾಣಿಪ್ಪಾಡಿ ವರದಿಯ ಅನುಸಾರ ಅಕ್ರಮವಾಗಿ ಕಬಳಿಸಿರುವ ಆಸ್ತಿಯನ್ನು ವಶಪಡಿಸಿಕೊಳ್ಳಲಾಗುವುದು.

- ಬೈಲಕುಪ್ಪೆಯನ್ನು ಬೌದ್ಧ ಧರ್ಮದ ಅಂತಾರಾಷ್ಟ್ರೀಯ ಕೇಂದ್ರವಾಗಿ ಅಭಿವೃದ್ಧಿಪಡಿಸಲಾಗುವುದು.

- ಅಂಕನಕಟ್ಟೆ, ಕಲ್ಯಾ (ಮಾಗಡಿ) ಮುಂತಾದ ಬೌದ್ಧ ಸಮುದಾಯದ ಪ್ರಮುಖ ಕೇಂದ್ರಗಳನ್ನು ಮತ್ತು ಡಂಬಳ (ಗದಗ), ಮಸ್ಕಿ (ರಾಯಚೂರು) ಯಲ್ಲಿರುವ ಬೌದ್ಧ ಸ್ಮಾರಕವನ್ನು ಅಭಿವೃದ್ಧಿಪಡಿಸಲಾಗುವುದು.

- ರಾಜ್ಯಾದ್ಯಂತ ಇರುವ ಜೈನ ಬಸದಿಗಳು ಮತ್ತು ತೀರ್ಥಂಕರರ ಮೂರ್ತಿಗಳ ಕೇಂದ್ರಗಳನ್ನು ಪುನರುಜ್ಜೀವನಗೊಳಿಸಲಾಗುವುದು ಮತ್ತು ಈ ಸ್ಥಳಗಳಲ್ಲಿ ಪ್ರಾರ್ಥನೆ ಮತ್ತು ಯಾತ್ರೆ ಕೈಗೊಳ್ಳಲು ಅನುವು ಮಾಡಿಕೊಡಲಾಗುವುದು.

## ನೇಕಾರರ ಕಲ್ಯಾಣ

- ನೇಕಾರ ಅಭಿವೃದ್ಧಿ ನಿಗಮ ಸ್ಥಾಪಿಸಿ, "ದೇವರ ದಾಸಿಮಯ್ಯ" ನಿಧಿಯ ₹ 1,000 ಕೋಟಿ ಹಣದಲ್ಲಿ ವಸತಿ, ಶಿಕ್ಷಣ, ಆರೋಗ್ಯ, ಮತ್ತು ಉದ್ಯೋಗಾವಕಾಶ ನೀಡಲಾಗುವುದು.

- ಬಾಗಲಕೋಟೆ ಜಿಲ್ಲೆಯಲ್ಲಿ ದೇಶದ ಅತಿ ದೊಡ್ಡ ಕೈ ಮಗ್ಗ ಮತ್ತು ಉಡುಪು ತಯಾರಿಕಾ ಸಮೂಹವನ್ನು ಉತ್ತೇಜಿಸಲು ಬಾದಾಮಿ ಮತ್ತು ರಬಕವಿ ಬನಹಟ್ಟಿಯಲ್ಲಿ ಮೆಗಾ ಸಿದ್ಧ ಉಡುಪು ತಯಾರಿಕಾ ಕೇಂದ್ರಗಳನ್ನು ನಿರ್ಮಿಸಲಾಗುವುದು.

- ಕೈಮಗ್ಗ ಮೀಸಲಾತಿ ಕಾಯಿದೆ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು.

- ಆನ್‌ಲೈನ್ ವೇದಿಕೆಗಳಲ್ಲಿ ಕೈಮಗ್ಗ ಸಂಬಂಧಿತ ವಸ್ತುಗಳನ್ನು ನೇರವಾಗಿ ಮಾರಾಟ ಮಾಡುವವರಿಗೆ ಸಹಾಯ ಮಾಡಲು ₹ 50 ಕೋಟಿಯ "ಕೈ ಮಗ್ಗ ಉದ್ದಿಮೆದಾರರ ನಿಧಿ"ಯನ್ನು ಸ್ಥಾಪಿಸಲಾಗುವುದು.

- ನಮ್ಮ ಸರಕಾರ ರಚನೆಯಾದ 3 ತಿಂಗಳೊಳಗೆ ನೇಕಾರರ ₹ 1 ಲಕ್ಷದವರೆಗೆ ಸಾಲ ಮನ್ನಾ ಮಾಡಲಾಗುವುದು.

- ಬಾದಾಮಿಯಲ್ಲಿ ಫ್ಯಾಷನ್ ಟೆಕ್ನಾಲಜಿಯ ರಾಜ್ಯ ಸಂಸ್ಥೆಯನ್ನು (ಸ್ಟೇಟ್ ಇನ್ಸಿಟಿಟ್ಯೂಟ್ ಆಫ್ ಫ್ಯಾಷನ್) ಸ್ಥಾಪಿಸಲಾಗುವುದು.

- ಬನಹಟ್ಟಿಯಲ್ಲಿ "ದೇವರ ದಾಸಿಮಯ್ಯ ಕೇಂದ್ರ" ಎಂಬ ಹೆಸರಿನ ಅತ್ಯಾಧುನಿಕ ವ್ಯಾಪಾರಿ ಸೌಕರ್ಯ ಕೇಂದ್ರ ಮತ್ತು ಸಿದ್ಧ ಉಡುಪು ಮ್ಯೂಸಿಯಂ ಸ್ಥಾಪಿಸಲಾಗುವುದು.

## ಅಸಂಘಟಿತ ಕಾರ್ಮಿಕರ ಕಲ್ಯಾಣ

- ಸರ್ಕಾರದ ಎಲ್ಲಾ ಯೋಜನೆಗಳ ಫಲಾನುಭವಿಗಳಾಗಲು ಎಲ್ಲ ಅಸಂಘಟಿತ ಕಾರ್ಮಿಕರಿಗೆ ಆಧಾರ್ ಕಾರ್ಡ್ ಜತೆ ಜೋಡಣೆಯಾಗಿರುವ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡಲು ನೋಂದಣಿ ಅಭಿಯಾನ ನಡೆಸಲಾಗುವುದು.

- ಕಟ್ಟಡ ನಿರ್ಮಾಣ ಕಾರ್ಮಿಕರು ಸರ್ಕಾರದ ಎಲ್ಲ ಯೋಜನೆಗಳ ಲಾಭಗಳನ್ನು ಪಡೆಯಲು ಸಹಾಯವಾಗುವಂತೆ ಕರ್ನಾಟಕ ರಾಜ್ಯ ನಿರ್ಮಾಣ ಕಾರ್ಮಿಕರ ಕೇಂದ್ರ ಸಂಘಟನೆಯ ಸದಸ್ಯತ್ವ ನೀಡಲು ಅಭಿಯಾನ ಕೈಗೊಳ್ಳಲಾಗುವುದು.

- ಸದಸ್ಯರಿಗೆ ಸಣ್ಣ ಪ್ರಮಾಣದ ವೈಯಕ್ತಿಕ ಸಾಲ ಪಡೆಯಲು ಅನುಕೂಲವಾಗುವಂತೆ ಕಾರ್ಮಿಕ ಸಹಕಾರ ಸಂಘಟನೆಗಳಿಗೆ ₹ 2 ಲಕ್ಷ ಒದಗಿಸಲಾಗುವುದ.
- ಅಸಂಘಟಿತ ಕ್ಷೇತ್ರದಲ್ಲಿ ಕಾರ್ಮಿಕ ಕಲ್ಯಾಣ ನೀತಿ ಸರಿಯಾದ ಅನುಷ್ಠಾನ ಖಾತ್ರಿಗಾಗಿ ಕಾರ್ಯಪಡೆಯನ್ನು ರಚಿಸಲಾಗುವುದು.
- ಕರ್ನಾಟಕದಲ್ಲಿ ನೆಲೆಸಿರುವ ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣಕ್ಕಾಗಿ ₹ 50 ಕೋಟಿ ನಿಧಿಯನ್ನು ಮೀಸಲಿಡಲಾಗುವುದು.
- ನಗರ ಪ್ರದೇಶಗಳ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಕರ್ನಾಟಕ ಗೃಹ ಮಂಡಳಿಯಿಂದ ವಸತಿ ಯೋಜನೆ ಜಾರಿಗೊಳಿಸಲಾಗುವುದು.

## ಹಿರಿಯ ನಾಗರಿಕರ ಕಲ್ಯಾಣ

- ರಾಜ್ಯದಲ್ಲಿರುವ ವೃದ್ಧಾಶ್ರಮಗಳನ್ನು ಮೇಲ್ದರ್ಜೆಗೇರಿಸಲು ₹ 400 ಕೋಟಿ ಮೊತ್ತದ ನಿಧಿ ಸ್ಥಾಪಿಸಲಾಗುವುದು.
- ಹಿರಿಯ ನಾಗರಿಕರ ಮಾಸಿಕ ಪಿಂಚಣಿಯನ್ನು ₹ 1,200ಕ್ಕೆ ಏರಿಸಲಾಗುವುದು.
- ಚಾರ್‌ಧಾಮ್ ಯಾತ್ರಾರ್ಥಿಗಳಿಗೆ ನೀಡುತ್ತಿರುವ ಸಬ್ಸಿಡಿಯನ್ನು ₹ 25,000ಕ್ಕೆ ಏರಿಸಲಾಗುವುದು.
- ಸಿಂಧೂ ದರ್ಶನ ಯಾತ್ರೆ ಕೈಗೊಳ್ಳುವ ಹಿರಿಯ ನಾಗರಿಕರು ಅಥವಾ ಇತರ ಯಾವುದೇ ವ್ಯಕ್ತಿಗೆ ₹ 25,000 ಸಬ್ಸಿಡಿ ನೀಡಲಾಗುವುದು.
- ಕೈಲಾಸ ಮಾನಸಸರೋವರ ಯಾತ್ರೆಗೆ ಒಂದು ಬಾರಿ ನೀಡುವ ಸಬ್ಸಿಡಿಯನ್ನು ₹ 30,000 ದಿಂದ ₹ 75,000ಕ್ಕೆ ಏರಿಸಲಾಗುವುದು.

## ತೃತೀಯ ಲಿಂಗಿಗಳ ಕಲ್ಯಾಣ

- ಎಲ್ಲಾ ರಾಜ್ಯ ಸರ್ಕಾರಿ ಅರ್ಜಿ ಪತ್ರಗಳಲ್ಲಿ "ತೃತೀಯ ಲಿಂಗಿಗಳು" ಎಂದು ನಮೂದಿಸಲು ಅವಕಾಶ ಕಲ್ಪಿಸಲಾಗುವುದು.
- ಕಲ್ಯಾಣ ಯೋಜನೆಗಳ ಲಾಭ ದೊರಕಿಸಲು ತೃತೀಯ ಲಿಂಗಿಗಳ ಸಮೀಕ್ಷೆ ಕೈಗೊಳ್ಳಲಾಗುವುದು.
- ಉಚಿತ ಶಾಲಾ ಶಿಕ್ಷಣ ನೀಡಲು ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ "ವಸತಿ ಶಾಲೆ"ಯನ್ನು ರೂಪಿಸಲಾಗುವುದು.
- ಜೋಗಪ್ಪ ಸಮುದಾಯ ಮತ್ತು ತೃತೀಯ ಲಿಂಗಿಗಳಿಗೆ ವಿಶೇಷ ಉನ್ನತ ಶಿಕ್ಷಣ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು.
- ತೃತೀಯ ಲಿಂಗಿಗಳು ಕೆಪಿಎಸ್ಸಿ ಪರೀಕ್ಷೆ ಬರೆಯಲು ಉತ್ತೇಜಿಸಲು ಕ್ರಮ ಕೈಗೊಳ್ಳಲಾಗುವುದು.
- ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿ ಮುಂತಾದ ನಾಗರಿಕ ಸೇವೆಗಳನ್ನು ತೃತೀಯ ಲಿಂಗಿಗಳು ಸುಲಭವಾಗಿ ಪಡೆಯಲಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

## ಪೌರ ಕಾರ್ಮಿಕರ ಕಲ್ಯಾಣ

- ಯಾವುದೇ ಕಾರಣಕ್ಕೆ ಮ್ಯಾನ್‌ಹೋಲ್‌ಗಳಿಗೆ ಕಾರ್ಮಿಕರು ಇಳಿಯುವುದನ್ನು ತಡೆಯುವುದು ಮತ್ತು ಉನ್ನತ ಮಟ್ಟದ ತಂತ್ರಜ್ಞಾನವನ್ನು ಸ್ವಚ್ಛತೆಗಾಗಿ ಬಳಸಲಾಗುವುದು.
- ಪ್ರತಿ ನಗರ ಪೌರ ಕಾರ್ಮಿಕರಿಗೆ ವಸತಿ ಸೌಕರ್ಯ ನಿರ್ಮಿಸಲಾಗುವುದು.
- ಪೌರ ಕಾರ್ಮಿಕರ ನಿರಂತರ ಆರೋಗ್ಯ ತಪಾಸಣೆ ಮಾಡಲಾಗುವುದು.

## ದಿವ್ಯಾಂಗ ಕಲ್ಯಾಣ

- ದಿವ್ಯಾಂಗ ಮಾಸಿಕ ಪಿಂಚಣಿಯನ್ನು ಗರಿಷ್ಠ ₹ 3,000ದ ವರೆಗೆ ಏರಿಸಲಾಗುವುದು.
- ದಿವ್ಯಾಂಗ ಮಿತಿಗೆ ಅನುಗುಣವಾಗಿ ಸ್ವಸಹಾಯ ಸಂಘಗಳ ಮೂಲಕ ಸಾಲ ನೀಡಲು ₹ 50 ಕೋಟಿಯ "ದಿವ್ಯಾಂಗ ಕಲ್ಯಾಣ ನಿಧಿ"ಯನ್ನು ಸ್ಥಾಪಿಸಲಾಗುವುದು.
- ಮನೆಗಳು, ಮೆಟ್ರೊ ಸ್ಟೇಷನ್‌ಗಳು ಮತ್ತು ಬಸ್‌ಸ್ಟಾಪ್‌ಗಳಲ್ಲಿ ಅಂಗವಿಕಲ ಸ್ನೇಹಿ ಶೌಚಾಲಯಗಳನ್ನು ಒದಗಿಸಲಾಗುವುದು.
- ದಿವ್ಯಾಂಗರು ಸುಲಭವಾಗಿ ತರಗತಿಗಳಿಗೆ ತಲುಪುವಂತಾಗಲು ಎಲ್ಲಾ ಸರ್ಕಾರಿ ಶಾಲೆಗಳು ಮತ್ತು ಕಟ್ಟಡಗಳಲ್ಲಿ ಇಳಿಜಾರು ವ್ಯವಸ್ಥೆಯನ್ನು ಒದಗಿಸಲಾಗುವುದು.
- ದಿವ್ಯಾಂಗ ಯುವಕ, ಯುವತಿಯರು ರಾಜ್ಯಾದ್ಯಂತ ಸರ್ಕಾರಿ ಕೆಲಸ ಪಡೆಯುವಂತಾಗಲು ವಿಶೇಷ ಆಯ್ಕೆ ಅಭಿಯಾನವನ್ನು ನಡೆಸಲಾಗುವುದು.

## ಆಟೋ ಚಾಲಕರ ಕಲ್ಯಾಣ

- ಹೊಸ ಎಲೆಕ್ಟ್ರಿಕ್ ಆಟೋಗಳ ಖರೀದಿಯಲ್ಲಿ ಶೇ 50ರಷ್ಟು ಸಬ್ಸಿಡಿ ನೀಡಲು ₹ 50 ಕೋಟಿ ಅನುದಾನದ ಜತೆ "ವಿಕಾಸ ವಾಹಿನಿ ಆಟೋ ಚಾಲಕರ ಕಲ್ಯಾಣ ಮಂಡಳಿ" ರಚಿಸಲಾಗುವುದು.
- ಆಟೋ ಚಾಲಕರಿಗೆ ₹ 3 ಲಕ್ಷದಷ್ಟು ಅಪಘಾತ ವಿಮೆಯನ್ನು ಒದಗಿಸಲಾಗುವುದು.
- ಎಲ್ಲಾ ಆಟೋ ಚಾಲಕರು ಮುದ್ರಾ ಸಾಲದ ಲಾಭ ಪಡೆಯುವಂತಾಗಲು ಜಾಗೃತಿ ಅಭಿಯಾನವನ್ನು ನಡೆಸಲಾಗುವುದು.
- ಭಾಗ್ಯಲಕ್ಷ್ಮಿ ಯೋಜನೆಯಡಿ ಎಲ್ಲಾ ಆಟೋ ಚಾಲಕರ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡಲಾಗುವುದು.

## ಕ್ಯಾಬ್ ಚಾಲಕರ ಕಲ್ಯಾಣ

- ಕ್ಯಾಬ್ ಚಾಲಕರ ಕಲ್ಯಾಣಕ್ಕಾಗಿ ₹ 50 ಕೋಟಿ ಮೊತ್ತದ "ವಿಕಾಸ ವಾಹಿನಿ ಕ್ಯಾಬ್ ಚಾಲಕರ ಕಲ್ಯಾಣ ಮಂಡಳಿ"ಯನ್ನು ರೂಪಿಸಲಾಗುವುದು.
- ಕ್ಯಾಬ್ ಚಾಲಕರಿಗೆ ₹ 3 ಲಕ್ಷದವರೆಗೆ ಅಪಘಾತ ವಿಮೆಯನ್ನು ಒದಗಿಸಲಾಗುವುದು.
- ದೀರ್ಘ ಕಾಲ ಕೆಲಸ ಮಾಡುವ ಕ್ಯಾಬ್ ಚಾಲಕರಿಗೆ ಕ್ಯಾಬ್ ಕಂಪನಿಗಳು ನಗರದಲ್ಲಿ ಸುಸಜ್ಜಿತ ವಿಶ್ರಾಂತಿ ತಾಣಗಳನ್ನು ನೀಡುವಂತೆ ನೋಡಿಕೊಳ್ಳಲಾಗುವುದು.
- ಭಾಗ್ಯಲಕ್ಷ್ಮಿ ಯೋಜನೆಯಡಿ ಎಲ್ಲಾ ಕ್ಯಾಬ್ ಚಾಲಕರ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡಲಾಗುವುದು.

## ಮಾಜಿ ಸೈನಿಕರ ಕಲ್ಯಾಣ

- ಮಾಜಿ ಸೈನಿಕರನ್ನು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಆದ್ಯತೆಯ ಮೇಲೆ ನೇಮಕ ಮಾಡಿಕೊಳ್ಳಲಾಗುವುದು.
- ಬುಡಕಟ್ಟು ಜನಾಂಗದ ಯುವಕರು ಬಿಎಸ್‌ಎಫ್, ಸಿಆರ್‌ಪಿಎಫ್ ಮತ್ತು ಪೊಲೀಸ್ ಪಡೆಗಳಿಗೆ ಸೇರಲು ನೆರವಾಗಲು ಚಿತ್ರದುರ್ಗ, ಮೈಸೂರು, ಉತ್ತರ ಕನ್ನಡ ಮತ್ತು ಬಾಗಲಕೋಟೆಯಲ್ಲಿ ತರಬೇತಿ ಕೇಂದ್ರಗಳಲ್ಲಿ ಕಾರ್ಯ ಚಟುವಟಿಕೆಗಳನ್ನು ನೋಡಿಕೊಳ್ಳಲು ಸೂಕ್ತ ಮಾಜಿ ಸೈನಿಕರನ್ನು ನೇಮಿಸಿಕೊಳ್ಳಲಾಗುವುದು.
- ಮಾಜಿ ಸೈನಿಕರು ತಮ್ಮ ಅನುಭವವನ್ನು ಮಕ್ಕಳೊಂದಿಗೆ ಹಂಚಿಕೊಳ್ಳಲು ಶಾಲೆ ಮತ್ತು ಕಾಲೇಜುಗಳಲ್ಲಿ ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುವುದು.

## ತುರ್ತು ಪರಿಸ್ಥಿತಿ ಹೋರಾಟಗಾರರಿಗೆ ಸರ್ಕಾರಿ ಸೌಲಭ್ಯ

- 1975ರ ತುರ್ತು ಪರಿಸ್ಥಿತಿಯಲ್ಲಿ ಜೈಲು ಶಿಕ್ಷೆ ಅನುಭವಿಸಿದ ಹೋರಾಟಗಾರರಿಗೆ ಇತರೆ ರಾಜ್ಯಗಳಲ್ಲಿ ಇರುವಂತೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸುವುದು.

## ವಕೀಲರ ಕಲ್ಯಾಣ

- ಹೈಕೋರ್ಟ್‌ನ ಎಲ್ಲಾ ಪೀಠಗಳಲ್ಲಿ ವಕೀಲರಿಗಾಗಿ "ಪ್ಲಗ್ ಅಂಡ್ ಪ್ಲೇ" ಕಚೇರಿ ಒದಗಿಸುವುದು. ಇದರಲ್ಲಿ ಶೇ 30ರಷ್ಟು ಪ್ರದೇಶವನ್ನು ಐದು ವರ್ಷಗಳಿಗಿಂತಲೂ ಕಡಿಮೆ ಕಾಲ ವಕೀಲರ ಸಂಘದ ಸದಸ್ಯರಾಗಿರುವ ವಕೀಲರಿಗೆ ನೀಡಲಾಗುವುದು.
- ಯುವ ವಕೀಲರಿಗೆ ಪುಸ್ತಕ ಮತ್ತು ವೃತ್ತಪತ್ರಿಕೆಗಳನ್ನು ಖರೀದಿಸಲು ಆರ್ಥಿಕ ನೆರವು ಒದಗಿಸಲಾಗುವುದು.

## ವಾತ್ಸಲ್ಯ ಗ್ರಾಮ

- ವಿಧವೆಯರು, ಪರಿತ್ಯಕ್ತ ಮಹಿಳೆಯರು, ನಿರ್ಗತಿಕರು, ಹಿರಿಯ ನಾಗರಿಕರು ಮತ್ತು ಇತರ ದುರ್ಬಲ ಸಂಗಡಗಳಿಗೆ ಪೂರಕ ಬೆಂಬಲದ ಮೂಲಕ ಉತ್ತಮ ಗುಣಮಟ್ಟದ ಬದುಕನ್ನು ಒದಗಿಸಲು ಸಮುದಾಯ ಮಾದರಿ ಆಧರಿಸಿ ಎಲ್ಲಾ ಜಿಲ್ಲೆಗಳಲ್ಲಿ ವಾತ್ಸಲ್ಯ ಗ್ರಾಮಗಳ ರಚನೆ ಮಾಡಲಾಗುವುದು.





# 5



# ದಕ್ಷ ಆಡಳಿತ ಸುರಕ್ಷಿತ ಕರ್ನಾಟಕ

## ಪರಿಣಾಮಕಾರಿ ಆಡಳಿತ

- ಕರ್ನಾಟಕ ಜ್ಞಾನ ಆಯೋಗ ಮತ್ತು ರಾಜ್ಯ ಯೋಜನಾ ಮಂಡಳಿ ಬದಲಿಸಿ ಕೀರ್ತಿ (KIRTI) ಆಯೋಗ (ಕರ್ನಾಟಕ ಇನ್ಸ್‌ಟಿಟ್ಯೂಟ್ ಫಾರ್ ರಿಫಾರ್ಮೇಟಿವ್ ಅಂಡ್ ಟ್ರಾನ್ಸ್‌ಫಾರ್ಮೇಟಿವ್ ಇನಿಶಿಯೇಟಿವ್ಸ್) ದ ಸ್ಥಾಪನೆ ಮಾಡಲಾಗುವುದು.
- ಕಾಂಗ್ರೆಸ್ ಸರ್ಕಾರ ದುರ್ಬಲಗೊಳಿಸಿದ್ದ ಸಕಾಲ ಕಾಯಿದೆಯನ್ನು ಬಲಪಡಿಸಿ ಸಕಾಲ ಕಾಯಿದೆಯ ವ್ಯಾಪ್ತಿಯನ್ನು ಎಲ್ಲಾ ಸರಕಾರಿ ಸೇವೆಗಳಿಗೆ ವಿಸ್ತರಿಸಲಾಗುವುದು.
- ಮೂಲಸೌಕರ್ಯ ಯೋಜನೆಗಳ ತ್ವರಿತ ಅನುಷ್ಠಾನಕ್ಕಾಗಿ ಮುಖ್ಯಮಂತ್ರಿ ಕಚೇರಿಯ ಅಡಿಯಲ್ಲಿ "ನವ ಕರ್ನಾಟಕ ನಿರ್ಮಾಣ ಟಾಸ್ಕ್ ಫೋರ್ಸ್" ರಚಿಸಲಾಗುವುದು.
- ಎಲ್ಲಾ ಸರ್ಕಾರಿ ದಾಖಲೆಗಳನ್ನು ಡಿಜಿಟೈಸ್ ಮಾಡಿ ಮತ್ತು ಡೇಟಾ ಹಂಚಿಕೆಗಾಗಿ ಒಂದೇ ವೇದಿಕೆಯ ಸ್ಥಾಪನೆ ಮಾಡಲಾಗುವುದು.
- ಗವರ್ನಮೆಂಟ್ ಇ-ಮಾರ್ಕೆಟ್ ಪ್ಲೇಸ್ (ಜಿಇಎಂ)ನ ರಾಷ್ಟ್ರೀಯ ಜಾಲದ ಅಂಗವಾಗಿ ಸರಕು ಮತ್ತು ಸೇವೆಗಳ ಪಡೆಯುವಿಕೆಯನ್ನು ಪಾರದರ್ಶಕ ರೀತಿಯಲ್ಲಿ ಕೈಗೊಳ್ಳಲಾಗಿದೆಯೆಂದು ಖಚಿತಪಡಿಸಿ ಕೊಳ್ಳಲಾಗುವುದು.
- ಅಧಿಕಾರಕ್ಕೆ ಬಂದ 90 ದಿನಗಳಲ್ಲಿ ಸಿ ಮತ್ತು ಡಿ ವರ್ಗದ ಸರ್ಕಾರಿ ನೌಕರರ ನೇಮಕ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು.
- ಸಿ ಮತ್ತು ಡಿ ವರ್ಗದ ನೌಕರರ ನೇಮಕಾತಿ ಪ್ರಕ್ರಿಯೆಯಲ್ಲಿ ಸಂದರ್ಶನ ರದ್ದುಗೊಳಿಸಲಾಗುವುದು.

## ಹಣಕಾಸಿನ ನಿರ್ವಹಣೆ

- ಸರಕಾರ ಅಸ್ತಿತ್ವಕ್ಕೆ ಬಂದ 100 ದಿನಗಳ ಒಳಗಾಗಿ ಕಾಂಗ್ರೆಸ್ ಸರ್ಕಾರದ ಆರ್ಥಿಕ ನಿರ್ವಹಣೆ ಕುರಿತ ಶ್ವೇತ ಪತ್ರವನ್ನು ಬಿಡುಗಡೆ ಮಾಡಲಾಗುವುದು.
- ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳ ವೆಚ್ಚವನ್ನು ಒಂದೆ-ಬಾರಿಯ ಶೂನ್ಯ-ಬೇಸ್ ಬಜೆಟ್ ವ್ಯವಹಾರದ ಮೂಲಕ ತಾರ್ಕಿಕಗೊಳಿಸಲಾಗುವುದು.
- ಸರ್ಕಾರ ಮತ್ತು ರಾಜ್ಯ ಸಾರ್ವಜನಿಕ ಉದ್ದಿಮೆಗಳ ಪಿಎಸ್‌ಯು ಸರಬರಾಜುದಾರರಿಗೆ ಮತ್ತು ಮಾರಾಟಗಾರರಿಗೆ ಆರ್‌ಎಕ್ಸ್‌ಐಎಲ್ (ರಿಸೀವಬಲ್ಸ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್) ಜೊತೆ ನೋಂದಾಯಿಸಲು ಮತ್ತು ಪರಿಶೀಲನೆ ಪಡೆಯುವುದನ್ನು ಕಡ್ಡಾಯಗೊಳಿಸಲಾಗುವುದು.

## ಭ್ರಷ್ಟಾಚಾರ ವಿರೋಧಿ ಕ್ರಮ

- ನಮ್ಮ ಮೊದಲ ಸಂಪುಟ ಸಭೆಯಲ್ಲಿ ಲೋಕಾಯುಕ್ತವನ್ನು ಅದರ ಸಂಪೂರ್ಣ ಅಧಿಕಾರದೊಂದಿಗೆ ಮರುಸ್ಥಾಪನೆಗೊಳಿಸಲಾಗುವುದು.
- ಭ್ರಷ್ಟಾಚಾರದ ವಿರುದ್ಧ ದೂರು ನೀಡಲು ನಾಗರಿಕರಿಗೆ ಸಹಾಯವಾಗುವಂತೆ ನೇರವಾಗಿ ಮುಖ್ಯಮಂತ್ರಿ ಕಚೇರಿ ಅಡಿಯಲ್ಲಿ 24x7 "ಭ್ರಷ್ಟಾಚಾರ ವಿರೋಧಿ ಸಹಾಯವಾಣಿ" ಪ್ರಾರಂಭಿಸಲಾಗುವುದು.
- ಭ್ರಷ್ಟಾಚಾರ ಬಹಿರಂಗಪಡಿಸುವವರನ್ನು ರಕ್ಷಿಸಲು ಕರ್ನಾಟಕ ವಿಶಲ್ ಬ್ಲೋವರ್ ಕಾಯಿದೆಯನ್ನು ಜಾರಿಗೊಳಿಸಲಾಗುವುದು.
- ನಮ್ಮ ಸರಕಾರ ಅಧಿಕಾರಕ್ಕೆ ಬಂದ 30 ದಿನದೊಳಗಾಗಿ ರಾಜ್ಯದಲ್ಲಿ ಮರಳು ಮಾಫಿಯಾ, ಭೂಮಾಫಿಯಾ ಮತ್ತು ಕಾನೂನುಬಾಹಿರ ಗಣಿಗಾರಿಕೆ ಮಾಫಿಯಾ ಮುಂತಾದ ಮಾಫಿಯಾ ರಾಜ್ ಅನ್ನು ಕೊನೆಗೊಳಿಸಲು ಶಾಶ್ವತ ವಿಶೇಷ ಕಾರ್ಯ ಪಡೆ (ಎಸ್‌ಟಿಎಫ್) ಸ್ಥಾಪಿಸಲಾಗುವುದು.

## ಸರ್ಕಾರಿ ಅಧಿಕಾರಿಗಳ ಕಲ್ಯಾಣ

- ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವ ಸರ್ಕಾರಿ ಅಧಿಕಾರಿಗಳಿಗಾಗಿ ಏಕೀಕೃತ ವಸತಿ ಸಮುಚ್ಚಯಗಳನ್ನು ರಚಿಸಲಾಗುವುದು.
- ಪ್ರತಿ ಸರ್ಕಾರಿ ಕಚೇರಿಯ ಆವರಣದಲ್ಲಿ ಶಿಶು ಕೇಂದ್ರವನ್ನು ನಡೆಸಲಾಗುವುದು.

## ಕಾನೂನು ಸುವ್ಯವಸ್ಥೆಗೆ ದಿಟ್ಟ ಕ್ರಮಗಳು

- ನಾಗರಿಕರು, ವಿಶೇಷವಾಗಿ ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರ ಸುರಕ್ಷತೆಯನ್ನು ಹೆಚ್ಚಿಸಲು ರಾಜ್ಯಾದ್ಯಂತ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸುತ್ತೇವೆ.
- ಬೆಂಗಳೂರಿನಲ್ಲಿ "ಕರ್ನಾಟಕ ಫೋರೆನ್ಸಿಕ್ ಸೈನ್ಸಸ್ ಯುನಿವರ್ಸಿಟಿ (ಕೆಎಫ್‌ಎಸ್‌ಯು)" ಸ್ಥಾಪನೆ ಮತ್ತು ಅದರ ಭಾಗವಾಗಿ ವಿಶ್ವದರ್ಜೆಯ ಸೈಬರ್ ಫೋರೆನ್ಸಿಕ್ಸ್ ಪ್ರಯೋಗಾಲಯವನ್ನು ನಿರ್ಮಿಸಲಾಗುವುದು.
- ಮೈಸೂರು, ಧಾರವಾಡ, ಕಲಬುರಗಿ ಮತ್ತು ಮಂಗಳೂರಿನಲ್ಲಿ ನಾಲ್ಕು ಹೊಸ ಸೈಬರ್ ಫೋರೆನ್ಸಿಕ್ಸ್ ಪ್ರಯೋಗಾಲಯಗಳ ಸ್ಥಾಪನೆ.
- ಮಂಗಳೂರಿನಲ್ಲಿ ರಾಷ್ಟ್ರೀಯ ತನಿಖಾ ಏಜೆನ್ಸಿಯ ಕಚೇರಿ ಸ್ಥಾಪನೆಗೆ ಕೇಂದ್ರ ಸರ್ಕಾರಕ್ಕೆ ಸಹಕಾರ.

- ಕೋಮುಭಾವನೆಯನ್ನು ಪ್ರಚೋದಿಸುವ ಪಿಎಫ್‌ಐ ಮತ್ತು ಕೆಎಫ್‌ಡಿ ಮುಂತಾದ ಗುಂಪುಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು.
- ಕೋಮುವಾದಿ ಪ್ರೇರೇಪಿತ ಕೊಲೆಗಳ ತ್ವರಿತ ತನಿಖೆ ಮತ್ತು ಕಾನೂನು ಕ್ರಮಕ್ಕಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ಮತ್ತು ತ್ವರಿತಗತಿ ನ್ಯಾಯಾಲಯಗಳ ಸ್ಥಾಪನೆ ಮಾಡಲಾಗುವುದು.

## ಪೊಲೀಸ್ ಪಡೆಯ ಸುಧಾರಣೆ

- ರಾಜ್ಯ ಪೊಲೀಸ್ ಪಡೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತ್ವರಿತ ಗತಿಯಲ್ಲಿ ಭರ್ತಿ ಮಾಡಲಾಗುವುದು.
- ರಾಜ್ಯದಲ್ಲಿರುವ ಪ್ರತಿಯೊಂದು ಪೊಲೀಸ್ ಠಾಣೆಯಲ್ಲಿ ಆಧುನಿಕ ಭದ್ರತಾ ಸಲಕರಣೆಗಳು, ಲಾಕ್‌ಅಪ್‌ಗಳಲ್ಲಿ ಶೌಚಾಲಯಗಳು, ಸಿ.ಸಿ.ಟಿ.ವಿ ಕ್ಯಾಮೆರಾಗಳು ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗುವುದು.
- ಪೊಲೀಸ್ ಸಿಬ್ಬಂದಿ ಮಕ್ಕಳಿಗೆ 15 ಹೊಸ ಪೊಲೀಸ್ ಪಬ್ಲಿಕ್ ಶಾಲೆಗಳನ್ನು ನಿರ್ಮಾಣ ಮಾಡಲಾಗುವುದು.
- ಪೊಲೀಸ್ ಸಿಬ್ಬಂದಿಯ ದೈಹಿಕ ಕ್ಷಮತೆ ಮತ್ತು ಒತ್ತಡ ನಿರ್ವಹಣೆಗಾಗಿ ಆಧುನಿಕ ಜಿಮ್ ಸೌಲಭ್ಯಗಳನ್ನು ಎಲ್ಲಾ ಪೊಲೀಸ್ ಠಾಣೆಯಲ್ಲಿ ಒದಗಿಸಲಾಗುವುದು.
- ತಮ್ಮ ಕಾರ್ಯಾವಧಿಯಲ್ಲೇ ಪ್ರಾಣತ್ಯಾಗ ಮಾಡಿದ ಅಥವಾ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದ ಪೊಲೀಸ್ ಸಿಬ್ಬಂದಿ ಕುಟುಂಬಗಳಿಗೆ ಜೀವನಾಧಾರವನ್ನು ಕಲ್ಪಿಸಲಾಗುವುದು.

## ನ್ಯಾಯಾಂಗ ಸುಧಾರಣೆ

- ಕೆಳ ನ್ಯಾಯಾಲಯದಲ್ಲಿರುವ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಲಾಗುವುದು.
- ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಿಸಿದ ಅಪರಾಧ ಪ್ರಕರಣಗಳ ಇತ್ಯರ್ಥಕ್ಕಾಗಿ ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ಮತ್ತು ಕಲಬುರಗಿ ನಗರಗಳಲ್ಲಿ ತ್ವರಿತಗತಿ ನ್ಯಾಯಾಲಯಗಳ ಸ್ಥಾಪನೆ ಮಾಡಲಾಗುವುದು.
- ನ್ಯಾಯಾಂಗ ಸೇವೆಯ ರೀತಿಯಲ್ಲಿ ಪರ್ಯಾಯ ವಿವಾದ ಪರಿಹಾರ (ಎಡಿಆರ್) ರಾಜ್ಯ ಸೇವೆಯ ಸ್ಥಾಪನೆ ಮಾಡಲಾಗುವುದು.
- ಎಲ್ಲಾ ರಾಜ್ಯ ಕಾನೂನುಗಳನ್ನು ಮೌಲ್ಯಮಾಪನ ಮಾಡಲು, ಬಳಕೆಯಲ್ಲಿಲ್ಲದ ಕಾನೂನನ್ನು ರದ್ದುಪಡಿಸಿ ಸಂಕೀರ್ಣ ಕಾನೂನುಗಳನ್ನು ಸರಳೀಕರಿಸಲಾಗುವುದು.
- ಕೆಳ ನ್ಯಾಯಾಲಯದ ಎಲ್ಲಾ ದಾಖಲೆಗಳನ್ನು ತ್ವರಿತ ಗತಿಯಲ್ಲಿ ಸುಲಭವಾಗಿ ಕೈಗೆಟಕುವಂತೆ ಡಿಜಿಟಲೀಕರಣ ಮಾಡಲಾಗವುದು.




ಕರ್ನಾಟಕ ಉಚ್ಚ ನ್ಯಾಯಾಲಯ
HIGH COURT OF KARNATAKA

# 6



# ಶಿಕ್ಷಣ ಕ್ಷೇತ್ರಕ್ಕೆ ನವ ಚೈತನ್ಯ

ಬಿಜೆಪಿ

## ಶಾಲೆಗಳ ಸುಧಾರಣೆ

- "ಕರ್ನಾಟಕ ಶಾಲಾ-ಕಾಲೇಜು ಶುಲ್ಕನಿಯಂತ್ರಣ ಪ್ರಾಧಿಕಾರದ" ಸ್ಥಾಪನೆ.
- ಶಿಕ್ಷಣ ಹಕ್ಕು ಕಾಯ್ದೆ ಉಲ್ಲಂಘಿಸಿ ವಿದ್ಯಾರ್ಥಿಗಳಿಗೆ ಶಿಕ್ಷಣ ನಿರಾಕರಿಸುವುದು, ತಾರತಮ್ಯ ತೋರುವುದು ಶಿಕ್ಷಾರ್ಹ ಅಪರಾಧವಾಗಲಿದೆ. ಆರ್‌ಟಿಇ ಯೋಜನೆಯಡಿ ಸೀಟ್ ಪಡೆದ ಮಕ್ಕಳಿಂದ ಶಾಲೆಗಳು ಹೆಚ್ಚು ಹಣ ಪಡೆದರೆ ಮಕ್ಕಳ ಹಕ್ಕು ಶಿಕ್ಷಣಾ ಕಾಯ್ದೆ ಅಡಿ ಶಿಕ್ಷಾರ್ಹ ಅಪರಾಧವಾಗಲಿದೆ.
- ಸಣ್ಣ ಮಕ್ಕಳಿಗೆ ಪ್ರಾರಂಭದಿಂದಲೂ ಗುಣಮಟ್ಟದ ಶಿಕ್ಷಣ ಪಡೆಯಲು ಸಾಧ್ಯವಾಗುವಂತೆ ಎಲ್ಲ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ನರ್ಸರಿ ಆರಂಭಿಸಲಾಗುವುದು.
- ಯಾದಗಿರಿ, ಕೊಪ್ಪಳ, ರಾಯಚೂರು, ಬಳ್ಳಾರಿ ಮತ್ತು ಚಾಮರಾಜನಗರಗಳಂತಹ ಹಿಂದುಳಿದ ಜಿಲ್ಲೆಗಳಲ್ಲಿ ವಸತಿ ಶಾಲೆಗಳ ಸಂಖ್ಯೆ ಹೆಚ್ಚಿಸಲಾಗುವುದು.
- ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಸಲುವಾಗಿ ಸರಕಾರಿ ಶಾಲೆಗಳಲ್ಲಿ ಗಣಿತ ಕಲಿಕೆ ಹಾಗೂ ಓದಿನ ಕೌಶಲ್ಯ ಹೆಚ್ಚಿಸಲು ನಿಯಮಿತ ನಿಗಾ ವ್ಯವಸ್ಥೆ ಜತೆಗೆ ಮಾಹಿತಿ ಆಧಾರಿತಕ್ರಿಯಾ ಯೋಜನೆ ಪ್ರಾರಂಭಿಸಲಾಗುವುದು.
- ಒಂದನೇ ತರಗತಿಯಿಂದಲೇ ಸರ್ಕಾರಿ ಶಾಲೆಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಒಂದು ಭಾಷೆಯಾಗಿ ಪರಿಚಯಿಸಲಾಗುವುದು.
- ಎಲ್ಲ ಸರ್ಕಾರಿ ಶಾಲೆಗಳಲ್ಲಿ 4ನೇ ತರಗತಿಯಿಂದ ಕಂಪ್ಯೂಟರ್ ತರಬೇತಿ ಆರಂಭಿಸಲಾಗುವುದು.
- ಶಾಲಾ ಪಠ್ಯಪುಸ್ತಕಗಳಲ್ಲಿನ ದೋಷ ಸರಿಪಡಿಸಲು ಖ್ಯಾತ ಇತಿಹಾಸಕಾರರು ಹಾಗೂ ಶಿಕ್ಷಣ ತಜ್ಞರ ಸಮಿತಿ ರಚನೆ ಮಾಡಲಾಗುವುದು.
- ಎಲ್ಲ ಸರ್ಕಾರಿ ಶಾಲೆಗಳಲ್ಲಿ 9 ಹಾಗೂ ಅದರ ಮುಂದಿನ ತರಗತಿಗಳಿಗೆ ಔದ್ಯೋಗಿಕ ತರಬೇತಿ ಮಾದರಿ ಪರಿಚಯಿಸಲಾಗುವುದು.
- ಪ್ರೌಢ ಶಾಲೆಗಳಲ್ಲಿ ಇ-ಕಲಿಕೆಗಾಗಿ ಪ್ರೊಜೆಕ್ಟರ್ ಮತ್ತು ವೀಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯ ಒದಗಿಸಲಾಗುವುದು.
- ಶಿಕ್ಷಣ ವ್ಯವಸ್ಥೆ ಸುಧಾರಣೆಗಾಗಿ ನಾಗರಿಕರ ಸಹಯೋಗದೊಂದಿಗೆ ಶಾಲೆಗಳನ್ನು ದತ್ತು ಪಡೆಯುವ "ಅಡಾಪ್ಟ್ ಎ ಸ್ಕೂಲ್"ಯೋಜನೆ ಜಾರಿಗೊಳಿಸಲಾಗುವುದು.

## ಉನ್ನತ ಶಿಕ್ಷಣದಲ್ಲಿ ಸುಧಾರಣೆ

- ₹ 1,300 ಕೋಟಿ ಅನುದಾನದಲ್ಲಿ ಅಗತ್ಯವಿರುವ ತಾಲೂಕು ಕೇಂದ್ರಗಳಲ್ಲಿ ಹೊಸ ಪದವಿ ಪೂರ್ವ ಕಾಲೇಜುಗಳ ಸ್ಥಾಪನೆ ಮತ್ತು ಅಸ್ತಿತ್ವದಲ್ಲಿರುವ ಕಾಲೇಜುಗಳನ್ನು ಮೇಲ್ದರ್ಜೆಗೇರಿಸಲಾಗುವುದು.
- "ರಾಷ್ಟ್ರಕವಿ ಕುವೆಂಪು ಜ್ಞಾನ ಯೋಜನೆ"ಯಡಿ 70 ಹೊಸ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ನಿರ್ಮಾಣ ಮತ್ತು ಅಸ್ತಿತ್ವದಲ್ಲಿರುವ ಕಾಲೇಜುಗಳನ್ನು ಮೇಲ್ದರ್ಜೆಗೇರಿಸಲು ₹ 3,000 ಕೋಟಿ ಅನುದಾನ ನೀಡಲಾಗುವುದು.
- ವೃತ್ತಿಪರ ಕೋರ್ಸುಗಳನ್ನು ಹೊರತುಪಡಿಸಿ ಪದವಿ ಮಟ್ಟದವರೆಗೆ ಎಲ್ಲ ವಿದ್ಯಾರ್ಥಿ- ವಿದ್ಯಾರ್ಥಿನಿಯರಿಗೆ ಸರ್ಕಾರಿ ಕಾಲೇಜುಗಳಲ್ಲಿ ಉಚಿತ ಶಿಕ್ಷಣ ನೀಡಲಾಗುವುದು.
- ರಾಯಚೂರಿನಲ್ಲಿ ರಾಜ್ಯ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು.
- ಕಾಪುವಿನಲ್ಲಿ ವಿಶ್ವದರ್ಜೆಯ ಸಾಗರ ಅಧ್ಯಯನ ಕೇಂದ್ರ ಸ್ಥಾಪಿಸಲಾಗುವುದು.
- ಸುರತ್ಕಲ್‌ನಲ್ಲಿ ಪೆಟ್ರೋಲಿಯಂ ಮತ್ತು ಇಂಧನ ಅಧ್ಯಯನ ವಿಶ್ವವಿದ್ಯಾಲಯ ತೆರೆಯಲಾಗುವುದು
- ಆಡಳಿತ ಸುಧಾರಣೆಗೆ ಮೈಸೂರಿನಲ್ಲಿ "ಬಿಗ್ ಡಾಟಾ ಅನಾಲಿಟಿಕ್ಸ್ ಕಾಲೇಜು" ಸ್ಥಾಪಿಸಲಾಗುವುದು.
- ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್‌ಎಎಲ್) ಸಹಭಾಗಿತ್ವದಲ್ಲಿ ಬೆಳಗಾವಿಯಲ್ಲಿ ಏರೋನಾಟಿಕಲ್ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು.
- ಕೆಂಗೇರಿಯಲ್ಲಿ ಅಪ್ಲೈಡ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಸಂಶೋಧನಾ ಸಂಸ್ಥೆ ಸ್ಥಾಪಿಸಲಾಗುವುದು.
- ಕ್ಲೌಡ್ ಕಂಪ್ಯೂಟಿಂಗ್ ಸೇವೆ, ಬ್ಲಾಕ್‌ಚೈನ್, 3D ಮುದ್ರಣ, ಅಪ್ಲೈಡ್ ಸೈನ್ಸ್ ಫಾರ್ ಇಂಟರ್ನೆಟ್ ಆಫ್ ಥಿಂಗ್ಸ್ (ಐಒಟಿ) ಹಾಗೂ ಅತ್ಯಾಧುನಿಕ ಸಂಶೋಧನೆಗಾಗಿ ತುಮಕೂರಿನಲ್ಲಿ ತಾಂತ್ರಿಕ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು.
- ಆನ್‌ಲೈನ್ ಶಿಕ್ಷಣ ಕ್ಷೇತ್ರದ ಸಹಯೋಗದಲ್ಲಿ ದೊಡ್ಡ ಮಟ್ಟದ ಮುಕ್ತ ಆನ್‌ಲೈನ್ - ಕೋರ್ಸ್ (MOOC) ಪರಿಚಯಿಸಲಾಗುವುದು.
- ವೈಫೈ ಸೌಲಭ್ಯ ಕಲ್ಪಿಸುವ ಮೂಲಕ ಎಲ್ಲ ಕಾಲೇಜು, ವಿಶ್ವವಿದ್ಯಾಲಯಗಳ ಡಿಜಿಟಲೀಕರಣ ಮಾಡಲಾಗುವುದು.

# ವಿದ್ಯಾರ್ಥಿ ಕಲ್ಯಾಣ

- ಬಡ ಮತ್ತು ಹಿಂದುಳಿದ ವಿದ್ಯಾರ್ಥಿಗಳ ಅನುಕೂಲಕ್ಕೆ ಅತ್ಯಾಧುನಿಕ ಸೌಲಭ್ಯವಿರುವ 750 ವಸತಿ ನಿಲಯಗಳನ್ನು ಸ್ಥಾಪಿಸಲಾಗುವುದು.
- ಜೆಇಇ, ಕ್ಯಾಟ್, ಕೆಪಿಎಸ್ಸಿ ಮತ್ತು ಯುಪಿಎಸ್ಸಿ ಯಂತಹ ಪ್ರವೇಶ ಪರೀಕ್ಷೆ ಬರೆಯುವ ಎಸ್ಸಿ / ಎಸ್ಟಿ / ಒಬಿಸಿ / ಬಿಪಿಎಲ್ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.
- ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರಗಳಲ್ಲಿ ಪಿಎಚ್.ಡಿ ಮಾಡುವ ವಿದ್ಯಾರ್ಥಿಗಳ ಶಿಷ್ಯವೇತನಕ್ಕಾಗಿ ₹ 10 ಕೋಟಿ "ಸರ್ವಜ್ಞ ಫಂಡ್" ಸ್ಥಾಪಿಸಲಾಗುವುದು.
- ಉನ್ನತ ಶಿಕ್ಷಣ ಪಡೆಯುವ ಬಿಪಿಎಲ್ ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲ. ಪದವಿ ವಿದ್ಯಾರ್ಥಿಗಳಿಗೆ ₹ 3 ಲಕ್ಷ ಮತ್ತು ಉನ್ನತ ಶಿಕ್ಷಣ ವಿದ್ಯಾರ್ಥಿಗಳಿಗೆ ₹ 5 ಲಕ್ಷದವರೆಗೂ ಸಾಲ ನೀಡಲಾಗುವುದು.
- ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಮತ್ತು ಸಾಲ ನೀಡುವ ವ್ಯವಸ್ಥೆ ಕ್ರಮಬದ್ಧಗೊಳಿಸಲು "ಕರ್ನಾಟಕ ವಿದ್ಯಾರ್ಥಿವೇತನ ಮತ್ತು ಸಾಲ ಪ್ರಾಧಿಕಾರ" ಸ್ಥಾಪಿಸಲಾಗುವುದು.

# ಶಿಕ್ಷಕರ ಕಲ್ಯಾಣ

- ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಲಾಗುವುದು.
- ಪ್ರತಿ ಜಿಲ್ಲೆಯಲ್ಲಿರುವ ಶಿಕ್ಷಣ ತರಬೇತಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುವುದು.
- ಬೋಧನಾ ಕೌಶಲ್ಯ ಸುಧಾರಿಸಲು ಹೋಬಳಿ ಮಟ್ಟದಲ್ಲಿ ಶಿಕ್ಷಕರಿಗೆ ಕಡ್ಡಾಯ ಅರ್ಧ ವಾರ್ಷಿಕ ತರಬೇತಿ ಕಾರ್ಯಗಾರ ನಡೆಸಲಾಗುವುದು.
- ಪ್ರತಿ ಜಿಲ್ಲೆಯ ಸರ್ಕಾರಿ ಶಾಲೆಗಳ ಉತ್ತಮ ಶಿಕ್ಷಕರಿಗೆ ವಾರ್ಷಿಕ ನಗದು ಬಹುಮಾನ ನೀಡಲಾಗುವುದು.
- ಶಾಲೆಗಳಲ್ಲಿ ಬೋಧಿಸುತ್ತಲೇ ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಬಯಸುವ ಶಿಕ್ಷಕರಿಗೆ ಶುಲ್ಕದಲ್ಲಿ ರಿಯಾಯಿತಿ ನೀಡಿ ಪ್ರೋತ್ಸಾಹಿಸಲಾಗುವುದು.




POST-GRADUATE BLOCK
KA 12
2315

# 7



# ಜನರ ಆರೋಗ್ಯ ನಮ್ಮ ಆದ್ಯತೆ

## ಆರೋಗ್ಯ ರಂಗದಲ್ಲಿ ವಿಶೇಷ ಮೂಲಭೂತ ಸೌಕರ್ಯಗಳು

- ಆಲ್ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಏಮ್ಸ್) ಮಾದರಿಯಲ್ಲಿ 2 "ಕರ್ನಾಟಕ ರಾಜ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆ" ಗಳ ಸ್ಥಾಪನೆ.
- ಕೇಂದ್ರ ಸರ್ಕಾರದ ಅನುದಾನವನ್ನು ಬಳಸಿಕೊಂಡು ಎಲ್ಲಾ ಜಿಲ್ಲಾಸ್ಪತ್ರೆಗಳನ್ನು ಮಲ್ಟಿ - ಸ್ಪೆಷಾಲಿಟಿ ಆಸ್ಪತ್ರೆಗಳಾಗಿ ಪರಿವರ್ತನೆ ಮಾಡಲಾಗುವುದು.
- ಹುಬ್ಬಳ್ಳಿ - ಧಾರವಾಡದಲ್ಲಿ ಮೆಡಿಕಲ್ ಟೂರಿಸಂ ಉದ್ದೇಶಕ್ಕಾಗಿ ವಿಶೇಷ ಹೆಲ್ತ್ ಪಾರ್ಕ್ ರಚಿಸಿ ಅಂತಾರಾಷ್ಟ್ರೀಯ ಮಟ್ಟದ ಹಬ್ ರಚಿಸಲಾಗುವುದು.
- ಕಾಯಿಲೆ ತೀವ್ರ ಹಂತದಲ್ಲಿರುವವರ ನೋವು ಉಪಶಮನಕ್ಕೆ ಕೊಪ್ಪಳ, ಬೆಳಗಾವಿ, ಯಾದಗಿರಿ, ದಾವಣಗೆರೆ ಮತ್ತು ಬೀದರ್‌ನಲ್ಲಿ ಆರೋಗ್ಯ ಕೇಂದ್ರಗಳ ಸ್ಥಾಪನೆ ಮಾಡಲಾಗುವುದು.
- ಕಡಿಮೆ ವೆಚ್ಚದಲ್ಲಿ ಕ್ಯಾನ್ಸರ್ ಚಿಕಿತ್ಸೆ ನೀಡಲು ಬೀದರ್‌ನಲ್ಲಿ ಅತ್ಯಾಧುನಿಕ ಕ್ಯಾನ್ಸರ್ ಕೇಂದ್ರದ ಸ್ಥಾಪನೆ ಮಾಡಲಾಗುವುದು.
- ಎಲ್ಲಾ ಉಪಕೇಂದ್ರಗಳನ್ನು ಆರೋಗ್ಯ ಮತ್ತು ಆರೈಕೆ ಕೇಂದ್ರಗಳಾಗಿ ಪರಿವರ್ತನೆ ಮಾಡಲಾಗುವುದು.
- ಅಗತ್ಯವಿರುವ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಮತ್ತು ಅಸ್ತಿತ್ವದಲ್ಲಿರುವ ಆರೋಗ್ಯ ಕೇಂದ್ರಗಳನ್ನು ಐಪಿಹೆಚ್‌ಎಸ್ ದರ್ಜೆಗೆ ಏರಿಸಲಾಗುವುದು.
- ಅಗತ್ಯವಿರುವ ಪ್ರದೇಶದಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳನ್ನು ನಿರ್ಮಿಸುವುದು, ಮತ್ತು ಅಸ್ತಿತ್ವದಲ್ಲಿರುವ ಆರೋಗ್ಯ ಕೇಂದ್ರಗಳನ್ನು ಐಪಿಹೆಚ್‌ಎಸ್ ದರ್ಜೆಗೇರಿಸಲಾಗುವುದು.
- ರಾಜ್ಯದಲ್ಲಿರುವ ಡಯಾಲಿಸಿಸ್ ಘಟಕಗಳ ಸಂಖ್ಯೆಯನ್ನು ದುಪ್ಪಟ್ಟುಗೊಳಿಸುವುದು ಹಾಗೂ ಪ್ರತಿ ತಾಲೂಕು ಕೇಂದ್ರದಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಆರಂಭಿಸಲಾಗುವುದು.
- ರಾಜ್ಯದಲ್ಲಿರುವ ಎಲ್ಲಾ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ (CHCs) ಜನೌಷಧಿ ಸ್ಟೋರ್‌ಗಳನ್ನು ಸ್ಥಾಪಿಸಲಾಗುವುದು.

## ಆರೋಗ್ಯ ಸೇವೆಗಳ ಸೌಲಭ್ಯ ವಿಸ್ತರಣೆ

- ಎಲ್ಲಾ ಬಡ ಮತ್ತು ದುರ್ಬಲ ವರ್ಗದವರಿಗೆ ಚಿಕಿತ್ಸೆ ಒದಗಿಸುವುದಕ್ಕಾಗಿ ₹ 5 ಲಕ್ಷ ವಿಮೆ ಒದಗಿಸಲು "ಆಯುಷ್ಮಾನ್ ಕರ್ನಾಟಕ ಯೋಜನೆ" ಜಾರಿಗೊಳಿಸಲಾಗುವುದು.
- 108 - ತುರ್ತು ವಾಹನ ಸೇವೆಯಡಿ ಇನ್ನಷ್ಟು ಅಂಬುಲೆನ್ಸ್‌ಗಳನ್ನು ಒದಗಿಸಲಾಗುವುದು ಮತ್ತು ಅತಿ ಶೀಘ್ರವಾಗಿ ರೋಗಿಗಳನ್ನು ತಲುಪುವಂತೆ ಮಾಡಲಾಗುವುದು.
- ರಾಜ್ಯದ ಎಲ್ಲಾ ಹೆದ್ದಾರಿಗಳಲ್ಲಿ ಪ್ರತಿ 30 ಕಿ.ಮೀ. ವ್ಯಾಪ್ತಿಯಲ್ಲಿ "ತುರ್ತು ಸೇವೆ ಘಟಕ"ಗಳನ್ನು ನಿರ್ಮಿಸಲಾಗುವುದು.
- "ವಾಯು ಅಂಬುಲೆನ್ಸ್ ಸೇವೆ" ವಿಸ್ತರಿಸಲು ಮತ್ತು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಹೆಲಿಪ್ಯಾಡ್ ನಿರ್ಮಿಸಲು ಅನುದಾನ ಒದಗಿಸಲಾಗುವುದು.
- ಹೆಲ್ತ್ ಎಂಡ್ ವೆಲ್‌ನೆಸ್ ಸೆಂಟರ್ (ಎಚ್‌ಡಬ್ಲ್ಯುಸಿ)ಗಳು, ಪಿಎಚ್‌ಸಿಗಳು ಮತ್ತು ಸಿಎಚ್‌ಸಿಗಳಿಗೆ ಸಂಪರ್ಕಿಸುವ ಎಲ್ಲಾ ರಸ್ತೆಗಳನ್ನು ಆದ್ಯತೆ ಮೇರೆಗೆ ಮೇಲ್ದರ್ಜೆಗೇರಿಸಲಾಗುವುದು.
- ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ "ಆಯುಶ್ ಆರೋಗ್ಯ" ಕೇಂದ್ರಗಳನ್ನು ನಿರ್ಮಿಸಲಾಗುವುದು.
- ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಫಿಸಿಯೋಥೆರಪಿ ವಿಭಾಗಗಳನ್ನು ತೆರೆಯಲಾಗುವುದು.
- ಹೃದ್ರೋಗ, ಕಿಡ್ನಿ, ಮತ್ತು ಕ್ಯಾನ್ಸರ್ ರೋಗಿಗಳ ಆರೈಕೆಗಾಗಿ ಜಿಲ್ಲಾಸ್ಪತ್ರೆಗಳಿಗೆ ಅಗತ್ಯ ಉಪಕರಣ ಒದಗಿಸಲಾಗುವುದು.
- ಸ್ಟೆಂಟ್‌ಗಳು ಮತ್ತು ಮಂಡಿ ಬದಲಾವಣೆ ಸಾಧನಗಳನ್ನು ಕಡಿಮೆ ದರದಲ್ಲಿ ಒದಗಿಸಲಾಗುವುದು.

## ಆರೋಗ್ಯ ಕ್ಷೇತ್ರದ ಆಡಳಿತದಲ್ಲಿ ಸುಧಾರಣೆ

- ವೈದ್ಯರು, ದಾದಿಯರು ಮತ್ತು ಇತರ ಅಗತ್ಯ ಉದ್ಯೋಗಿಗಳು ಸೇರಿದಂತೆ ರಾಜ್ಯದಲ್ಲಿನ ವಿವಿಧ ವೈದ್ಯಕೀಯ ಸಂಸ್ಥೆಗಳಲ್ಲಿನ ಖಾಲಿ ಇರುವ ಆರೋಗ್ಯ ಸೇವೆ ಸಿಬ್ಬಂದಿ ಹುದ್ದೆಯನ್ನು ತ್ವರಿತವಾಗಿ ಭರ್ತಿ ಮಾಡಲಾಗುವುದು.
- ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ದುಡಿಯುತ್ತಿರುವ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗೆ ವಸತಿ ಸೌಲಭ್ಯ ಒದಗಿಸಲಾಗುವುದು.
- ರೋಗಿಯ ಆರೋಗ್ಯ, ರೋಗ ಪತ್ತೆ, ಹೆರಿಗೆ ಮತ್ತು ಔಷಧಿ ಲಭ್ಯತೆ ಕುರಿತ ಸಮಗ್ರ ಮಾಹಿತಿ ಸಂಗ್ರಹಕ್ಕಾಗಿ ಇ-ಆರೋಗ್ಯ ಪ್ರಾಧಿಕಾರವನ್ನು ಕರ್ನಾಟಕದಲ್ಲಿ ರೂಪಿಸಲಾಗುವುದು.
- ಖಾಲಿ ಇರುವ ಎಲ್ಲಾ ವೈದ್ಯ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಮತ್ತು ಆಯ್ಕೆ ಪಾರದರ್ಶಕವಾಗಿರುವಂತೆ ನೋಡಿಕೊಳ್ಳಲಾಗುವುದು.
- ನಿರ್ಲಕ್ಷಿತ ಪ್ರದೇಶಗಳಲ್ಲಿನ ರೋಗಿಗಳಿಗೆ ಖಾಸಗಿ ವೈದ್ಯರು ಸೇವೆ ನೀಡುವಂತಾಗಲು ವಿಶೇಷ ಕಾರ್ಯಕ್ರಮಗಳನ್ನು ನಡೆಸಲಾಗುವುದು.

- ಬೇರೆ ಬೇರೆ ಲೈಸನ್ಸ್‌ಗಳನ್ನು ಪಡೆಯಲು ಆನ್‌ಲೈನ್ ಸೌಲಭ್ಯ ನೀಡುವುದು ಮತ್ತು ಯಾವುದೇ ವೈದ್ಯಕೀಯ ಸೌಲಭ್ಯ ತೆರೆಯಲು ಏಕಗವಾಕ್ಷಿ ಆನ್‌ಲೈನ್ ವ್ಯವಸ್ಥೆ ಮಾಡಲಾಗುವುದು.

- ವೈದ್ಯರು ತಮ್ಮ ಸೇವೆಯನ್ನು ಒದಗಿಸಲು ಸಾಕಷ್ಟು ಸ್ಥಳಾವಕಾಶ ಒದಗಿಸಲು ಎಲ್ಲಾ ಪ್ರಮುಖ ನಗರಗಳಲ್ಲಿ "ಆರೋಗ್ಯ ಸಂಕೀರ್ಣ"ಗಳನ್ನು ತೆರೆಯುಲಾಗುವುದು.

- ಸರ್ಕಾರ ರಚಿಸಿದ 180 ದಿನಗಳೊಳಗೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳ ಕುರಿತು ಚರ್ಚೆ ಮಾಡಿ, ವರದಿ ನೀಡಲು ಸಮಿತಿ ರಚನೆ ಮತ್ತು ಈ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು.

- ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಗೆ "ಇಂಟೆನ್ಸಿವ್ ಟ್ರೇನಿಂಗ್ ಪ್ರೋಗ್ರಾಂ" ಮೂಲಕ ಉನ್ನತ ತರಬೇತಿ ಕಾರ್ಯಕ್ರಮವನ್ನು ರೂಪಿಸಲಾಗುವುದು.

- ಎಲ್ಲ ಅಂಗನವಾಡಿ ಕೇಂದ್ರಗಳ ಸೌಕರ್ಯಗಳನ್ನು ಉನ್ನತೀಕರಿಸಿ ಕೊರತೆಯಿರುವ ಪ್ರದೇಶಗಳಲ್ಲಿ ಹೊಸ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

- ತಾಯಿ ಮತ್ತು ಮಗುವಿನ ಆರೋಗ್ಯಕ್ಕಾಗಿ ಹೊಸ ಯೋಜನೆ ರೂಪಿಸಲಾಗುವುದು.

- ಕರ್ನಾಟಕ ರಾಜ್ಯ ವೈದ್ಯಕೀಯ ಉಪಕರಣ ನೀತಿಯನ್ನು ರೂಪಿಸುವುದು ಮತ್ತು ವೈದ್ಯಕೀಯ ಉಪಕರಣ ಉತ್ಪಾದನೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿರುವಂತೆ ನೋಡಿಕೊಳ್ಳಲಾಗುವುದು.

- ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ನರ್ಸ್‌ಗಳಿಗಾಗಿ ಹೊಸ ನಿರ್ದೇಶನಾಲಯ ಸ್ಥಾಪಿಸಲಾಗುವುದು.

## ಮಕ್ಕಳ ಉತ್ತಮ ಆರೋಗ್ಯಕ್ಕಾಗಿ ಕ್ರಮಗಳು

- ಭ್ರೂಣಾವಸ್ಥೆಯಲ್ಲಿಯೇ ಬರುವ ಹೃದ್ರೋಗಗಳನ್ನು ಪತ್ತೆ ಹಚ್ಚಲು ಮತ್ತು ಆನುವಂಶಿಕ ಸಮಾಲೋಚನೆಗಾಗಿ ಎಲ್ಲಾ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ "ಭ್ರೂಣ ವೈದ್ಯಕೀಯ ವಿಭಾಗ"ಗಳ ಸ್ಥಾಪನೆ ಮಾಡಲಾಗುವುದು.

- ತಾಯಿ ಮತ್ತು ನವಜಾತ ಶಿಶುವಿಗೆ "ಪೋಷಣೆ ಕಿಟ್" ಮತ್ತು ಲಸಿಕೆ ಕುರಿತ ಮಾಹಿತಿ ಕೈಪಿಡಿಯನ್ನು ಒದಗಿಸಲಾಗುವುದು.

- ಎಲ್ಲಾ ಮಕ್ಕಳಿಗೆ ಸೀತಾಳ ಸಿಡುಬು, ಹೆಪಟೈಟಿಸ್ ಎ ಉಚಿತ ಲಸಿಕೆ ನೀಡಲಾಗುವುದು.

- ನ್ಯುಮೋನಿಯಾ ತಡೆಗಟ್ಟಲು ಎಲ್ಲಾ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ "ನ್ಯುಮೋವ್ಯಾಕ್" ಉಚಿತವಾಗಿ ನೀಡಲಾಗುವುದು.

- ತಲಸೇಮಿಯಾ, ಸಿಕಲ್ ಸೆಲ್ ಅನೀಮಿಯಾ, ಗೌಚರ್ ರೋಗ - ಮುಂತಾದ ಅತಿವಿರಳ ಕಾಯಿಲೆಯಿಂದ ಬಳಲುವ ಮಕ್ಕಳಿಗೆ ಉಚಿತವಾಗಿ ಔಷಧ ನೀಡಲಾಗುವುದು.

## ವೈದ್ಯಕೀಯ ಶಿಕ್ಷಣದ ಸುಧಾರಣೆ

- ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಕನಿಷ್ಟ ಒಂದು ಸರ್ಕಾರಿ ವೈದ್ಯಕೀಯ ಕಾಲೇಜು ಇರುವಂತೆ ನೋಡಿಕೊಳ್ಳಲಾಗುವುದು.

- ಹೊಸ ಆಯುಶ್ ವಿಶ್ವವಿದ್ಯಾಲಯದ ಮೂಲಕ ವಿಶ್ವ ದರ್ಜೆಯ ಆಯುರ್ವೇದ, ನ್ಯಾಚುರೋಪತಿ ಮತ್ತು ಇತರ ಭಾರತೀಯ ವೈದ್ಯಕೀಯ ವ್ಯವಸ್ಥೆಗಳ ಸಮಗ್ರ ಪಠ್ಯಕ್ರಮ ನೀಡಲಾಗುವುದು.

- ನರ್ಸ್‌ಗಳು ಮತ್ತು ಇತರ ಅರೆ ವೈದ್ಯಕೀಯ ಸಿಬ್ಬಂದಿ ಕೌಶಲ್ಯ ವೃದ್ಧಿಗಾಗಿ "ಹೆಲ್ತ್ ಕೇರ್ ಕೌಶಲ್ಯವೃದ್ಧಿ" ಕೋರ್ಸ್‌ಗಳ ಚಾಲನೆ ಮಾಡಲಾಗುವುದು.





# 8



# ಮೂಲಭೂತ ಸೌಕರ್ಯಗಳ ವಿಸ್ತರಣೆ

## ಸುಗಮ ಬದುಕಿನ ಖಾತ್ರಿ

- "ಸೌಭಾಗ್ಯ ಯೋಜನೆ" ಯಡಿಯಲ್ಲಿ ಪ್ರತಿ ಮನೆಗೆ ವಿದ್ಯುತ್ ಸಂಪರ್ಕ ಮತ್ತು 24x7 ವಿದ್ಯುಚ್ಛಕ್ತಿ ಪೂರೈಕೆ .
- ಗೃಹಬಳಕೆಯ ಎಲೆಕ್ಟ್ರಿಕ್ ಮೀಟರ್ ಮೇಲಿನ ಬಾಡಿಗೆಯನ್ನು ರದ್ದುಗೊಳಿಸಲಾಗುವುದು.
- ಪ್ರತಿ ಹಳ್ಳಿಯಲ್ಲಿ ಎಲ್ಲಾ ರಸ್ತೆಗಳ ಬೀದಿ ದೀಪಗಳಿಗೆ ಎಲ್ಇಡಿ ಬಲ್ಬ್‌ಗಳನ್ನು ಅಳವಡಿಸಲಾಗುವುದು.
- ಕರ್ನಾಟಕದ ಪ್ರತಿಯೊಂದು ಮನೆಗೂ ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ.
- ರಾಜ್ಯದಾದ್ಯಂತ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಮತ್ತು ಇತರ ರಾಸಾಯನಿಕ ಮಾಲಿನ್ಯಗಳ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಶೇಷ ಗಮನ ಹರಿಸಲಾಗುವುದು.
- ಪ್ರಧಾನ ಮಂತ್ರಿ ಆವಾಸ್ ಯೋಜನೆಯ ತ್ವರಿತ ಅನುಷ್ಠಾನದ ಮೂಲಕ ಕರ್ನಾಟಕವನ್ನು "ಗುಡಿಸಲು ಮುಕ್ತ" ಮತ್ತು "ಕೊಳೆಗೇರಿ ಮುಕ್ತ" ರಾಜ್ಯವನ್ನಾಗಿ ಮಾಡುವ ಸಂಕಲ್ಪ ಮಾಡಲಾಗಿದೆ.
- "ಸ್ವಚ್ಛ ಭಾರತ ಅಭಿಯಾನ"ದಲ್ಲಿ ಪ್ರತಿ ಮನೆಗೂ ಶೌಚಾಲಯದ ನಿರ್ಮಾಣ ಮಾಡಲಾಗುವುದು.
- ಕೊನೆಯ ಮೈಲಿಯ ಸಂಪರ್ಕಕ್ಕಾಗಿ ಸ್ಥಳೀಯ ಬಸ್ ಸೇವಾ ಪೂರೈಕೆದಾರರ ಸಹಯೋಗದೊಂದಿಗೆ ಮಿನಿಬಸ್ ಸೇವೆಗಳನ್ನು ಪ್ರಾರಂಭಿಸುತ್ತೇವೆ.

## ಅಗತ್ಯ ಸುಧಾರಣೆಗಳ ಅಳವಡಿಕೆ

- ರಾಜ್ಯದಾದ್ಯಂತ ನದಿ ನೀರು ಮತ್ತು ಮೇಲ್ಮೈ ನೀರನ್ನು ಬಳಸಿ ಶುದ್ಧ ಕುಡಿಯುವ ನೀರಿನ ಯೋಜನೆ ರೂಪಿಸಲು ಹಾಗೂ ಜಾರಿಗೊಳಿಸಲು ಪ್ರತ್ಯೇಕ ಸಚಿವಾಲಯ ರಚಿಸಲಾಗುವುದು.
- ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಸರಿಯಾದ ಅನುಷ್ಠಾನದ ಮೂಲಕ ರಾಜ್ಯವನ್ನು ಗುಡಿಸಲು ಮತ್ತು ಕೊಳಗೇರಿ ಮುಕ್ತವಾಗಿಸಲು ಪ್ರತ್ಯೇಕ ಸಚಿವಾಲಯ ರಚಿಸಲಾಗುವುದು.
- ರಾಜ್ಯದ ವಿದ್ಯುತ್ ಉತ್ಪಾದನೆ ಸಾಮರ್ಥ್ಯವನ್ನು 20,000 ಮೆಗಾವ್ಯಾಟ್‌ಗೆ ದುಪ್ಪಟ್ಟುಗೊಳಿಸಿ, ರಾಜ್ಯದ ಸೌರಶಕ್ತಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚುವರಿ 4,000 ಮೆಗಾವ್ಯಾಟ್‌ಗೆ ಏರಿಸಲು ಕ್ರಮ; ಸೌರಶಕ್ತಿ ಸಂಕೀರ್ಣ ನಿರ್ಮಾಣ.
- ರಾಜ್ಯದಲ್ಲಿನ ಎಲ್ಲಾ ಪ್ರದೇಶಗಳಿಗೆ ನೀರಿನ ಪೂರಕ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ನೀರಿನ ಸರಬರಾಜಿಗೆಂದು ಗ್ರಿಡ್ ರಚನೆ ಮಾಡಲಾಗುವುದು.
- ಖಾಸಗಿ-ಸಾರ್ವಜನಿಕ ಸಹಭಾಗಿತ್ವದ (ಪಿಪಿಪಿ) ಪ್ರಮುಖ ವಸತಿ ಯೋಜನೆಗಳಿಗೆ ಅನುಕೂಲವಾಗುವಂತೆ ದ್ವಿತೀಯ ಮತ್ತು ತೃತೀಯ ಶ್ರೇಣಿಯ ನಗರಗಳಲ್ಲಿ ವಸತಿಯನ್ನು ನಿರ್ಮಿಸಿ ಭಾಗಶಃ ಮಾಲೀಕರಾಗಲು ಪ್ರೋತ್ಸಾಹ ನೀಡಲಾಗುವುದು.

## ರಾಜ್ಯದೆಲ್ಲೆಡೆ ಸಂಪರ್ಕ ಜಾಲ

- ರಾಜ್ಯದ ಎಲ್ಲ ಜಿಲ್ಲೆಗಳನ್ನು ಸಂಪರ್ಕಿಸುವ ಷಟ್ಪಥ "ಕರ್ನಾಟಕ ಮಾಲಾ" ಹೆದ್ದಾರಿಯ ನಿರ್ಮಾಣ ಮಾಡಲಾಗುವುದು.
- ಎಲ್ಲಾ ಪ್ರಮುಖ ಜಿಲ್ಲಾ ರಸ್ತೆಗಳನ್ನು ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಏರಿಸಲಾಗುವುದು.
- ರಾಜ್ಯ ರಸ್ತೆಗಳಲ್ಲಿ ಅಪಘಾತಗಳನ್ನು ಕಡಿಮೆ ಮಾಡಲು ರಸ್ತೆ ಸುರಕ್ಷತಾ ಕಾರ್ಯಕ್ಕೆ ₹ 200 ಕೋಟಿ ನಿಗದಿ ಮಾಡಲಾಗುವುದು.
- ಹಾಸನವನ್ನು ಮಂಗಳೂರು ಜತೆ ಸಂಪರ್ಕಿಸುವ ಶಿರಾಡಿ ಘಾಟ್ ಸುರಂಗ ಯೋಜನೆಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲಾಗುವುದು.
- ಕರ್ನಾಟಕ ರೈಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಬಾಂಡ್‌ಗಳ ಬಿಡುಗಡೆ ಮುಖಾಂತರ ಹಣವನ್ನು ಹೂಡಿ ರೈಲ್ವೆ ಮೂಲಸೌಕರ್ಯವನ್ನು ಹೆಚ್ಚಿಸಲಾಗುವುದು.
- ರೈಲ್ವೆ ಸಚಿವಾಲಯದ ಸಹಯೋಗದೊಂದಿಗೆ ರಾಜ್ಯದಲ್ಲಿ ಬಾಕಿ ಇರುವ ಎಲ್ಲ ರೈಲ್ವೆ ಯೋಜನೆಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡಲಾಗುವುದು. ಹೊಸ ಮಾರ್ಗಗಳ ನಿರ್ಮಾಣ, ಹೊಸ ರೈಲುಗಳ ಪ್ರಾರಂಭ, ವಿದ್ಯುತ್ತೀಕರಣ, ಟ್ರ್ಯಾಕ್ ಡಬ್ಲಿಂಗ್ ಕಾರ್ಯ ಪೂರ್ಣಗೊಳಿಸುವ ಜತೆಗೆ ಬಹು ಕಾಲದ ರೈಲು ಸಂಬಂಧಿತ ಬೇಡಿಕೆಗಳನ್ನು ಈಡೇರಿಸಲು ಕಾರ್ಯವಿಧಾನವನ್ನು ಗೊತ್ತುಪಡಿಸಲಾಗುವುದು.
- ಹುಬ್ಬಳ್ಳಿ-ಧಾರವಾಡ ಮೆಟ್ರೊ ನಿರ್ಮಿಸುವುದು ಮತ್ತು ಆ ಮೂಲಕ ಅವಳಿ ನಗರದ ಆರ್ಥಿಕ ಚಟುವಟಿಕೆ ಇರುವ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಲಾಗುವುದು.
- ವಿಜಯಪುರ, ಕಲಬುರಗಿ, ಹಾಸನ ಮತ್ತು ಶಿವಮೊಗ್ಗ ವಿಮಾನ ನಿಲ್ದಾಣಗಳಲ್ಲಿ ಅಪೂರ್ಣಗೊಂಡಿರುವ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲಾಗುವುದು.
- ಉಡಾನ್ ಯೋಜನೆಯ ಅಡಿಯಲ್ಲಿ ಬೆಳಗಾವಿ ವಿಮಾನ ನಿಲ್ದಾಣವನ್ನು ತರಲಾಗುವುದು.
- ಸಾಮರ್ಥ್ಯದ ಕೊರತೆಯನ್ನು ಸರಿದೂಗಿಸಲು ಮಂಗಳೂರು ವಿಮಾನ ನಿಲ್ದಾಣದ ರನ್ ವೇಯನ್ನು ಉನ್ನತೀಕರಣಗೊಳಿಸಲಾಗುವುದು.
- ರಾಯಚೂರಿಗೆ ವಿಮಾನ ನಿಲ್ದಾಣ.

- ಉಡಾನ್ ಯೋಜನೆಯ ಮೂಲಕ ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಸಂಖ್ಯೆ ಮತ್ತು ತಲುಪುವ ಸ್ಥಳಗಳ ಹೆಚ್ಚಳ.
- ಮೈಸೂರು - ಬೆಂಗಳೂರು ಹೆದ್ದಾರಿಯನ್ನು ಷಟ್ಪಥಗೊಳಿಸುವ ಕಾರ್ಯಕ್ಕೆ ವೇಗ ನೀಡಲಾಗುವುದು.
- ಕೇಂದ್ರ ಸರಕಾರದೊಂದಿಗೆ ಹೊಂದಾಣಿಕೆ ನಡೆಸಿ "ಭಾರತ ಮಾಲಾ" ಮತ್ತು "ಸಾಗರ್ ಮಾಲಾ" ಯೋಜನೆಯಡಿ ನಡೆಯುತ್ತಿರುವ ಎಲ್ಲಾ ಕೆಲಸಗಳನ್ನು ಸಕಾಲಿಕವಾಗಿ ಪೂರ್ಣಗೊಳಿಸಲಾಗುವುದು.
- ಭೀಮಾ, ಕಬಿನಿ ಮತ್ತು ತುಂಗಭದ್ರ ನದಿಗಳ ಒಳನಾಡ ಜಲಮಾರ್ಗಗಳ ಮುಖಾಂತರ ಸರಕು ಮತ್ತು ಜನರನ್ನು ವೇಗವಾಗಿ ತಲುಪಿಸುವ ಸೇವೆಗಳನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗುವುದು

## ಗ್ರಾಮೀಣ ಅಭಿವೃದ್ಧಿ

### ನಾಲ್ವಡಿ ಕೃಷ್ಣರಾಜ ಒಡೆಯರ್ ಗ್ರಾಮೀಣ ಅಭಿವೃದ್ಧಿ ಮಿಷನ್

- ಅಸ್ತಿತ್ವದಲ್ಲಿರುವ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಒಂದೇ ವೇದಿಕೆಯಡಿ ತರುವ ನಿಟ್ಟಿನಲ್ಲಿ "ನಾಲ್ವಡಿ ಕೃಷ್ಣರಾಜ ಒಡೆಯರ್ ಗ್ರಾಮೀಣಾಭಿವೃದ್ಧಿ ಮಿಷನ್" ಸ್ಥಾಪನೆ ಮಾಡಿ, ಗ್ರಾಮೀಣ ಪ್ರದೇಶಗಳ ಕುಡಿಯುವ ನೀರು, ನೈರ್ಮಲ್ಯ, ಶಾಲಾ ಮೂಲಸೌಕರ್ಯ, ವಿದ್ಯುತ್ ಆಧುನೀಕರಣ ಮತ್ತು ಆರೋಗ್ಯ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಗಮನ.

### ಗ್ರಾಮೀಣ ಸೌಕರ್ಯಗಳ ಉನ್ನತೀಕರಣ

- ರಾಜ್ಯದ ಗ್ರಾಮೀಣ ರಸ್ತೆಗಳನ್ನು ಮತ್ತು ಸಾರಿಗೆಯನ್ನು ಸುಧಾರಿಸಲು "ಮುಖ್ಯಮಂತ್ರಿ ಗ್ರಾಮ ರಸ್ತೆ" ಮತ್ತು "ಸಾರಿಗೆ ಮಿಷನ್" ಪ್ರಾರಂಭಿಸಲಾಗುವುದು.
- ಹೆದ್ದಾರಿಗೆ ಸಂಪರ್ಕ ನೀಡುವ ಗ್ರಾಮೀಣ ರಸ್ತೆಗಳ ಕಾಂಕ್ರೀಟೀಕರಣಕ್ಕೆ ಆದ್ಯತೆ.
- ಗ್ರಾಮ ಪಂಚಾಯತ್‌ಗಳ ಬೇಡಿಕೆ ಮೇರೆಗೆ ಬಸ್ ನಿಲ್ದಾಣಗಳ ನಿರ್ಮಾಣ ಮಾಡಲಾಗುವುದು.
- "ಇ-ಗ್ರಾಮ ಮಿಷನ್" ಪ್ರಾರಂಭಿಸಿ, ಎಲ್ಲಾ ಗ್ರಾಮಗಳು "ಡಿಜಿಟಲ್ ಇಂಡಿಯಾ"ದ ವ್ಯಾಪ್ತಿಗೆ ಬರುವಂತೆ ಮಾಡುವುದು. ಸ್ಮಾರ್ಟ್ ಫೋನ್‌ಗಳು ಮತ್ತು ಸರ್ಕಾರಿ ಅಪ್ಲಿಕೇಶನ್‌ಗಳಂತಹ ಸಾಧನಗಳ ಬಳಕೆಯನ್ನು ತಿಳಿಸಲು ಸ್ಥಳೀಯ ಸದಸ್ಯರಿಗೆ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.
- ರಾಜ್ಯದ ಗ್ರಾಮೀಣ ಯುವಕರಲ್ಲಿ ಡಿಜಿಟಲ್ ಸಾಕ್ಷರತೆಯನ್ನು ಹೆಚ್ಚಿಸಲು ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಪ್ರಾಥಮಿಕ ಕಂಪ್ಯೂಟರ್ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗುವುದು.
- ಗ್ರಾಮೀಣ ಅಭಿವೃದ್ಧಿ ಮತ್ತು ಗ್ರಾಮೀಣ ಉದ್ಯೋಗ ನಿರ್ಮಾಣದತ್ತ ಗಮನ ಹರಿಸಿ "ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ವಿಶ್ವವಿದ್ಯಾಲಯ" ಸ್ಥಾಪಿಸಲಾಗುವುದು.
- ಪ್ರತಿ ತಾಲೂಕಿನಲ್ಲೂ "ಮೊಬೈಲ್ ಜನಸಂಪರ್ಕ ಕೇಂದ್ರ" ನಿಯೋಜನೆ ಮಾಡಿ ಕೇಂದ್ರ ಮತ್ತು ರಾಜ್ಯದ ಯೋಜನೆಯಿಂದ ನಾಗರಿಕರಿಗೆ ಪ್ರಯೋಜನ ಪಡೆಯಲು ಸಹಾಯ ಮಾಡಲಾಗುವುದು.
- ಎಟಿಎಂ ಇಲ್ಲದಿರುವ ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಹೊಸ ಮೊಬೈಲ್ ಎಟಿಎಂಗಳಿಗೆ ಚಾಲನೆ ನೀಡಲಾಗುವುದು.
- ಹಣಕಾಸಿನ ವ್ಯವಹಾರಕ್ಕಾಗಿ ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಬ್ಯಾಂಕ್ ಶಾಖೆ ತೆರೆಯಲು ಕ್ರಮ.

## ನಗರ ಅಭಿವೃದ್ಧಿ

### ಮುಖ್ಯಮಂತ್ರಿ ನಗರೋತ್ಥಾನ ಯೋಜನೆ

- "ಮುಖ್ಯಮಂತ್ರಿ ನಗರೋತ್ಥಾನ ಯೋಜನೆ" (ಎಂಎಂಎನ್‌ವೈ) ಯ ವ್ಯಾಪ್ತಿ ಮತ್ತು ಗಾತ್ರದ ವಿಸ್ತರಣೆ ಮಾಡಿ ನೀರು ಸರಬರಾಜು, ಒಳಚರಂಡಿ ನಿರ್ಮಾಣ, ರಸ್ತೆಗಳು ಸೇರಿ 5 ವರ್ಷಗಳಲ್ಲಿ ಸಮಗ್ರ ಸುಧಾರಣೆ ಮಾಡಲಾಗುವುದು.

### ನಗರ ಸೌಲಭ್ಯಗಳ ವಿಸ್ತರಣೆ

- 3 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಎಲ್ಲಾ ಪಟ್ಟಣಗಳಲ್ಲಿ ಪೈಪ್‌ಲೈನ್ ಮೂಲಕ ಅನಿಲ ಪೂರೈಕೆ ಸೌಕರ್ಯ ನಿರ್ಮಾಣ.
- ನಗರದ ಎಲ್ಲ ಮನೆಗಳಿಗೂ 24x7 ನಿರಂತರ ವಿದ್ಯುತ್ ಪೂರೈಕೆ.
- ಎಲ್ಲ ಮಹಾನಗರ ಪಾಲಿಕೆಗಳಲ್ಲಿ ಮೆಟ್ರೊಪಾಲಿಟನ್ ಯೋಜನಾ ಸಮಿತಿಗಳನ್ನು (ಎಂಪಿಸಿ) ರಚಿಸಲಾಗುವುದು.
- ಯಾವುದೇ ಮೂಲಸೌಕರ್ಯ ಕುರಿತ ಕುಂದುಕೊರತೆಗಳನ್ನು ಕಾಲಬದ್ಧವಾಗಿ ಸರಿಪಡಿಸಲು ಒಂದು ಮೂಲಭೂತ ಸೌಕರ್ಯ ನಿರ್ವಹಣಾ ಕಾರ್ಯಪಡೆಯನ್ನು ಪ್ರತಿ ಸ್ಥಳೀಯ ನಗರ ಆಡಳಿತಕ್ಕೆ (ಯುಎಲ್‌ಬಿ) ಒದಗಿಸಲಾಗುವುದು.
- ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ಲಾಲ್ ಬಾಗ್ ಉದ್ಯಾನದ ಮಾದರಿಯಲ್ಲಿ ಬೃಹತ್ ಉದ್ಯಾನಗಳ ನಿರ್ಮಾಣ.
- ಕರ್ನಾಟಕದ ಅಧಿಕಾರಿಗಳ ಕೌಶಲ್ಯವನ್ನು ಹೆಚ್ಚಿಸಲು ಮೈಸೂರಿನಲ್ಲಿ "ನಗರ ಯೋಜನೆ ಮತ್ತು ಅಭಿವೃದ್ಧಿ ಸಂಸ್ಥೆ"ಯನ್ನು ಸ್ಥಾಪಿಸಲಾಗುವುದು. ಈ ಸಂಸ್ಥೆಯಿಂದ ತರಬೇತಿ ಪಡೆದಿರುವಂಥವರು ನಗರ ಆಡಳಿತ ಮತ್ತು ನಗರ ಯೋಜನೆಯಲ್ಲಿ ನಗರ ಕ್ಷೇತ್ರಗಳ ಮೇಯರ್‌ಗಳು, ಶಾಸಕರು ಮತ್ತು ಸಂಸತ್ ಸದಸ್ಯರಿಗೆ ನೆರವಾಗುವರು.
- ನಗರ ವ್ಯವಹಾರಗಳ ಯೋಜನೆಗಳನ್ನು ಉತ್ತಮಗೊಳಿಸಲು ಐಐಟಿ ಧಾರವಾಡ ಮತ್ತು ಐಐಎಂ ಬೆಂಗಳೂರಿನಲ್ಲಿ "ನಗರ ಅಧ್ಯಯನ ಪೀಠ"ವನ್ನು ತೆರೆಯಲಾಗುವುದು.
- ಎಲ್ಲಾ ನಗರ ನಿಗಮ ಕೇಂದ್ರಗಳಲ್ಲಿ 24x7 ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರಗಳನ್ನು ಸ್ಥಾಪಿಸಿ, KSPCB ವೆಬ್‌ಸೈಟ್‌ನಲ್ಲಿ ಮಾಲಿನ್ಯದ ಮಟ್ಟವನ್ನು ಲೈವ್ ಅಪ್‌ಡೇಟ್ ನೀಡುವ ವ್ಯವಸ್ಥೆ ಮಾಡಲಾಗುವುದು.
- ವಿದ್ಯುತ್ ವಾಹನಗಳ ಖರೀದಿಗೆ ಸಹಾಯ ಧನ ಒದಗಿಸುವ ಹಾಗೂ ವಾಹನಗಳನ್ನು ಚಾರ್ಜ್ ಮಾಡುವ ಮೂಲಸೌಕರ್ಯ ಒದಗಿಸಲು "ವಿದ್ಯುತ್ ವಾಹಿನಿ ಯೋಜನೆ" ಅಡಿಯಲ್ಲಿ ₹ 100 ಕೋಟಿ ಮೀಸಲಿಡಲಾಗುವುದು.



# 9



# ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ಅಭಿವೃದ್ಧಿಯ ಪುನಶ್ಚೇತನ

## ಉದ್ಯಮಕ್ಕೆ ಪೂರಕ ವಾತಾವರಣ ಸೃಷ್ಟಿ

- ಯಾವುದೇ ಅಡೆತಡೆ ಇಲ್ಲದೆ, ಸರಾಗವಾಗಿ ಉದ್ಯಮಗಳನ್ನು ನಡೆಸಲು ಏಕಗವಾಕ್ಷಿ ವ್ಯವಸ್ಥೆಯ ಸುಧಾರಣೆ.
- ಅಡ್ಡಿ ಆತಂಕಗಳಿಲ್ಲದೆ ಸುಗಮವಾಗಿ ಉದ್ದಿಮೆ ನಡೆಸಲು ಸಾಧ್ಯವಾಗುವಂತೆ "ರಾಜ್ಯ ವ್ಯವಹಾರ ಕಾನೂನು ಸುಧಾರಣಾ ಆಯೋಗ" ರಚನೆ ಮಾಡಲಾಗುವುದು.
- ಕೇಂದ್ರ ಸರ್ಕಾರ 2016ರಲ್ಲಿ ರೂಪಿಸಿದ "ಮಾದರಿ ಅಂಗಡಿ ಮತ್ತು ಮುಂಗಟ್ಟು ಕಾಯಿದೆ" ಅನುಷ್ಠಾನ.
- ಕಾರ್ಖಾನೆ ಕಟ್ಟಡ ನಕಾಶೆ, ಗಣಕೀಕೃತವಾಗಿ ಕಾರ್ಮಿಕ ನಿರೀಕ್ಷಕ ನಿಗದಿ, ನಿಗಾ ಮಾನದಂಡಗಳು ಮತ್ತು ಕಾರ್ಮಿಕ ಕಾನೂನಿನಡಿ ತಪಾಸಣೆ ವಿಧಾನ ಗೊತ್ತುಪಡಿಸುವುದು - ಹೀಗೆ ಕಾರ್ಖಾನೆ ನಿಯಂತ್ರಣಕ್ಕೆ ಅತ್ಯುತ್ತಮ ವಿಧಾನ ಜಾರಿಗೊಳಿಸಲಾಗುವುದು.
- ದೊಡ್ಡ ಮಟ್ಟದ ಸಂಸ್ಥೆಗಳಾಗಿ ಬೆಳೆದ ನಂತರವೂ ಸಣ್ಣ ಹಾಗೂ ಅತಿಸಣ್ಣ ಉದ್ದಿಮೆಗಳಿಗೆ ನೀಡುವ ಸೌಲಭ್ಯಗಳನ್ನು 3 ವರ್ಷಗಳ ಕಾಲ ಮುಂದುವರಿಸಲಾಗುವುದು.
- ರಫ್ತು ಪ್ರಮಾಣ ಹೆಚ್ಚಳಕ್ಕೆ ಪೂರಕವಾಗಿ "ವಾಣಿಜ್ಯ ಮತ್ತು ವ್ಯಾಪಾರ ಉತ್ತೇಜನ ಆಯುಕ್ತಾಲಯ" ಸ್ಥಾಪಿಸಲಾಗುವುದು.
- ಕೈಗಾರಿಕಾ ಅಭಿವೃದ್ಧಿ ಮತ್ತು ನೀತಿ ನಿರೂಪಣೆ ಕುರಿತು ಸರ್ಕಾರಕ್ಕೆ ಸಲಹೆ ನೀಡಲು "ಕೈಗಾರಿಕಾ ಅಭಿವೃದ್ಧಿ ಸಲಹಾ ಸಮಿತಿ" ರಚನೆ ಮಾಡಲಾಗುವುದು.
- ಉದ್ಯೋಗ ಸೃಷ್ಟಿಗಾಗಿ ಹೆಚ್ಚು ಉದ್ಯೋಗ ನೀಡುವ ಕೈಗಾರಿಕೆಗಳಿಗೆ ಪ್ರತ್ಯೇಕ ನೀತಿ ರಚನೆ ಮಾಡಲಾಗುವುದು.
- ಮಾನವ ಸಂಪನ್ಮೂಲ ಆಧಾರಿತ ಕೈಗಾರಿಕೆಗಳಲ್ಲಿ ಹೊಸ ಉದ್ಯೋಗ ಸೃಷ್ಟಿಗೆ ಒತ್ತು ನೀಡಲು "ಸರ್ ಎಂ. ವಿಶ್ವೇಶ್ವರಯ್ಯ ಉದ್ಯೋಗ ಯೋಜನೆ" ಯನ್ನು ಜಾರಿ ಮಾಡಲಾಗುವುದು.
- ಹೊಸ ಮರಳು ಗಣಿಗಾರಿಕೆ ನೀತಿ ರೂಪಿಸಿ ಮರಳು ಗಣಿಗಾರಿಕೆ ನಿಯಂತ್ರಣ ಹಾಗೂ ಹಂಚಿಕೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
- ಖನಿಜ ಹಂಚಿಕೆಯಲ್ಲಿ ಪಾರದರ್ಶಕತೆ ಕಾಪಾಡಲು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪಾಲಿಸುವಂಥ ಇ ಹರಾಜು ವ್ಯವಸ್ಥೆ ಜಾರಿ. ಈ ಮೂಲಕ ಖನಿಜ ಕೈಗಾರಿಕೆಗಳಿಗೆ ಉತ್ತೇಜನ ನೀಡಿ ಅವುಗಳ ಮೌಲ್ಯ ವರ್ಧನೆಗೆ ಕ್ರಮ ಕೈಗೊಳ್ಳಲಾಗುವುದು.
- ಕೇಂದ್ರದ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿರ್ಬಂಧನೆ) ತಿದ್ದುಪಡಿ ಕಾಯಿದೆ, 2015ನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವುದು. ಆ ಮೂಲಕ ಗಣಿ ವ್ಯವಹಾರದಲ್ಲಿ ಸಂಪೂರ್ಣ ಪಾರದರ್ಶಕತೆ ತರುವುದು.
- ಗಣಿಗಾರಿಕೆ ಪರಿಣಾಮ ವಲಯದಲ್ಲಿ ಸಮಗ್ರ ಪರಿಸರ ಯೋಜನೆಯನ್ನು (ಸಿಇಪಿಎಂಐಝೆಡ್- ಕಾಂಪ್ರೆಹೆನ್ಸಿವ್ ಎನ್ವಿರಾನ್‌ಮೆಂಟಲ್ ಪ್ಲ್ಯಾನ್ ಇನ್ ಮೈನಿಂಗ್ ಇಂಪ್ಯಾಕ್ಟ್ ಝೋನ್) ಜಾರಿಗೊಳಿಸುವುದು ಮತ್ತು ವನಮಹೋತ್ಸವ ಕಾರ್ಯಕ್ರಮಗಳನ್ನು ಹೆಚ್ಚಾಗಿ ಕೈಗೊಳ್ಳಲಾಗುವುದು.

## ಕೈಗಾರಿಕಾ ಮೂಲಸೌಕರ್ಯ ಸ್ಥಾಪನೆ

- ಕೈಗಾರಿಕೆಗಳ ಬೆಳವಣಿಗಾಗಿ ರಾಜ್ಯದ ಎಲ್ಲ ರಾಷ್ಟ್ರೀಯ ಹೂಡಿಕೆ ಹಾಗೂ ಉತ್ಪಾದನಾ ವಲಯ (ಎನ್‌ಐಎಂಝೆಡ್)ಗಳನ್ನು ತ್ವರಿತವಾಗಿ ಕಾರ್ಯಗತಗೊಳಿಸಲಾಗುವುದು.
- ಬೀದರ್‌ನಲ್ಲಿ ರಾಷ್ಟ್ರೀಯ ಹೂಡಿಕೆ ಮತ್ತು ಉತ್ಪಾದನಾ ವಲಯವನ್ನು (NIMZ-ರಾಷ್ಟ್ರೀಯ ಹೂಡಿಕೆ ಹಾಗೂ ಉತ್ಪಾದನಾ ವಲಯ) ಆದಷ್ಟು ಬೇಗ ಕಾರ್ಯಗತಗೊಳಿಸಿ, ರಾಸಾಯನಿಕ ಉತ್ಪನ್ನಗಳು ಹಾಗೂ ರಸಗೊಬ್ಬರಗಳ ಉತ್ಪಾದನೆಗೆ ಗಮನ ನೀಡಲಾಗುವುದು.
- ರಾಜ್ಯ ಸರ್ಕಾರದ ಮೂಲಕ ಜಿಲ್ಲೆಯ ಎಲ್ಲಾ ಉಳಿಕೆ ಉಕ್ಕು ಯೋಜನೆಗಳನ್ನು ಅತಿವೇಗವಾಗಿ ಪೂರ್ಣಗೊಳಿಸಲಾಗುವುದು .
- ಆದಷ್ಟು ಬೇಗ ಅಗತ್ಯ ಕಾನೂನು ಬದಲಾವಣೆಗಳನ್ನು ಮಾಡಿ ಕರಾವಳಿ ಆರ್ಥಿಕ ವಲಯ (ಸಿಇಝೆಡ್) ಕಾರ್ಯಾಚರಿಸುವಂತೆ ಮಾಡಲಾಗುವುದು.

## ಸಣ್ಣ ಹಾಗೂ ಅತಿ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಪ್ರೋತ್ಸಾಹ

- ಸಣ್ಣ ಹಾಗೂ ಅತಿ ಸಣ್ಣ ಉದ್ದಿಮೆಗಳಿಗೆ ಸ್ಥಳ ಹಾಗೂ ಪೂರಕ ವಾತಾವರಣ ಸೃಷ್ಟಿಸುವ ಜತೆಗೆ ಅವುಗಳನ್ನು ತಂತ್ರಜ್ಞಾನ ಆಧಾರಿತ ಉದ್ದಿಮೆಗಳನ್ನಾಗಿ ರೂಪಿಸಲು 15 "ಎಂಎಸ್‌ಎಂಇ ಅಭಿವೃದ್ಧಿ ಕೇಂದ್ರ"ಗಳ ಸ್ಥಾಪನೆ ಮಾಡಲಾಗುವುದು.
- ನಷ್ಟದಲ್ಲಿರುವ ಎಂಎಸ್‌ಎಂಇಗಳನ್ನು ಗುರುತಿಸಿ ಅವುಗಳ ಪುನಶ್ಚೇತನಕ್ಕೆ ಕ್ರಮ ಸೂಚಿಸಲು "ಎಂಎಸ್‌ಎಂಇ ಪುನಶ್ಚೇತನ ಕಾರ್ಯಪಡೆ" ರಚನೆ ಮಾಡಲಾಗುವುದು.

- ಸ್ಥಳೀಯ ವ್ಯಾಪಾರಿಗಳು, ಅಂಗಡಿ ಮಾಲೀಕರು ಮತ್ತು ಕುಶಲಕರ್ಮಿಗಳ ಪ್ರೋತ್ಸಾಹಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆ (ಪಿಪಿಪಿ) ಮಾದರಿಯಲ್ಲಿ ಪ್ರತಿ ಜಿಲ್ಲಾ ಕೇಂದ್ರದಲ್ಲಿ ಶಾಪಿಂಗ್ ಸಂಕೀರ್ಣ ನಿರ್ಮಾಣ ಮಾಡಲಾಗುವುದು.

- ಒಂದೇ ಸೂರಿನಡಿ ಸಣ್ಣ ಹಾಗೂ ಅತಿ ಸಣ್ಣ ಉದ್ದಿಮೆದಾರರಿಗೆ ಕಡಿಮೆ ದರದಲ್ಲಿ ವೃತ್ತಿಪರ ಅಕೌಂಟಿಂಗ್ ಹಾಗೂ ಕಾನೂನು ಸಲಹೆ ಸೇವೆ ನೀಡಲಾಗುವುದು.

- ಎಂಎಸ್‌ಎಂಇ ಕ್ಲಸ್ಟರ್‌ಗಳಲ್ಲಿ ಕೆಲಸ ಮಾಡಲು ಬೇಕಾಗುವ ಕೌಶಲ್ಯ ಕಲಿಕೆಗೆ ಐಟಿಐಗಳಲ್ಲಿ ನಿರ್ದಿಷ್ಟ ಪಠ್ಯಕ್ರಮ.

- ಸಣ್ಣ ವ್ಯಾಪಾರಿಗಳ ಕಲ್ಯಾಣಕ್ಕಾಗಿ ₹ 500 ಕೋಟಿ ಮೊತ್ತದ "ಸಣ್ಣ ವ್ಯಾಪಾರಿ ಕಲ್ಯಾಣ ನಿಧಿ" ಸ್ಥಾಪನೆ ಮಾಡಲಾಗುವುದು.

- "ಸಣ್ಣ ವ್ಯಾಪಾರಿ ಕಲ್ಯಾಣ ನಿಧಿ"ಯಿಂದ ಸುಧಾರಿತ ತಂತ್ರಜ್ಞಾನ ಅಳವಡಿಕೆ, ಉತ್ತಮ ಮಾರುಕಟ್ಟೆ ಸೃಷ್ಟಿಗೆ ಬಡ್ಡಿರಹಿತ ಸಾಲ ಸೌಲಭ್ಯ ಹಾಗೂ ಅಗತ್ಯ ಬಂಡವಾಳ ಹೂಡಿಕೆಗೆ ಕಡಿಮೆ ಬಡ್ಡಿ ದರದ ಅಲ್ಪಾವಧಿ ಸಾಲ ಸೌಲಭ್ಯ ನೀಡಲಾಗುವುದು.





# 10



# ಸಂಸ್ಕೃತಿ ಮತ್ತು ಪರಂಪರೆಯ ಸಂರಕ್ಷಣೆ

## ಸಂಸ್ಕೃತಿ ರಕ್ಷಣೆ

- ದೇವಾಲಯಗಳ ಆಡಳಿತ ಮತ್ತು ನಿರ್ವಹಣೆಯಲ್ಲಿ ಸರಕಾರದ ಹಸ್ತಕ್ಷೇಪ ಇರದಂತೆ ನೋಡಿಕೊಳ್ಳಲಾಗುವುದು.
- ದೇವಸ್ಥಾನಗಳ ಆದಾಯವನ್ನು ಸಂಪೂರ್ಣವಾಗಿ ದೇವಸ್ಥಾನಗಳ ಖರ್ಚು ವೆಚ್ಚ ಮತ್ತು ಸಂಬಂಧಿತ ಧಾರ್ಮಿಕ ಚಟುವಟಿಕೆಗಳಿಗೆ ಮಾತ್ರ ಮೀಸಲಿಡಲಾಗುವುದು.
- ದೇವಸ್ಥಾನಗಳ ಪುನರುಜ್ಜೀವನ ಹಾಗೂ ಪುನರುತ್ಥಾನಕ್ಕಾಗಿ ಮತ್ತು ಮಠಗಳ ಮೂಲಸೌಕರ್ಯಕ್ಕಾಗಿ ಆರಂಭಿಕ ₹ 500 ಕೋಟಿಯ ಮೂಲನಿಧಿಯೊಂದಿಗೆ “ದೇವಾಲಯ ಪುನರುತ್ಥಾನ ನಿಧಿ”ಗೆ ಚಾಲನೆ ನೀಡಲಾಗುವುದು.
- ಹಿಂದೂ ಧಾರ್ಮಿಕ ಸಂಸ್ಥೆಗಳ ಆಡಳಿತಕ್ಕೆ ರಚನೆಯಾಗುವ ಎಲ್ಲಾ ಆಡಳಿತ ಸಂಸ್ಥೆಗಳಿಗೆ ಹಿಂದೂ ಸಮುದಾಯದವರನ್ನೇ ನೇಮಕ ಮಾಡಲಾಗುವುದು.

## ಕನ್ನಡ ಭಾಷೆಗೆ ಉತ್ತೇಜನ

- “ದ.ರಾ. ಬೇಂದ್ರೆ ವಿದ್ಯಾರ್ಥಿ ವೇತನ ನಿಧಿ”ಯಿಂದ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಪಿಎಚ್.ಡಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ₹ 1 ಲಕ್ಷದಷ್ಟು ವಿದ್ಯಾರ್ಥಿ ವೇತನ ನೀಡಲಾಗುವುದು.
- ಸರಕಾರಿ ಕೆಲಸ ಮತ್ತು ಸರಕಾರಿ ಶಿಕ್ಷಣ ಸಂಸ್ಥೆಗಳ ಪ್ರವೇಶ ಪರೀಕ್ಷೆಗಳು ಕನ್ನಡದಲ್ಲೂ ನಡೆಸುವಂತೆ ಕೇಂದ್ರ ಸರಕಾರದ ಜೊತೆಗೂಡಿ ಕಾರ್ಯಗತಗೊಳಿಸಲಾಗುವುದು.
- ಕನ್ನಡ ಮಾತನಾಡಲು ಬಾರದ ವಿದ್ಯಾರ್ಥಿಗಳು ಸುಲಭವಾಗಿ ಸಮ್ಮಿಳಿತಗೊಳ್ಳಲು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಕನ್ನಡವನ್ನು ಕಡ್ಡಾಯ ಪರೀಕ್ಷಾ ರಹಿತ ಪ್ರಾಸ್ತಾವಿಕ ವಿಷಯವಾಗಿ ಅಳವಡಿಸಲಾಗುವುದು.
- ರಾಜ್ಯ ಸರಕಾರದ ಎಲ್ಲಾ ವೆಬ್ ಸೈಟ್‌ಗಳ ಮಾಹಿತಿ ಕನ್ನಡದಲ್ಲಿ ದೊರೆಯುವಂತೆ ನೋಡಿಕೊಳ್ಳಲಾಗುವುದು. ವೆಬ್ ಸೈಟ್ ನಲ್ಲಿ ಮಾಹಿತಿಗಳನ್ನು ಸರಿಯಾದ ಕಾಲಕ್ಕೆ ಅಪ್ ಡೇಟ್ ಮಾಡಲಾಗುವುದು.
- ಕೇಂದ್ರ ಸರಕಾರದ ಪ್ರಮುಖ ವೆಬ್‌ಸೈಟ್‌ಗಳಲ್ಲಿ ಕನ್ನಡ ಭಾಷೆ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದ ಜೊತೆಗೂಡಿ ಕೆಲಸ ಮಾಡಲಾಗುವುದು.
- ರಾಜ್ಯದ ಎಲ್ಲಾ ನಗರ ಕೇಂದ್ರಗಳಲ್ಲಿ ಎಲ್ಲಾ ವಯಸ್ಸಿನವರಿಗಾಗಿ ಕನ್ನಡ ಸಾಹಿತ್ಯ ತರಗತಿ ನಡೆಸಲಾಗುವುದು.
- ಬೇರೆ ರಾಜ್ಯಗಳಲ್ಲಿನ ಶಾಲೆಗಳಲ್ಲಿ ಕನ್ನಡವನ್ನು ಎರಡನೇ/ ಮೂರನೇ ಭಾಷೆಯಾಗಿ ಕಲಿಸಲು ಮತ್ತು ಅಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಐಚ್ಛಿಕ ವಿಷಯವಾಗಿ ಕಲಿಸಲು ಆ ರಾಜ್ಯಗಳೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳಲಾಗುವುದು.
- ಖಾಸಗಿ ಮತ್ತು ಸಾರ್ವಜನಿಕ ವಲಯದ ಬ್ಯಾಂಕಿನ ಸಿಬ್ಬಂದಿವರ್ಗಕ್ಕೆ ಕನ್ನಡ ತಿಳಿದಿರುವಂತೆ ನೋಡಿಕೊಳ್ಳಲು ತರಬೇತಿ ವ್ಯವಸ್ಥೆ.
- ವಿವಿಧ ಭಾರತೀಯ ಭಾಷೆಗಳ ಮೂಲಕ ಕನ್ನಡ ಕಲಿಯುವಂತೆ ಆಧುನಿಕ ಮತ್ತು ಮುಕ್ತ, ವಿವಿಧ ಹಂತಗಳ ಆನ್‌ಲೈನ್ ಕೋರ್ಸ್‌ಗಳ ಆರಂಭ
- ರಾಜ್ಯದಲ್ಲಿ ಉತ್ಪಾದನೆಯಾಗುವ ಉತ್ಪನ್ನಗಳ ಪ್ಯಾಕೇಜಿಂಗ್ ಮೇಲೆ ಕನ್ನಡವೂ ಇರುವಂತೆ ಗ್ರಾಹಕ ಕಾಯ್ದೆಯ ಬಲವರ್ಧನೆ.

## ಕನ್ನಡ ಸಾಹಿತ್ಯದ ಪ್ರಸಾರ

- ಫೆಲೋಶಿಪ್, ಪುಸ್ತಕ ಅನುದಾನ, ಕಲ್ಯಾಣ ಯೋಜನೆಗಳ ಮೂಲಕ ಬರಹಗಾರರು, ಕವಿಗಳು ಮತ್ತು ಇತರ ಸಾಹಿತ್ಯಕ ವ್ಯಕ್ತಿಗಳಿಗೆ ಬೆಂಬಲ ನೀಡಲಾಗುವುದು.
- ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಶಾಸ್ತ್ರೀಯ ಮತ್ತು ಆರಂಭಿಕ ಆಧುನಿಕ ಕನ್ನಡ ಸಂಸ್ಕೃತಿ ಕುರಿತು ಡಿಜಿಟಲ್ ಗ್ರಂಥಾಲಯ ಸ್ಥಾಪಿಸಲಾಗುವುದು.
- ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಸಮಗ್ರ ಪ್ರಚಾರಕ್ಕೆ, ಕನ್ನಡ ಸಾಹಿತ್ಯ ಪರಿಷತ್ ಹಾಗೂ ಇತರೆ ಸರಕಾರಿ ಸಂಸ್ಥೆಗಳಿಗೆ ದುಪ್ಪಟ್ಟು ವಾರ್ಷಿಕ ಅನುದಾನ ನೀಡಲಾಗುವುದು.
- ರಾಜ್ಯದ ಇತಿಹಾಸ ಮತ್ತು ಸಂಸ್ಕೃತಿ ಕುರಿತು ವಿವರವಾದ ಮಾಹಿತಿ ನೀಡುವ ಪುಸ್ತಕಗಳನ್ನೊಳಗೊಂಡ ಸಂಚಾರಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು.
- ಕನ್ನಡ ಆನ್‌ಲೈನ್ ಸುದ್ದಿ ಮತ್ತು ಮ್ಯಾಗಜಿನ್ ವೆಬ್‌ಸೈಟ್‌ಗಳಿಗೆ ಬೆಂಬಲ ನೀಡಲು ಮತ್ತು ಗುರುತಿಸಲು ಡಿ.ವಿ. ಗುಂಡಪ್ಪ ನಿಧಿ ಸ್ಥಾಪಿಸಲಾಗುವುದು.
- ಕನ್ನಡ ಶಾಸ್ತ್ರೀಯ ಭಾಷೆಗೆ ಕೇಂದ್ರ ಸರ್ಕಾರದಿಂದ ದೊರೆಯುವ ಅನುದಾನದ ಸಂಪೂರ್ಣ ಬಳಕೆ ಮಾಡಲಾಗುವುದು.
- ಹಳೆಗನ್ನಡದ ಕುರಿತು ಸಂಶೋಧನೆ ನಡೆಸಲು, ಶ್ರೇಷ್ಠ ಕನ್ನಡ ಸಾಹಿತ್ಯವನ್ನು ಬೇರೆ ಭಾಷೆಗಳಿಗೆ ಮತ್ತು ಪ್ರಮುಖ ಕೃತಿಗಳನ್ನು ಇತರ ಭಾರತೀಯ ಭಾಷೆಗಳಿಗೆ ಅನುವಾದಿಸಲು ಬನವಾಸಿಯಲ್ಲಿ “ಆದಿಕವಿ ಪಂಪ ಸಂಶೋಧನಾ ಕೇಂದ್ರ” ಸ್ಥಾಪಿಸಲಾಗುವುದು.

- ಸಂಶೋಧನಾ ಕೇಂದ್ರದ ಎಲ್ಲಾ ಬರಹಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಭಾರತೀಯರಿಗೆ ಕಡಿಮೆ ಬೆಲೆಗೆ ದೊರೆಯುವಂತೆ ಮಾಡಲಾಗುವುದು.
- ಆನ್‌ಲೈನ್ ಕನ್ನಡ ಶಬ್ದಕೋಶ ರಚಿಸಲು ಮತ್ತು "ದ್ವಿತೀಯ ರನ್ನ ಕಾಂಡ" ಎಂಬ ಜ್ಞಾನಕೋಶ ಹೊರತರಲು ಮುಧೋಳದಲ್ಲಿ "ರನ್ನ ಶಾಸ್ತ್ರೀಯ ಸಾಹಿತ್ಯ ಕೇಂದ್ರ" ಸ್ಥಾಪಿಸಲಾಗುವುದು.
- ಹುಬ್ಬಳ್ಳಿ- ಧಾರವಾಡದಲ್ಲಿ ಕರ್ನಾಟಕದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮ್ಯೂಸಿಯಂ ನಿರ್ಮಿಸಲಾಗುವುದು.

## ಕರುನಾಡ ಸಂಸ್ಕೃತಿಗೆ ಉತ್ತೇಜನ

- ತುಮಕೂರಿನಲ್ಲಿ ಗುಬ್ಬಿ ವೀರಣ್ಣ ಪ್ರದರ್ಶನ ಮತ್ತು ನಾಟಕ ಶಾಲೆ, ಚಾಮರಾಜನಗರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಸಾಂಪ್ರದಾಯಿಕ ಕರ್ನಾಟಕ ಕಲಾ ಶಾಲೆ, ರಾಯಚೂರಿನಲ್ಲಿ ಮಲ್ಲಿಕಾರ್ಜುನ್ ಮನ್ಸೂರ್ ಭಾರತೀಯ ಶಾಸ್ತ್ರೀಯ ಸಂಗೀತ ಶಾಲೆ, ಮೈಸೂರಿನಲ್ಲಿ ಕೆ. ಪಟ್ಟಾಭಿ ಜೋಯಿಸ್ ಯೋಗ ಅಧ್ಯಯನ ಕೇಂದ್ರ ಮತ್ತು ಅಲ್ಲಮ ಪ್ರಭು ಹೆಸರಿನಲ್ಲಿ "ಶರಣ ಸಂಸ್ಕೃತಿ ಅಧ್ಯಯನ ಪೀಠ"ವನ್ನು ಸ್ಥಾಪಿಸಲು ಸಂಸ್ಕೃತಿ ಇಲಾಖೆಯಡಿ ₹ 100 ಕೋಟಿ ಮೀಸಲಿಡಲಾಗುವುದು.
- ಹೊಯ್ಸಳ ಶೈಲಿಯ ವಾಸ್ತುಶಿಲ್ಪ ಬಳಸಿ ನಿರ್ಮಿಸಲಾಗುವ ಬೃಹತ್ ಆಸನ ಸಾಮರ್ಥ್ಯದ ಭವನ, ಚಾಲುಕ್ಯ ಶೈಲಿಯ ವಾಸ್ತುಶಿಲ್ಪ ಬಳಸಿ ಕಟ್ಟಲಾಗುವ ಕರ್ನಾಟಕ ಮ್ಯೂಸಿಯಂ, ಪಟ್ಟಾಭಿ ಜೋಯಿಸ್ ಯೋಗ ಅಧ್ಯಯನ ಕೇಂದ್ರ, ಚಾಮರಾಜೇಂದ್ರ ಒಡೆಯರ್ ಶಾಸ್ತ್ರೀಯ ಸಂಗೀತ ಕೇಂದ್ರ ನಿರ್ಮಿಸಲಾಗುವುದು.
- ಕರ್ನಾಟಕದ ಸಾಂಪ್ರದಾಯಿಕ ಕಲೆ ಮತ್ತು ವಾಸ್ತುಶಿಲ್ಪ ಪುನಶ್ಚೇತನಕ್ಕೆ ಮುಖ್ಯವಾಗಿ ಹೊಯ್ಸಳ, ವಿಜಯನಗರ, ಕದಂಬ ಮತ್ತು ಚಾಲುಕ್ಯ ಶೈಲಿಯ ಕಲೆಯ ಪುನಶ್ಚೇತನಕ್ಕೆ ಯತ್ನ ಹಾಗೂ ಈ ಉದ್ದೇಶಕ್ಕಾಗಿ "ಅಮರ ಶಿಲ್ಪಿ ಜಕಣಾಚಾರಿ ನಿಧಿ"ಯಡಿ ₹ 30 ಕೋಟಿ ಮೀಸಲಿಡಲಾಗುವುದು
- ಮುಂಬರುವ ಸರಕಾರಿ ಕಟ್ಟಡಗಳನ್ನು ಮಲೆನಾಡು, ದಕ್ಷಿಣ ಮತ್ತು ಮಧ್ಯ ಕರ್ನಾಟಕದಲ್ಲಿ ಹೊಯ್ಸಳ ಶೈಲಿಯಲ್ಲಿ, ಕರಾವಳಿ ಮತ್ತು ಮುಂಬಯಿ ಕರ್ನಾಟಕದಲ್ಲಿ ಕದಂಬ ಶೈಲಿಯಲ್ಲಿ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಚಾಲುಕ್ಯ ಶೈಲಿಯಲ್ಲಿ ನಿರ್ಮಿಸಲಾಗುವುದು.
- ರಾಜ್ಯದ ಶ್ರೀಮಂತ ಸಂಗೀತ ಪರಂಪರೆಯನ್ನು ಜನರ ಮುಂದೆ ತೆರೆದಿಡುವುದಕ್ಕಾಗಿ ಕರ್ನಾಟಕದ ಎಲ್ಲಾ ಪ್ರಮುಖ ದೇವಸ್ಥಾನಗಳಲ್ಲಿ "ದೇವಸ್ಥಾನ ಸಂಗೀತ ಪರಂಪರೆ"ಗೆ ಮತ್ತೆ ಚಾಲನೆ ನೀಡಲಾಗುವುದು.

## ಕರ್ನಾಟಕದ ಭವ್ಯ ಸಂಸ್ಕೃತಿಯ ಸಂಭ್ರಮಾಚರಣೆ

- ಕರ್ನಾಟಕದ ಸಂಸ್ಕೃತಿ, ಪ್ರದರ್ಶನ ಕಲೆ, ಮತ್ತು ಕಲಾ ಸಂಸ್ಕೃತಿಯ ಸಂಭ್ರಮಾಚರಣೆಗಾಗಿ ದಸರಾ ಉತ್ಸವದ ಸಂದರ್ಭದಲ್ಲಿ ಪ್ರತಿ ವರ್ಷ ಮೈಸೂರಿನಲ್ಲಿ "ನವ ಕರುನಾಡೋತ್ಸವ" ಹೆಸರಿನ ಬೃಹತ್ ಸಾಂಸ್ಕೃತಿಕ ಮೇಳ ಆಯೋಜಿಸಲಾಗುವುದು.
- ಪ್ರಾದೇಶಿಕ ಸಂಸ್ಕೃತಿ ಮತ್ತು ಪರಂಪರೆಯನ್ನು ಜನರೆದುರು ತೆರೆದಿಡಲು ಪ್ರತಿ ವರ್ಷ "ಪ್ರಾದೇಶಿಕ ನವ ಕರುನಾಡೋತ್ಸವ" ಆಚರಿಸಲಾಗುವುದು
- ಪ್ರತಿ ಎರಡು ವರ್ಷಗಳಿಗೊಮ್ಮೆ ಬೃಹತ್ ಮಟ್ಟದಲ್ಲಿ ಪ್ರವಾಸಿ ಕನ್ನಡಿಗ ಸಮ್ಮೇಳನ ಆಯೋಜನೆ.
- ನಮ್ಮ ನಾಯಕರು, ಇತಿಹಾಸ ಮತ್ತು ಸಂಸ್ಕೃತಿ ಕುರಿತು ಮಾಹಿತಿಭರಿತ ಸಾಕ್ಷ್ಯಚಿತ್ರ ಪ್ರಸಾರ ಮಾಡಲು "ಕರುನಾಡು ಟಿವಿ" ಪ್ರಾರಂಭಿಸಲಾಗುವುದು.
- ಕರ್ನಾಟಕದ ಸಂಸ್ಕೃತಿಯನ್ನು ಪಸರಿಸಲು ದೇಶದ ಪ್ರಮುಖ ನಗರಗಳಲ್ಲಿ "ಕರ್ನಾಟಕ ಭವನ"ಗಳ ಸ್ಥಾಪನೆ. ಈ ಭವನಗಳು ಅಲ್ಲಿನ ಕನ್ನಡಿಗರಿಗಾಗಿ ಪ್ರತಿ ವರ್ಷ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಿವೆ.
- ವಿಶ್ವದ ಬೇರೆ ಬೇರೆ ಕಡೆಗಳಲ್ಲಿ ಕಾವೇರಿ ಎಂಪೋರಿಯಂಗಳನ್ನು ಸ್ಥಾಪಿಸಲಾಗುವುದು. ರಾಜ್ಯದ ಜವಳಿ ಮತ್ತು ಕರಕುಶಲ ಕೈಗಾರಿಕೆಗೆ ಉತ್ತೇಜನ ನೀಡಲು ಮತ್ತು ಈ ಉತ್ಪನ್ನಗಳನ್ನು ಮಾರಾಟ ಮಾಡಲು ಇ-ಕಾಮರ್ಸ್ ವೆಬ್‌ಸೈಟ್ ಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗುವುದು.
- ಕರ್ನಾಟಕ ರಚನೆಗೊಂಡು 65 ವರ್ಷ ತುಂಬುವ ಸಂದರ್ಭದಲ್ಲಿ 2020ರ ನವೆಂಬರ್ 1 ರಿಂದ 2021ರ ನವೆಂಬರ್ 1ರ ತನಕ "ಕರ್ನಾಟಕ ಹಬ್ಬಗಳ ವರ್ಷ"ವಾಗಿ ಆಚರಿಸಲಾಗುವುದು.
- ಹೆಚ್ಚು ಪ್ರವಾಸಿಗರನ್ನು ಕರ್ನಾಟಕಕ್ಕೆ ಆಕರ್ಷಿಸಲು ಮತ್ತು ಅವರು ಇಲ್ಲಿ ದೀರ್ಘ ಕಾಲ ಉಳಿಯುವಂತೆ ಮಾಡಲು ಈ ಹಬ್ಬಗಳ ಸುತ್ತ ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸಲಾಗುವುದು.
- ಪ್ರಯಾಣ ವೆಚ್ಚವನ್ನು ಇಳಿಸಲು ಹಬ್ಬಗಳ ವರ್ಷದ ಅವಧಿಯಲ್ಲಿ ಪ್ರವಾಸಿ ಸಂಸ್ಥೆ ನಡೆಸುವವರಿಗೆ ತೆರಿಗೆ ವಿನಾಯಿತಿ ನೀಡಲಾಗುವುದು.
- ಐಆರ್‌ಸಿಟಿಸಿ, ಖಾಸಗಿ ಸಂಸ್ಥೆಗಳು ಮತ್ತು ಹೋಂ ಸ್ಟೇಗಳ ಸಹಭಾಗಿತ್ವದೊಂದಿಗೆ ಹಬ್ಬಗಳ ವರ್ಷದಲ್ಲಿ ಅಂತಾರಾಷ್ಟ್ರೀಯ ಪ್ರವಾಸಿಗರಿಗೆ ವಿಶೇಷ "ಎಂಡ್ ಟು ಎಂಡ್" ಪ್ಯಾಕೇಜ್‌ಗಳನ್ನು ಘೋಷಿಸಲಾಗುವುದು.
- ರಾಜ್ಯೋತ್ಸವ, ಸಂಕ್ರಾಂತಿ, ಯುಗಾದಿ, ಗಣೇಶೋತ್ಸವ, ದಸರಾ ಮುಂತಾದ ಆಚರಣೆಗಳ ವೇಳೆ ವಿಶೇಷ ಪ್ಯಾಕೇಜ್‌ಗಳನ್ನು ವಿನ್ಯಾಸಗೊಳಿಸಲಾಗುವುದು.

## ಕರ್ನಾಟಕದ ಐತಿಹಾಸಿಕ ಮಹಾಪುರುಷರಿಗೆ ಗೌರವ

- ಅನುಭವ ಮಂಟಪದ ಮಾದರಿಯಲ್ಲಿ ಜಗಜ್ಯೋತಿ ಬಸವೇಶ್ವರರ ಬದುಕು, ಸಾಧನೆಗಳು ಮತ್ತು ಸಾಮಾಜಿಕ ಬದಲಾವಣೆ ಕುರಿತು ಪ್ರಚಾರ ಮಾಡಲು ಅಂತಾರಾಷ್ಟ್ರೀಯ ಕೇಂದ್ರ ಸೇರಿದಂತೆ ಬಸವ ಕಲ್ಯಾಣದಲ್ಲಿ ಭವ್ಯ ಸ್ಮಾರಕ ನಿರ್ಮಿಸಲಾಗುವುದು.
- ಮಾಗಡಿಯಲ್ಲಿರುವ ನಾಡಪ್ರಭು ಕೆಂಪೇಗೌಡರ ಸಮಾಧಿ ಸ್ಥಳವನ್ನು ಭವ್ಯ ಸ್ಮಾರಕವಾಗಿ ಅಭಿವೃದ್ಧಿಪಡಿಸುವುದು.
- ಕರ್ನಾಟಕದ ಮಹಾಪುರುಷರ ಕುರಿತು ಶೈಕ್ಷಣಿಕ ಟಿವಿ ಧಾರಾವಾಹಿಗಳು ಮತ್ತು "ನಮ್ಮ ವೀರರ ಕಥೆಗಳು" ಎಂಬ ಶೀರ್ಷಿಕೆಯಡಿ ಸಚಿತ್ರ ಪುಸ್ತಕ ಮಾಲೆಗಳನ್ನು ಹೊರ ತರಲಾಗುವುದು.
- ಪ್ರತಿ ವರ್ಷ ನವೆಂಬರ್ 1 ರಿಂದ ಆರಂಭಗೊಂಡು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ "ಕರ್ನಾಟಕ ಮಹಾಪುರುಷರ ಮಾಸಾಚರಣೆ" ನಡೆಸಲಾಗುವುದು.

- ವಿವಿಧ ಕಾಲಮಾನಗಳಲ್ಲಿ ನಾಡಿಗೆ ಅಪಾರ ಸೇವೆ ಸಲ್ಲಿಸಿದ ಕರ್ನಾಟಕದ ಮಹಾನ್ ಪುರುಷರನ್ನು ಗೌರವಿಸಲು ಮಡಿಕೇರಿಯಲ್ಲಿ "ವೀರ ಸ್ಥಳ"ದ ನಿರ್ಮಾಣ.
- ರಾಜ್ಯ ಮತ್ತು ದೇಶಕ್ಕಾಗಿ ಮಡಿದವರಿಗೆ ಗೌರವ ಸಲ್ಲಿಸಲು ಪ್ರತಿ ಜಿಲ್ಲಾ ಕೇಂದ್ರದಲ್ಲಿ "ವೀರಗಲ್ಲು" ಸ್ಥಾಪಿಸುವುದು.
- ಚಿತ್ರದುರ್ಗದಲ್ಲಿ "ವೀರ ಮದಕರಿ ನಾಯಕ" ಸ್ಮಾರಕ ನಿರ್ಮಿಸಲಾಗುವುದು
- ಚಿತ್ರದುರ್ಗದಲ್ಲಿ ವೀರ ವನಿತೆ ಒನಕೆ ಓಬ್ಬವ್ವನ ಸ್ಮಾರಕ ನಿರ್ಮಿಸಲಾಗುವುದು.

## ಕನ್ನಡ ಚಲನಚಿತ್ರ ರಂಗಕ್ಕೆ ಪ್ರೋತ್ಸಾಹ

- ದೇವನಹಳ್ಳಿಯಲ್ಲಿ "ಡಾ. ರಾಜ್ ಕುಮಾರ್ ಬೃಹತ್ ಚಲನಚಿತ್ರ ನಗರ" ಹೆಸರಿನಲ್ಲಿ ವಿಶ್ವ ದರ್ಜೆಯ ಫಿಲ್ಮ್ ಸಿಟಿ ನಿರ್ಮಾಣ.
- ನಾಟಕಕಾರರು ಮತ್ತು ಗೀತರಚನೆಕಾರರಿಗೆ "ಟಿ.ಪಿ. ಕೈಲಾಸಂ ಫೆಲೋಶಿಪ್ ಕಾರ್ಯಕ್ರಮ"ದಡಿ ಪ್ರತಿ ವರ್ಷ ₹ 10 ಲಕ್ಷದವರೆಗೆ ಗೌರವ ಧನ ನೀಡಲು ಪ್ರತಿ ವರ್ಷ ₹ 1 ಕೋಟಿಯನ್ನು ಒದಗಿಸಲಾಗುವುದು.
- ಕನ್ನಡ ಚಿತ್ರರಂಗದಲ್ಲಿ ದುಡಿಯುತ್ತಿರುವ ಸಿನೆಮಾ ಕಲಾವಿದರ ಕಲ್ಯಾಣಕ್ಕಾಗಿ "ಪುಟ್ಟಣ್ಣ ಕಣಗಾಲ್ ಮೂಲ ನಿಧಿ"ಯಡಿ ನೆರವು ಒದಗಿಸಲಾಗುವುದು.
- ಮೈಸೂರಿನಲ್ಲಿರುವ ಡಾ. ರಾಜ್‌ಕುಮಾರ್ ಚಲನಚಿತ್ರ ಸಂಸ್ಥೆಯನ್ನು ಮೇಲ್ದರ್ಜೆಗೇರಿಸುವುದು ಮತ್ತು ಚಿತ್ರಕಥೆಗಾರರಿಗೆ "ಸಾಹಸಸಿಂಹ ವಿಷ್ಣುವರ್ಧನ್ ಫೆಲೋಶಿಪ್" ನೀಡಲಾಗುವುದು.
- ಈಗ ಇರುವ ಕನ್ನಡ ಚಿತ್ರಗಳು ಮತ್ತು ಟಿವಿ ಧಾರಾವಾಹಿಗಳಿಗಾಗಿ ಡಿಜಿಟಲ್ ಗ್ರಂಥಾಲಯ ನಿರ್ಮಿಸಲಾಗುವುದು ಹಾಗೂ ಇಂಟರ್‌ನೆಟ್ ಆಧರಿತ ವೀಡಿಯೋ ವಿತರಕರ ಸಹಯೋಗದೊಂದಿಗೆ ಪ್ರಸಾರ ಮಾಡಲಾಗುವುದು.
- ಡಿಜಿಟಲ್ ವೀಡಿಯೋ ವಿತರಕರ ಜೊತೆಗೂಡಿ ಅಗತ್ಯ ನಿಧಿಯನ್ನು ಹೊಂದಿಸಿಕೊಂಡು ಹೊಸಕಾಲದ ಕನ್ನಡ ವೀಡಿಯೋಗಳನ್ನು ತಯಾರು ಮಾಡಲಾಗುವುದು.
- ಕರ್ನಾಟಕದ ಒಳಗೆ ಚಿತ್ರೀಕರಣಗೊಂಡ ಚಲನಚಿತ್ರಗಳಿಗೆ ಸಹಾಯ ಧನ ಹೆಚ್ಚಳ.
- ಕನ್ನಡ ಸಿನೆಮಾಗಳು ರಾಜ್ಯದ ಪ್ರತಿ ಮೂಲೆಗೆ ತಲುಪುವಂತೆ ನೋಡಿಕೊಳ್ಳಲು "ಸಿನೆಮಾ ಆನ್ ವೀಲ್ಸ್" ಕಾರ್ಯಕ್ರಮವನ್ನು ಜಾರಿಗೆ ತರಲಾಗುವುದು.

## ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ

- ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಮುಂದಿನ ಐದು ವರ್ಷಗಳಲ್ಲಿ ₹ 2,500 ಕೋಟಿ ಮೀಸಲಿಡಲಾಗುವುದು.
- ಜಾಗತಿಕ ಮತ್ತು ಸ್ಥಳೀಯ ಪ್ರವಾಸೋದ್ಯಮ ಸಂಸ್ಥೆಗಳ ಜಂಟಿ ಸಹಕಾರದೊಂದಿಗೆ ರಾಜ್ಯದಲ್ಲಿ "ವಿಶೇಷ ಪ್ರವಾಸೋದ್ಯಮ ವಲಯ"ಗಳ ಅಭಿವೃದ್ಧಿ ಮಾಡಲಾಗುವುದು. ಈ ವಲಯಗಳು ಪ್ರವಾಸೋದ್ಯಮ ಕ್ಷೇತ್ರದ ಆಯೋಜಕರಿಗೆ ಮತ್ತು ಉದ್ಯಮಿಗಳಿಗೆ ಉತ್ತೇಜನ ನೀಡಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಹರಿದು ಬರುವಂತೆ ನೋಡಿಕೊಳ್ಳಲಿವೆ ಹಾಗೂ ಸ್ಥಳೀಯ ಸಮುದಾಯಗಳಿಗೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ವೇದಿಕೆ ಒದಗಿಸಲಿವೆ.
- ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಕರ್ನಾಟಕವನ್ನು ಭಾರತ ಮತ್ತು ಜಾಗತಿಕ ಮಟ್ಟದಲ್ಲಿ ಜನಪ್ರಿಯಗೊಳಿಸಲು ಮುಂದಿನ 5 ವರ್ಷಗಳಲ್ಲಿ ₹ 200 ಕೋಟಿ ವೆಚ್ಚದಲ್ಲಿ ಮಾರ್ಕೆಟಿಂಗ್ ಪ್ರಚಾರ ತಂತ್ರಗಳನ್ನು ರೂಪಿಸಲಾಗುವುದು.
- ₹ 40 ಕೋಟಿ ವೆಚ್ಚದ "ಪ್ರವಾಸೋದ್ಯಮ ನಿಧಿ"ಯನ್ನು ಸ್ಥಾಪಿಸಿ ಪ್ರವಾಸೋದ್ಯಮ ಕ್ಷೇತ್ರಕ್ಕೆ ಕಾಲಿಡಲು ಇಚ್ಛಿಸುವ ಉದ್ಯಮಿಗಳನ್ನು ಉತ್ತೇಜಿಸಲಾಗುವುದು.
- ಕೆಎಸ್‌ಟಿಡಿಸಿ ಸಂಸ್ಥೆಯನ್ನು ಉನ್ನತ ಮಟ್ಟದ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆಯಾಗಿ ಪರಿವರ್ತಿಸಲಾಗುವುದು ಹಾಗೂ ಭವಿಷ್ಯದ ಉದ್ಯೋಗಿಗಳನ್ನು ತರಬೇತುಗೊಳಿಸಲು ವೃತ್ತಿಪರ ಆತಿಥ್ಯ ಸಂಸ್ಥೆಗಳ ಜತೆ ಸಹಯೋಗಗೊಳಿಸಲಾಗುವುದು.
- ಉಪಹಾರ ಕೇಂದ್ರಗಳು, ಶೌಚಾಲಯ, ಪಾರ್ಕಿಂಗ್ ವ್ಯವಸ್ಥೆ, ಪ್ರವಾಸಿ ಮಾಹಿತಿ ಕೇಂದ್ರಗಳು ಮುಂತಾದ ಮೂಲಭೂತ ಸೌಕರ್ಯಗಳನ್ನು ಪ್ರವಾಸಿ ತಾಣಗಳ ಸುತ್ತ ಅಭಿವೃದ್ಧಿಪಡಿಸಲಾಗುವುದು.
- ಭಾರತೀಯ ರೈಲ್ವೆ ಸಹಯೋಗದೊಂದಿಗೆ ಸ್ವದೇಶಿ ಮತ್ತು ವಿದೇಶಿ ಪ್ರವಾಸಿಗರಿಗೆ ಕರ್ನಾಟಕ ಪ್ರವಾಸೋದ್ಯಮದ ಅನುಭವ ಒದಗಿಸುವುದಕ್ಕಾಗಿ ಹೊಸ ರೈಲುಗಳನ್ನು ಪ್ರಾರಂಭಿಸಲಾಗುವುದು.
- ಪ್ರಾಯೋಗಿಕ ನೆಲೆಯಲ್ಲಿ ಹಂಪಿ, ಬೇಲೂರು-ಹಳೇಬೀಡು-ಶ್ರವಣಬೆಳಗೊಳ, ಐಹೊಳೆ-ಬಾದಾಮಿ-ಪಟ್ಟದಕಲ್ಲು ಮತ್ತು ಮೈಸೂರಿನಲ್ಲಿ "ಹಾಪ್-ಆನ್-ಹಾಪ್-ಆಫ್" ಬಸ್ ಸೇವೆಯನ್ನು ಆರಂಭಿಸಲಾಗುವುದು ಹಾಗೂ ಇದನ್ನು ಇತರ ನಗರ ಮತ್ತು ಪಟ್ಟಣಗಳಿಗೆ ವಿಸ್ತರಿಸಲಾಗುವುದು.

## ವೈವಿಧ್ಯಮಯ ಪ್ರವಾಸೋದ್ಯಮ ಮಾದರಿಯ ಅಭಿವೃದ್ಧಿ

### ದೇವಸ್ಥಾನ ಪ್ರವಾಸೋದ್ಯಮ

- ಸ್ಥಳೀಯ ಮತ್ತು ಜಾಗತಿಕ ಸಂದರ್ಶಕರನ್ನು ಆಕರ್ಷಿಸಲು ಪ್ರಮುಖ ದೇವಸ್ಥಾನ ಸಮೂಹಗಳ ಸುತ್ತ ಅಗತ್ಯ ಸೌಕರ್ಯಗಳಾದ ರಸ್ತೆಗಳು, ಬಜೆಟ್ ಹೋಟೆಲ್‌ಗಳು, ಮತ್ತು ಕೈಗೆಟುಕುವ ದರದಲ್ಲಿ ಸಾರಿಗೆ ವ್ಯವಸ್ಥೆ ಮುಂತಾದ ಸೇವೆಗಳನ್ನು "ದಿವ್ಯ ದೇವಾಲಯ ಜಾಲ" ಹೆಸರಿನಲ್ಲಿ ಅಭಿವೃದ್ಧಿಪಡಿಸಲಾಗುವುದು.
- ಈ ಸಮೂಹಗಳನ್ನು ಚಾಲುಕ್ಯ ಕ್ಷೇತ್ರ, ಹೊಯ್ಸಳ ಕ್ಷೇತ್ರ, ಹಳೆ ಮೈಸೂರು ಕ್ಷೇತ್ರ, ಕರಾವಳಿ ಕ್ಷೇತ್ರ, ಬೌದ್ಧ ಪಥ, ಜೈನ ಪಥ ಹೀಗೆ ಕರ್ನಾಟಕದ ಜನರಿಗೆ ಈ ಕ್ಷೇತ್ರಗಳು ಧಾರ್ಮಿಕ ಮತ್ತು ಐತಿಹಾಸಿಕ ಹಿನ್ನೆಲೆಯಲ್ಲಿ ಹೇಗೆ ಪ್ರಮುಖ ಎಂಬ ಆಧಾರದ ಮೇಲೆ ರೂಪಿಸಲಾಗುವುದು.
- ಈ ಮೇಲೆ ತಿಳಿಸಿದ ಸರ್ಕ್ಯೂಟ್‌ಗಳನ್ನು ಗಮನದಲ್ಲಿಟ್ಟುಕೊಂಡು "ದರ್ಶನ" ಪ್ಯಾಕೇಜ್‌ಗೆ ಚಾಲನೆ ನೀಡಲಾಗುವುದು.

## ಕರಾವಳಿ ಪ್ರವಾಸೋದ್ಯಮ

- ಮನಮೋಹಕ ಬೀಚ್‌ಗಳು, ದ್ವೀಪಗಳು, ಸುರತ್ಕಲ್ ನಂತಹ ಡೈವಿಂಗ್ ತಾಣಗಳು, ಕಾಪು, ಸೇಂಟ್ ಮೇರಿಸ್ ದ್ವೀಪಗಳು, ಮುಲ್ಕಿ, ಪಣಂಬೂರು, ಗೋಕರ್ಣ, ಮಲ್ಪೆ, ಮುರ್ಡೇಶ್ವರ ಮುಂತಾದ ಪ್ರಮುಖ ಕರಾವಳಿ ತಾಣಗಳ ಅಭಿವೃದ್ಧಿಗಾಗಿ ದೇಶದೊಳಗಿನ ಹಾಗೂ ಹೊರಗಿನ ಆತಿಥ್ಯ ವಲಯದ ಸಂಸ್ಥೆಗಳ ಜೊತೆ ಕೆಎಸ್‌ಟಿಡಿಸಿಯ ಸಹಭಾಗಿತ್ವ ಪಡೆಯಲಾಗುವುದು.
- ಖಾಸಗಿ - ಸರ್ಕಾರಿ ಸಹಭಾಗಿತ್ವ ಮಾದರಿಯಲ್ಲಿ ಮಂಗಳೂರಿನಲ್ಲಿ ಸುಸಜ್ಜಿತ ಅಂತಾರಾಷ್ಟ್ರೀಯ ಸಮಾವೇಶ ಕೇಂದ್ರ (ಐಸಿಸಿ) ಸ್ಥಾಪಿಸಲಾಗುವುದು. ಉದ್ಯಮ ವಲಯದ ಉತ್ತೇಜನಕ್ಕೆ ಈ ಕೇಂದ್ರಗಳು ಪ್ರಾಥಮಿಕ ಕೇಂದ್ರವಾಗಿ ಕೆಲಸ ಮಾಡಲಿವೆ.
- ರಾಜ್ಯದಲ್ಲಿ ವಿಹಾರ ನೌಕಾಯಾನ ಸೇವೆಯನ್ನು ಆರಂಭಿಸಲು ಅಂತಾರಾಷ್ಟ್ರೀಯ ವಿಹಾರ ನೌಕಾಯಾನ ಸಂಸ್ಥೆಗಳ ಸದಸ್ಯರನ್ನು ಆಹ್ವಾನಿಸಲಾಗುವುದು.
- "ಸುಂದರ ಸಮುದ್ರ" ಪ್ಯಾಕೇಜ್ ಅಭಿವೃದ್ಧಿಪಡಿಸಲಾಗುವುದು ಹಾಗೂ ಈ ಮೂಲಕ ಪ್ರವಾಸಿಗರು ಸ್ಪೀಡ್ ಬೋಟ್ ಚಾಲನೆ, ಸಾಹಸ ಕ್ರೀಡೆ, ಆಳ ಸಮುದ್ರದ ಡೈವಿಂಗ್ ಮುಂತಾದ ಮನರಂಜನೆ ಪಡೆದುಕೊಳ್ಳುವಂತೆ ಮಾಡಲಾಗುವುದು.

## ಪ್ರಕೃತಿ ಪ್ರವಾಸೋದ್ಯಮ

- ಹೆಚ್ಚಿನ ಪ್ರಚಾರ ಪಡೆಯದ ಪ್ರದೇಶಗಳಿಗೆ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು.
- ಈ ತಾಣಗಳಿಗೆ ಕೆಎಸ್‌ಟಿಡಿಸಿ ವತಿಯಿಂದ "ಪರ್ಯಾವರಣ ಪರ್ಯಟನೆ" ಪ್ಯಾಕೇಜ್ ಅನ್ನು ಜಾರಿಗೆ ತರಲಾಗುವುದು.

## ಪರಂಪರಾ ಪ್ರವಾಸೋದ್ಯಮ

- ಕರ್ನಾಟಕದ ಭವ್ಯ ಇತಿಹಾಸದ ರಕ್ಷಣೆಗಾಗಿ ಐತಿಹಾಸಿಕ ಹಿನ್ನೆಲೆಯ ಪ್ರದೇಶಗಳನ್ನು ಪುನರುಜ್ಜೀವನಗೊಳಿಸ-ಲಾಗುವುದು. ಹೀಗೆ ಐತಿಹಾಸಿಕ ಕೋಟೆಗಳಿರುವ ಬೀದರ್, ಚಿತ್ರದುರ್ಗ, ಕಲಬುರ್ಗಿ, ಕಿತ್ತೂರು, ಪುರಾತತ್ವ ತಾಣಗಳಾದ ಬೈಸೆ, ಚಂದ್ರವಳ್ಳಿ, ಜಲಸಂಗ್ವಿ ಮತ್ತು ಸಂಗನಕಲ್ಲು. ಈ ಪ್ರದೇಶಗಳಿಗಾಗಿ "ಪರಂಪರೆ" ಹೆಸರಿನ ಪ್ರವಾಸೋದ್ಯಮ ಪ್ಯಾಕೇಜ್ ಜಾರಿಗೊಳಿಸಲಾಗುವುದು.

## ಕೊಡಗು ಪ್ರವಾಸೋದ್ಯಮ

- ಕೊಡಗಿನಲ್ಲಿ ಪ್ರವಾಸಿ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಪಡಿಸಲು ಶಾಶ್ವತ ನಿಧಿ ಸ್ಥಾಪಿಸಲಾಗುವುದು.
- ಈ ಪ್ರದೇಶಕ್ಕಾಗಿ "ಕ್ಯಾಪ್ಟಿವೇಟಿಂಗ್ ಕೊಡಗು" (ಸೊಬಗಿನ ಕೊಡಗು) ಎಂಬ ಪ್ಯಾಕೇಜ್ ಪ್ರಾರಂಭಿಸಲಾಗುವುದು. ಜನಪ್ರಿಯ ಪರ್ವತಗಳಿಗೆ ಚಾರಣ, ಜಲಪಾತ, ಕಾಫಿ ತೋಟಗಳಿಗೆ ಭೇಟಿ, ಓಂಕಾರೇಶ್ವರ ದೇವಸ್ಥಾನ, ಬೈಲುಕುಪ್ಪೆ ಬೌದ್ಧ ಮಠ, ಭಾಗಮಂಡಲ ದೇವಸ್ಥಾನ, ತಲಕಾವೇರಿ ಮತ್ತು ಪಡಿ ಇಗ್ಗುತ್ತಪ್ಪ ಮುಂತಾದ ಕಡೆ ಭೇಟಿ - ಇದೆಲ್ಲವೂ ಈ ಪ್ಯಾಕೇಜ್‌ನಡಿ ಬರಲಿದೆ.

## ಅನುಭವ ಪ್ರವಾಸೋದ್ಯಮ

- ಕಾಫಿ ಉತ್ಪಾದನೆ ಮತ್ತು ಟೇಸ್ಟಿಂಗ್ (ಚಿಕ್ಕಮಗಳೂರು, ಕೊಡಗು), ರೇಷ್ಮೆ ನೇಯ್ಗೆ (ರಾಮನಗರ, ಮೈಸೂರು) ಮತ್ತು ಚನ್ನಪಟ್ಟಣದ ಗೊಂಬೆಗಳ ಕರಕುಶಲತೆ (ಚನ್ನಪಟ್ಟಣ) ಮುಂತಾದುವುಗಳ ಸುತ್ತ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಕರ್ನಾಟಕದ ಜನರ ಬದುಕಿನ ಅನುಭವವನ್ನು ಪ್ರವಾಸಿಗಳು ಪಡೆಯುವಂತೆ ಮಾಡಲಾಗುವುದು.
- ಶಾಲಾ ಮಕ್ಕಳಿಗಾಗಿ "ಸ್ಪಂದನ" ಎಂಬ ಹೆಸರಿನ ವಿಶೇಷ ಪ್ಯಾಕೇಜ್ ಅನ್ನು ಜಾರಿಗೆ ತರಲಾಗುವುದು.

## ಆರೋಗ್ಯ ಪ್ರವಾಸೋದ್ಯಮ

- ಜಗತ್ತಿನ ಮೂಲೆ ಮೂಲೆಗಳಿಂದ ಬರುವ ಅತಿಥಿಗಳು ಸಾಂಪ್ರದಾಯಿಕ ಔಷಧೋಪಚಾರವನ್ನು ಬಳಸಿಕೊಳ್ಳಲು ಕರ್ನಾಟಕದಲ್ಲಿ ಆರೋಗ್ಯ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲಾಗುವುದು.
- ಶಿವಮೊಗ್ಗ, ಉಡುಪಿ, ಮಡಿಕೇರಿ, ಮೇಲುಕೋಟೆಯಲ್ಲಿ "ಧನ್ವಂತರಿ" ಹೆಸರಿನ ಆರೋಗ್ಯಧಾಮಗಳು ಮತ್ತು ಯೋಗ ಕೇಂದ್ರಗಳನ್ನು ತೆರೆಯಲಾಗುವುದು.

## ಆಹಾರ ಪ್ರವಾಸೋದ್ಯಮ

- ರಾಜ್ಯದ ಶ್ರೀಮಂತ ಆಹಾರ ವೈವಿಧ್ಯವನ್ನುಯನ್ನು ಪರಿಚಯಿಸಲು "ಆಹಾರ" ಎಂಬ ಹೆಸರಿನ ಉಪಕ್ರಮಕ್ಕೆ ಚಾಲನೆ ನೀಡಲಾಗುವುದು.
- "ಆಹಾರ" ಉಪಾಹಾರ ಗೃಹಗಳಿಗೆ ತಮ್ಮ ಮೂಲಭೂತ ಸೌಕರ್ಯ ವೃದ್ಧಿಸಿಕೊಳ್ಳಲು ಮತ್ತು ಸೇವಾ ಕ್ಷಮತೆಯನ್ನು ಹೆಚ್ಚಿಸಿಕೊಳ್ಳಲು ಶೇ 4ರ ಬಡ್ಡಿದರದಲ್ಲಿ ₹ 20 ಲಕ್ಷವರೆಗೆ ಸಾಲ ನೀಡಲಾಗುವುದು.
- ಉತ್ತರ ಕರ್ನಾಟಕ, ಕರಾವಳಿ ಮತ್ತು ಹಳೆ ಮೈಸೂರು - ಹೀಗೆ ಮೂರು ಆಹಾರ ಪಥಗಳನ್ನು ಅಭಿವೃದ್ಧಿಪಡಿಸಲಾಗುವುದು. ಈ ಆಹಾರ ಪಥಗಳು ಸ್ಥಳೀಯ ಅಡಿಗೆ ಪದಾರ್ಥಗಳ ಕುರಿತು ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಮೂಲಕ ಸ್ಥಳೀಯ ಆಹಾರಗಳ ಮೂಲಗಳ ಕುರಿತು ಅರಿವು ಮೂಡಿಸುವುದು.

## ಉದ್ಯೋಗವಕಾಶ

- ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸಾಮರ್ಥ್ಯ ವೃದ್ಧಿ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ರಾಜ್ಯ ಪ್ರವಾಸೋದ್ಯಮ ಮತ್ತು ಆತಿಥ್ಯ ನಿರ್ವಹಣಾ ಸಂಸ್ಥೆಯನ್ನು ಶಿವಮೊಗ್ಗದಲ್ಲಿ ನಿರ್ಮಿಸಲಾಗುವುದು.
- ಪ್ರವಾಸೋದ್ಯಮ ಅಭಿವೃದ್ಧಿಗೆ ಸಹಕಾರಿಯಾಗುವಂತೆ ಉದ್ಯೋಗಿಗಳಿಗೆ ಮತ್ತು ಮಾರ್ಗದರ್ಶಿಗಳಿಗೆ ಸರ್ಟಿಫಿಕೇಟ್ ಕೋರ್ಸ್ ಮೂಲಕ ತರಬೇತಿ ನೀಡಲು ಪ್ರತಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಆಧರಿತ ಬಹು ಕೌಶಲ್ಯ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಗುವುದು.
- ರಾಜ್ಯ ಪ್ರವಾಸೋದ್ಯಮ ಮತ್ತು ಆತಿಥ್ಯ ನಿರ್ವಹಣೆ ಸಂಸ್ಥೆ ಮತ್ತು ಬಹು ಕೌಶಲ್ಯ ತರಬೇತಿ ಕೇಂದ್ರಗಳಲ್ಲಿ ತರಬೇತುದಾರರಾಗಿ ಕೆಲಸ ಮಾಡಲು ನುರಿತ ಪ್ರವಾಸಿ ಗೈಡ್‌ಗಳನ್ನು ಬಳಸಿಕೊಳ್ಳಲಾಗುವುದು.



11



# ರಾಜ್ಯದ ಎಲ್ಲಾ ವಲಯಗಳ ಸಮಾನ ಅಭಿವೃದ್ಧಿ

## ಹೈದರಾಬಾದ್ ಕರ್ನಾಟಕದ ವಿಕಾಸ

- ವಿಧಿ 371 (ಜೆ) ವಲಯದ ನಿವಾಸಿಗಳಿಗೆ ಮೀಸಲಾಗಿರುವ ಉದ್ಯೋಗಗಳನ್ನು ತ್ವರಿತವಾಗಿ ಭರ್ತಿ ಮಾಡಲಾಗುವುದು.
- ವಿಧಿ 371 (ಜೆ) ಪ್ರಕಾರ ನೀಡಲಾದ ವಿಶೇಷ ಸ್ಥಾನಮಾನ ಸಂಬಂಧಿತ ಸಮಗ್ರ ಬೆಳವಣಿಗೆಗೆ ಕೇಂದ್ರ ಸರ್ಕಾರ ನೀಡುವ ನಿಧಿಯನ್ನು ಸಂಪೂರ್ಣವಾಗಿ ಬಳಸಲಾಗುವುದು.
- ವಿಧಿ 371 (ಜೆ) ಆಧಾರಿತ ವಿಶೇಷ ಸ್ಥಾನಮಾನ ಸಂಬಂಧಿತ ಹೈದರಾಬಾದ್ ಕರ್ನಾಟಕ ವಲಯದ ಆಯ್ದ ಒಂದು ಜಿಲ್ಲಾ ಕೇಂದ್ರದಲ್ಲಿ ವಿಶೇಷ ಕೈಗಾರಿಕಾ ಹೂಡಿಕೆ ಸಮ್ಮೇಳನವನ್ನು ಎರಡು ವರ್ಷಗಳಿಗೊಮ್ಮೆ ಆಯೋಜಿಸುವ ಮೂಲಕ ಆ ಪ್ರದೇಶಕ್ಕೆ ಹೂಡಿಕೆಯನ್ನು ಆಕರ್ಷಿಸಲಾಗುವುದು.
- ಹೊಸಪೇಟೆಯಿಂದ ಹೈದರಾಬಾದ್‌ವರೆಗಿನ ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ ಮತ್ತು ಬೀದರ್ ಮೂಲಕ ಹಾದುಹೋಗುವ "ಹೈದರಾಬಾದ್ ಕರ್ನಾಟಕ ಕೈಗಾರಿಕಾ ಮೆಗಾ ಕಾರಿಡಾರ್" ಅನ್ನು ಸ್ಥಾಪಿಸಲಾಗುವುದು.
- ನಗರೋತ್ಥಾನ ಯೋಜನೆಯಡಿ ಕೈಗಾರಿಕಾ ಕಾರಿಡಾರ್ ಸಂಬಂಧಿತ ನಗರಗಳಿಗೆ ಆದ್ಯತೆ ನೀಡಲಾಗುವುದು.
- ಹೊಸಪೇಟೆ, ಕೊಪ್ಪಳ, ರಾಯಚೂರು, ಯಾದಗಿರಿ, ಕಲಬುರಗಿ ಮತ್ತು ಬೀದರ್‌ಗಳಲ್ಲಿ ಒಂದು ಹೊಸ ಮೆಗಾ ಸಂಯೋಜಿತ ಪಟ್ಟಣವನ್ನು ನಿರ್ಮಿಸಲಾಗುವುದು. ಅದು ಅಗತ್ಯ ಸಿಬ್ಬಂದಿಗಳಾದ ವೈದ್ಯರು, ಶೈಕ್ಷಣಿಕ ತಜ್ಞರು, ಎಂಜಿನಿಯರ್‌ಗಳು ಮತ್ತು ಆಡಳಿತಾಧಿಕಾರಿಗಳಿಗೆ ಅನುಕೂಲವಾಗುವಂತೆ ವಿಧಿ 371 (ಜೆ) ಸಂಬಂಧಿತ ಜಿಲ್ಲಾ ಕೇಂದ್ರಗಳಲ್ಲಿ ಅಗತ್ಯ ವಸತಿ ಮತ್ತು ಆಧುನಿಕ ಜೀವನಶೈಲಿಗೆ ಪೂರಕ ಸೌಲಭ್ಯಗಳನ್ನು ಒದಗಿಸಲಾಗುವುದು.
- ಬಿಜೆಪಿ ಅಧಿಕಾರವಿದ್ದಾಗ ಜಾರಿಗೆ ತಂದಿದ್ದ ಕಲಬುರಗಿಯ ಐಟಿ ಪಾರ್ಕ್ ಮತ್ತು ತೊಗರಿಬೇಳೆ ಪಾರ್ಕ್‌ಗಳನ್ನು ಪೂರ್ಣಗೊಳಿಸಲಾಗುವುದು.
- ಹೈದರಾಬಾದ್ ಕರ್ನಾಟಕದ ಜಿಲ್ಲಾ ಪಂಚಾಯತ್‌ಗಳಿಗೆ ಏಕಕಾಲಿಕ ₹ 200 ಕೋಟಿ ರೂ ನೆರವು ನೀಡಲಾಗುವುದು.
- ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗಾಗಿ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಿಗೆ ಮೀಸಲಾಲಿಟ್ಟ ಜಿಲ್ಲಾ ಖನಿಜ ನಿಧಿಯನ್ನು ಬಳಸಲಾಗುವುದು.

## ಕರ್ನಾಟಕದ ಸರ್ವಸ್ಪರ್ಶೀ ಅಭ್ಯುದಯಕ್ಕೆ ಕಾರ್ಯತಂತ್ರ

- ಇಡೀ ರಾಜ್ಯ ಅಭಿವೃದ್ಧಿ ಸಮಾನತೆ ಸಾಧಿಸುವಂತಹ "ಎಲ್ಲರನ್ನೂ ಒಳಗೊಂಡ ದೀರ್ಘಕಾಲಿಕ ಅಭಿವೃದ್ಧಿ ದೃಷ್ಟಿಕೋನ"ಕ್ಕೆ ಬದ್ಧವಾಗಿರುತ್ತೇವೆ.
- ರಾಜ್ಯದ ಎಲ್ಲ ಪ್ರದೇಶಗಳ ಅಭಿವೃದ್ಧಿಯಲ್ಲಿ ಸಮಾನತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ "30 ಜಿಲ್ಲೆಗಳ - 30 ಹಬ್" ಮೆಗಾ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗುವುದು. ಪ್ರತಿ ಹಬ್ ನಿರ್ದಿಷ್ಟ ಮತ್ತು ತುಲನಾತ್ಮಕ ಪ್ರಯೋಜನವಿರುವ ಉದ್ಯಮವನ್ನು ಅಭಿವೃದ್ಧಿಪಡಿಸುವ ಬಗ್ಗೆ ಗಮನಹರಿಸಲಿದೆ.
- ಆಹಾರ ಸಂಸ್ಕರಣೆ, ತೋಟಗಾರಿಕೆ, ಹೂ ಕೃಷಿ, ಮೀನುಗಾರಿಕೆ, ಹೈನುಗಾರಿಕೆ, ಕೈ ಮಗ್ಗ, ಜವಳಿ ಹಾಗೂ ಉಡುಪು ಉತ್ಪಾದನೆ, ರೇಷ್ಮೆ ಕೃಷಿ, ಆಟೋಮೋಟಿವ್ ಉತ್ಪಾದನೆ, ಐಟಿ ಆವಿಷ್ಕಾರ, ಆರೋಗ್ಯ ವಲಯ, ಉಕ್ಕು ಉತ್ಪಾದನೆ, ಎಲೆಕ್ಟ್ರಾನಿಕ್ಸ್ ಹಾಗೂ ಹಾರ್ಡ್‌ವೇರ್ ಉತ್ಪಾದನೆ, ವಿದ್ಯುತ್ ಉತ್ಪಾದನೆ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ, ಪೆಟ್ರೋಕೆಮಿಕಲ್ ಉದ್ದಿಮೆ, ಪ್ಲಾಸ್ಟಿಕ್ ಎಂಜಿನಿಯರಿಂಗ್ ಸೇರಿದಂತೆ ಇನ್ನಿತರ ಕೈಗಾರಿಕಾ ಚಟುವಟಿಕೆಗಳ ಮೇಲೆ ಹಬ್‌ಗಳು ಗಮನ ಹರಿಸಲಿವೆ.
- ರಾಜ್ಯದ ಎಲ್ಲ ಜಿಲ್ಲೆಗಳನ್ನು ಸಂಪರ್ಕಿಸುವ ಷಟ್ಪಥ "ಕರ್ನಾಟಕ ಮಾಲಾ" ಹೆದ್ದಾರಿಯ ನಿರ್ಮಾಣ ಮಾಡಲಾಗುವುದು.
- ಪ್ರತಿ ಹಬ್‌ಗಳಲ್ಲಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು.
- ಉಡಾನ್ ಯೋಜನೆಯಡಿ ಸಾಧ್ಯವಿರುವ ಹಬ್‌ಗಳಿಗೆ ವಿಮಾನಯಾನ ಸಂಪರ್ಕ ಕಲ್ಪಿಸಲಾಗುವುದು.
- ಎಲ್ಲಾ "ಭಾರತಮಾಲಾ" ಮತ್ತು "ಸಾಗರ್ ಮಾಲಾ" ಡಿಪಿಆರ್ ಹಾಗೂ ಅದರಡಿ ಪ್ರಗತಿಯಲ್ಲಿರುವ ಯೋಜನೆಗಳನ್ನು ಚುರುಕುಗೊಳಿಸಲಾಗುವುದು.
- ಹಬ್ ಹಾಗೂ ಸುತ್ತಮುತ್ತಲ ನಗರ ಪ್ರದೇಶಗಳ ನಡುವಿನ ಸಂಪರ್ಕಕ್ಕಾಗಿ ಸಾಧ್ಯವಿರುವ ಪ್ರದೇಶಗಳಿಗೆ "ರೀಜನಲ್ ರ್‍ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್" (ಆರ್‌ಆರ್‌ಟಿಎಸ್) ಕಲ್ಪಿಸಲಾಗುವುದು.
- ಈ ಹಬ್‌ಗಳಲ್ಲಿ ಕೆಲಸ ಮಾಡಲು ಬೇಕಾದ ಕೌಶಲ್ಯಗಳ ಕಲಿಕೆಗೆ ಐಟಿಐ, ತಾಂತ್ರಿಕ ಸಂಸ್ಥೆಗಳು ಹಾಗೂ ಹೆಚ್ಚಿನ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

# 12



# ಸ್ವಚ್ಛ ಮತ್ತು ಹಸಿರು ಕರ್ನಾಟಕ

## ಕಾಡುಗಳು ಮತ್ತು ಪರಿಸರ

- ಅರಣ್ಯ ಪ್ರದೇಶದ ಒತ್ತುವರಿಯನ್ನು ತಡೆಗಟ್ಟುವ ಮೂಲಕ ಕಾಡು ಪ್ರಾಣಿಗಳು ನಾಡಿಗೆ ನುಗ್ಗದಂತೆ ತಡೆಯಲಾಗುವುದು. ಕಾಡುಪ್ರಾಣಿಗಳಿಂದ ನಾಗರಿಕರನ್ನು ರಕ್ಷಣೆ ಮಾಡುವುದು ಮತ್ತು ತೊಂದರೆಗೊಳಗಾದ ನಾಗರಿಕರಿಗೆ ಸೂಕ್ತ ಪರಿಹಾರವನ್ನು ನೀಡಲಾಗುವುದು.

- ಕಾಡಿನ ಪ್ರಮಾಣ ಹೆಚ್ಚಿಸಲು ಮತ್ತು ಕಾಡುಪ್ರಾಣಿಗಳ ರಕ್ಷಣೆಗಾಗಿ "ಸ್ಟೇಟ್ ಕಾಂಪೆನ್ಸೇಟರಿ ಅಫೋರೆಸ್ಟೇಶನ್ ಫಂಡ್"ನ ಸೂಕ್ತ ಬಳಕೆ ಮಾಡಲಾಗುವುದು.

- ನಮ್ಮ ಕಾಡುಗಳ ರಕ್ಷಣೆ, ನಿರ್ವಹಣೆ ಮತ್ತು ಮೇಲ್ವಿಚಾರಣೆಗಾಗಿ ಜಿಯೋಸ್ಪೇಷಿಯಲ್ ತಾಂತ್ರಿಕತೆಯ ಬಳಕೆ ಮಾಡಲಾಗುವುದು.

- ಕಾಡಿನ ಎಲ್ಲಾ ಉತ್ಪನ್ನಗಳ ಮೇಲೆ ನಿಗಾ ಇಡಲು ಕಾಡು ಉತ್ಪನ್ನ ಟ್ರ್ಯಾಕಿಂಗ್ ವ್ಯವಸ್ಥೆಯನ್ನು ರೂಪಿಸಲಾಗುವುದು.

- ಸೂಕ್ತ ಕಾರ್ಯನಿರ್ವಹಣೆ ಮತ್ತು ಪಾರದರ್ಶಕತೆಗಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಬಲಗೊಳಿಸಲಾಗುವುದು.

- ರಾಜ್ಯದ ಎಲ್ಲಾ ನಗರ ಕೇಂದ್ರಗಳಲ್ಲಿ "ಮಾಲಿನ್ಯ ರಹಿತ ನಗರ" ಅಭಿಯಾನವನ್ನು ಕೈಗೊಳ್ಳುವುದು ಮತ್ತು ವೈಜ್ಞಾನಿಕ ವಿಧಾನಗಳ ಮೂಲಕ ನಗರ ಪ್ರದೇಶಗಳಲ್ಲಿ ಮಾಲಿನ್ಯ ತಡೆಗಟ್ಟಲು ಸಮಯ ಮಿತಿ ಆಧಾರಿತ ಯೋಜನೆಯೊಂದನ್ನು ರೂಪಿಸಲಾಗುವುದು.

- ನದಿ ಮತ್ತು ತೊರೆಗಳ ಮಾಲಿನ್ಯವನ್ನು ತಡೆಗಟ್ಟಲು ಮತ್ತು ಪುನಶ್ಚೇತನಕ್ಕೆ ರಾಜ್ಯ ಮಟ್ಟದ ಸಂಸ್ಥೆ ರಚಿಸಲಾಗುವುದು.

- ಎಲ್ಲಾ ನಗರ ಕೇಂದ್ರಗಳಲ್ಲಿ ಸೈಕಲ್ ಸವಾರರು ಮತ್ತು ಪಾದಚಾರಿಗಳಿಗಾಗಿ ಉತ್ತಮ ಮೂಲ ಸೌಕರ್ಯ ಕಲ್ಪಿಸಲಾಗುವುದು.

- ಬೆಂಗಳೂರನ್ನು "ಕಸ ಮುಕ್ತ" (ಝೀರೋ ಗಾರ್ಬೇಜ್) ನಗರವನ್ನಾಗಿ ಮಾಡುವ ಭರವಸೆಯನ್ನು ನಾವು ನೀಡುತ್ತೇವೆ.

- ಬೆಂಗಳೂರಿನ ಕೆರೆಗಳನ್ನು ಸ್ವಚ್ಛಗೊಳಿಸಿ, ಪುನರುಜ್ಜೀವನಗೊಳಿಸಲು "ನಾಡಪ್ರಭು ಕೆಂಪೇಗೌಡ ನಿಧಿ" ಸ್ಥಾಪಿಸಲಾಗುವುದು.

- ನಮ್ಮ ಸರಕಾರ ಅಧಿಕಾರಕ್ಕೆ ಬಂದ 30 ದಿನದೊಳಗಾಗಿ ರಾಜ್ಯದಲ್ಲಿ ಮರಳು ಮಾಫಿಯಾ, ಭೂಮಾಫಿಯಾ ಮತ್ತು ಕಾನೂನುಬಾಹಿರ ಗಣಿಗಾರಿಕೆ ಮಾಫಿಯಾ ಮುಂತಾದ ಮಾಫಿಯಾ ರಾಜ್‌ಅನ್ನು ಕೊನೆಗೊಳಿಸಲು ಶಾಶ್ವತ ವಿಶೇಷ ಕಾರ್ಯ ಪಡೆ (ಎಸ್‌ಟಿಎಫ್) ಸ್ಥಾಪಿಸಲಾಗುವುದು.

- ರಾಜ್ಯದ ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲಿ ಲಾಲ್ ಬಾಗ್ ಉದ್ಯಾನದ ಮಾದರಿಯಲ್ಲಿ ಬೃಹತ್ ಉದ್ಯಾನಗಳ ನಿರ್ಮಾಣ.

- ಎಲ್ಲಾ ನಗರ ನಿಗಮ ಕೇಂದ್ರಗಳಲ್ಲಿ 24X7 ವಾಯು ಗುಣಮಟ್ಟ ಮೇಲ್ವಿಚಾರಣಾ ಕೇಂದ್ರಗಳನ್ನು ಸ್ಥಾಪಿಸಿ, KSPCB ವೆಬ್‌ಸೈಟ್‌ನಲ್ಲಿ ಮಾಲಿನ್ಯದ ಮಟ್ಟವನ್ನು ಲೈವ್ ಅಪ್‌ಡೇಟ್ ನೀಡುವ ವ್ಯವಸ್ಥೆ ಮಾಡಲಾಗುವುದು.

- ವಿದ್ಯುತ್ ವಾಹನಗಳ ಖರೀದಿಗೆ ಸಹಾಯ ಧನ ಒದಗಿಸುವ ಹಾಗೂ ವಾಹನಗಳನ್ನು ಚಾರ್ಜ್ ಮಾಡುವ ಮೂಲಸೌಕರ್ಯ ಒದಗಿಸಲು "ವಿದ್ಯುತ್ ವಾಹಿನಿ ಯೋಜನೆ" ಅಡಿಯಲ್ಲಿ ₹ 100 ಕೋಟಿ ಮೀಸಲಿಡಲಾಗುವುದು.

13



# ನವ ಬೆಂಗಳೂರಿಗೆ ನಮ್ಮ ವಚನ

## ಹೆಮ್ಮೆಯ ನಗರವಾಗಿ ಬೆಂಗಳೂರು

- ಬೆಂಗಳೂರನ್ನು ವಿಶ್ವದರ್ಜೆ ನಗರವನ್ನಾಗಿಸಲು ನಗರಕ್ಕೆ ಅತ್ಯಾಧುನಿಕ ಮೂಲಸೌಕರ್ಯ, ಗುಣಮಟ್ಟದ ಜೀವನ ಹಾಗೂ ನಾಗರಿಕರ ಆಶೋತ್ತರಗಳನ್ನು ಈಡೇರಿಸಲು ನಾನಾ ಅವಕಾಶಗಳನ್ನು ಸೃಷ್ಟಿಸಲಾಗುವುದು. ಕರ್ನಾಟಕ ಹಾಗೂ ದೇಶದ ಜನರಿಗಷ್ಟೇ ಅಲ್ಲ ವಿಶ್ವದ ಜನರಿಗೆ ಹೆಮ್ಮೆಯ ನಗರವಾಗಿ ಪರಿವರ್ತಿಸಲಾಗುವುದು.
- ಬೆಂಗಳೂರಿನ ಅಗತ್ಯಗಳನ್ನು ಪೂರೈಸಲು "ನವ ಬೆಂಗಳೂರು ಕಾಯಿದೆ" ಎಂಬ ಹೊಸ ಕಾನೂನು ಜಾರಿಗೊಳಿಸಲಾಗುವುದು.
- ಮನೆಗಳ ಬೆಲೆ ಕಡಿಮೆ ಮಾಡಲು, ಉತ್ತಮ ನಗರ ಯೋಜನೆ ಮತ್ತು ವಸತಿ ಪ್ರದೇಶಗಳು ವಾಣಿಜ್ಯ ಚಟುವಟಿಕೆ ಪ್ರದೇಶಗಳಾಗಿ ಬದಲಾಗುವುದನ್ನು ತಡೆಗಟ್ಟಲು ಜಪಾನಿನ ಝೋನಿಂಗ್ (Japanese Zoning) ಮಾದರಿಯಲ್ಲಿ ಅಂತರ್ಗತ ವಲಯ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸಲಾಗುವುದು.
- ಈ ಮಾದರಿಯಡಿಯಲ್ಲಿ ವಸತಿ ವಲಯಗಳನ್ನು ವಸತಿ ಚಟುವಟಿಕೆಗಳಿಗೆ ಮಾತ್ರ ಬಳಸುವುದು, ವಾಣಿಜ್ಯ ವಲಯಗಳನ್ನು ವಾಣಿಜ್ಯ ಮತ್ತು ವಸತಿ ಚಟುವಟಿಕೆಯಲ್ಲಿ ಮಾತ್ರ ಬಳಸುವುದು, ಸಣ್ಣ ಉದ್ಯಮ ವಲಯಗಳನ್ನು ಕೇವಲ ಸಣ್ಣ ಉದ್ಯಮ, ವಾಣಿಜ್ಯ ಮತ್ತು ವಸತಿ ಚಟುವಟಿಕೆಗಳಿಗೆ ಬಳಸುವುದು ಹಾಗೂ ಭಾರಿ ಉದ್ಯಮ ವಲಯದ ವಸತಿಯೂ ಸೇರಿದಂತೆ ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳಿಗೆ ಬಳಸಲು ಅನುಮತಿ ನೀಡಲಾಗುವುದು.
- ಬೆಂಗಳೂರು ವಿಮಾನ ನಿಲ್ದಾಣದ ಸುತ್ತ ಮುತ್ತಲ ಪ್ರದೇಶದ ಸದುಪಯೋಗ ಮಾಡಿಕೊಳ್ಳಲು ದೇವನಹಳ್ಳಿ ಐಟಿ ಸಿಟಿ ನಿರ್ಮಾಣ ಮಾಡಲಾಗುವುದು.
- ಐಐಎಸ್‌ಸಿ ಬೆಂಗಳೂರು ಹಾಗೂ ಐಐಎಂ ಬೆಂಗಳೂರು, ಇವುಗಳ ಸಹಯೋಗದೊಂದಿಗೆ ₹ 200 ಕೋಟಿ ವೆಚ್ಚದಲ್ಲಿ "ಕೆ-ಹಬ್" (incubator for startup) ಸ್ಥಾಪಿಸಲಾಗುವುದು.
- ಐಟಿ ಉದ್ಯಮ ಇತ್ತೀಚೆಗೆ ಎದುರಿಸಿದ ಸವಾಲುಗಳಿಗೆ ಸ್ಪಂದಿಸಲು ಮತ್ತು ಪ್ರತಿಕ್ರಿಯಿಸಲು ಕರ್ನಾಟಕ ಐಸಿಟಿ ನೀತಿ, 2011ರ ಪರಿಷ್ಕರಣೆ ಮಾಡಲಾಗುವುದು.
- ಐಟಿ ಉದ್ಯಮದಲ್ಲಿನ ಹೊಸ ಸವಾಲುಗಳಿಗೆ ರಾಜ್ಯ ಸಮರ್ಥವಾಗಿ ಸ್ಪಂದಿಸಲು ಐಟಿ ಮತ್ತು ಪಾಲಿಸಿ ವೃತ್ತಿಪರರ ಸಹಾಯ ಪಡೆದು ಕಿಯೋನಿಕ್ಸ್ (Karnataka State Electronics Development Corporation Limited - KEONICS)ನ ಪುನಾರಚನೆ ಮಾಡಲಾಗುವುದು.

## ಸಂಚಾರ ಸಮಸ್ಯೆಗಳಿಗೆ ಪರಿಹಾರ

### ಮೂಲಸೌಕರ್ಯದ ಯೋಜನೆಗಳು

- ಹೊಸದಾಗಿ ರಚನೆಯಾಗಲಿರುವ ಮೂಲಸೌಕರ್ಯ ಮತ್ತು ಸಂಚಾರ ತಜ್ಞರ ಸಮಿತಿ ಶಿಫಾರಸು ಮಾಡುವ ಸಮಗ್ರ ಮೂಲಸೌಕರ್ಯ ಕ್ರಿಯಾ ಯೋಜನೆ ಅನುಷ್ಠಾನ.
- ನಗರದ ಸುಗಮ ಸಂಚಾರಕ್ಕೆ ನೆರವಾಗುವ ನಾಗರಿಕ ಪಾಲ್ಗೊಳ್ಳುವಿಕೆ ಆ್ಯಪ್ ನಂತಹ ವಿನೂತನ ಪ್ರಯತ್ನಗಳಿಗೆ ₹ 200 ಕೋಟಿ "ಬೆಂಗಳೂರು ಟ್ರಾನ್ಸಿಟ್ ಚಾಲೆಂಜ್ ನಿಧಿ" ಸ್ಥಾಪಿಸಲಾಗುವುದು .
- ಅತ್ತಿಬೆಲೆ, ನೆಲಮಂಗಲ, ಕನಕಪುರ, ರಾಮನಗರ, ಬಿಐಎಎಲ್ ಮತ್ತು ಹೊಸಕೋಟೆಗಳಲ್ಲಿ ಮಲ್ಟಿ ಮೋಡಲ್ ಸಾರಿಗೆ ಕೇಂದ್ರ ನಿರ್ಮಿಸುವ ಮೂಲಕ ನಗರದೊಳಗೆ ಸಾರ್ವಜನಿಕ ಮತ್ತು ಖಾಸಗಿ ಬಸ್ ಪ್ರವೇಶದಿಂದ ಉಂಟಾಗುವ ಒತ್ತಡವನ್ನು ತಗ್ಗಿಸಲಾಗುವುದು
- ಬಿಡದಿ, ದಾಬಸ್‌ಪೇಟೆ, ದೇವನಹಳ್ಳಿ ಮತ್ತು ಅತ್ತಿಬೆಲೆಯಲ್ಲಿ ಮಲ್ಟಿ-ಮೋಡಲ್ ಲಾಜಿಸ್ಟಿಕ್ಸ್ ಪಾರ್ಕ್ (ಎಂಎಂಎಲ್‌ಪಿ) ಅನ್ನು ನಿರ್ಮಿಸುವ ಮೂಲಕ ಭಾರಿ ಟ್ರಾಫಿಕ್ ವಾಹನಗಳ ನಗರ ಪ್ರವೇಶವನ್ನು ನಿಯಂತ್ರಿಸಲಾಗುವುದು.

### ಮೆಟ್ರೊ ಮತ್ತು ರೈಲು ಜಾಲದ ವಿಸ್ತರಣೆ

- ಬೆಂಗಳೂರು ಮಹಾನಗರ ವಲಯದ ಎಲ್ಲಾ ನಗರ ಪ್ರದೇಶಗಳಿಗೆ ಹಂತ ಹಂತವಾಗಿ ಮೆಟ್ರೊ ವಿಸ್ತರಿಸಲಾಗುವುದು.
- ಸಾಧ್ಯಾಸಾಧ್ಯತೆ ವರದಿ ನಂತರ ನೇರಳೆ ಮಾರ್ಗವನ್ನು ಒಂದು ಭಾಗದಲ್ಲಿ ಕಾಡುಗೋಡಿಯ ಮೂಲಕ ಹೊಸಕೋಟೆ ಬಸ್ ನಿಲ್ದಾಣದವರೆಗೆ ಮತ್ತು ಇನ್ನೊಂದು ಭಾಗದಲ್ಲಿ ಕೆಂಗೇರಿ ಮೂಲಕ ಬಿಡದಿ ಬಸ್ ನಿಲ್ದಾಣದವರೆಗೆ ವಿಸ್ತರಿಸಲಾಗುವುದು.
- ಸಾಧ್ಯಾಸಾಧ್ಯತೆ ವರದಿ ನಂತರ ನಂತರ ಹಸಿರು ಮಾರ್ಗವನ್ನು ಒಂದು ಭಾಗದಲ್ಲಿ ಬಿಐಇಸಿ ಮೂಲಕ ನೆಲಮಂಗಲ ಬಸ್ ನಿಲ್ದಾಣದವರೆಗೆ ಹಾಗೂ ಇನ್ನೊಂದು ಭಾಗದಲ್ಲಿ ಅಂಜನಪುರ ಮೂಲಕ ಕನಕಪುರ ಬಸ್ ನಿಲ್ದಾಣದವರೆಗೆ ವಿಸ್ತರಣೆ ಮಾಡಲಾಗುವುದು.
- ಸಾಧ್ಯಾಸಾಧ್ಯತೆ ವರದಿ ನಂತರ ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರವರೆಗಿನ ಮಾರ್ಗವನ್ನು ಅತ್ತಿಬೆಲೆವರೆಗೆ ವಿಸ್ತರಣೆ ಮಾಡಲಾಗುವುದು.
- ವಿಮಾನ ನಿಲ್ದಾಣದವರೆಗಿನ ಮೆಟ್ರೊ ಸಂಪರ್ಕವನ್ನು ತ್ವರಿತ ಗತಿಯಲ್ಲಿ ಸಂಪೂರ್ಣಗೊಳಿಸಲಾಗುವುದು.

- ಸಾಧ್ಯಾಸಾಧ್ಯತೆ ವರದಿ ನಂತರ ಕೋರಮಂಗಲದ ಮೂಲಕ ಬಿಟಿಎಂ ಲೇಔಟ್‌ನಿಂದ ಇಂದಿರಾನಗರಕ್ಕೆ, ವರ್ತೂರು ಮೂಲಕ ಬೊಮ್ಮಸಂದ್ರದಿಂದ ಕಾಡುಗೋಡಿಗೆ ಮತ್ತು ಬೈರಮಂಗಲ ಹಾಗೂ ಇನ್ನೋವೇಟಿವ್ ಫಿಲ್ಮ್ ಸಿಟಿ ಮೂಲಕ ಹಾರೋಹಳ್ಳಿಯಿಂದ ಬಿಡದಿ ಟರ್ಮಿನಸ್‌ವರೆಗೆ ಸಂಪರ್ಕ ಮಾರ್ಗಗಳ ನಿರ್ಮಾಣ.
- ಮೈಸೂರು ರಸ್ತೆ, ಸುಮನಹಳ್ಳಿ, ಯಶವಂತಪುರ, ನಾಗವಾರ, ಕೆ.ಆರ್‌ಪುರಂ ಹಾಗೂ ಸೆಂಟ್ರಲ್ ಸಿಲ್ಕ್ ಬೋರ್ಡ್ ಮಾರ್ಗವಾಗಿ ಪುಟ್ಟೇನಹಳ್ಳಿ ಕ್ರಾಸ್‌ನಿಂದ ಆರಂಭಿಸಿ ಆರ್‌ವಿ ರಸ್ತೆವರೆಗೆ ಹೊರ ವರ್ತುಲ ಮಾರ್ಗ ನಿರ್ಮಾಣ.
- ಪ್ರತಿಯೊಂದು ಮೆಟ್ರೋ ಸ್ಟೇಷನ್‌ಗಳಲ್ಲಿ ಸೈಕಲ್ ಪಾರ್ಕಿಂಗ್, ಬಸ್ ನಿಲ್ದಾಣ, ಆಟೋ ನಿಲ್ದಾಣ ಮತ್ತು ಟ್ಯಾಕ್ಸಿ ನಿಲ್ದಾಣ ಸೌಲಭ್ಯಗಳನ್ನು ಒದಗಿಸಿ "ಮಲ್ಟಿ ಮೋಡೆಲ್ ಟ್ರಾನ್ಸ್‌ಪೋರ್ಟ್ ಸ್ಟೇಷನ್‌ಗಳಂತೆ" ಪರಿವರ್ತನೆ ಮಾಡಲಾಗುವುದು.
- ನಿರ್ದಿಷ್ಟ ಪಾರ್ಕಿಂಗ್ ಪ್ರದೇಶ ಹಾಗೂ ಎಲ್ಲ ಪ್ರಮುಖ ಮೆಟ್ರೊ ನಿಲ್ದಾಣಗಳು ಹಾಗೂ ಎಲ್ಲ ಇಂಟರ್‌ಚೇಂಜ್ ನಿಲ್ದಾಣಗಳಲ್ಲಿ ಅಗತ್ಯ ಇರುವಲ್ಲಿ ಪಾರ್ಕಿಂಗ್ ಸಂಕೀರ್ಣಗಳ ನಿರ್ಮಾಣ ಮಾಡಲಾಗುವುದು.
- ಕೇಂದ್ರ ಸರ್ಕಾರ ಘೋಷಿಸಿದ ₹ 17,000 ಕೋಟಿಗಳನ್ನು ಬಳಸಿ ಬೆಂಗಳೂರಿನ ಉಪನಗರ ರೈಲ್ವೆ ಜಾಲವನ್ನು ಪೂರ್ಣಗೊಳಿಸಲು ಬಿ-ರೈಡ್ (ಬೆಂಗಳೂರು ರೈಲ್ವೆ ಇನ್ಫ್ರಾಸ್ಟ್ರಕ್ಚರ್ ಡೆವಲ್‌ಮೆಂಟ್ ಕಾರ್ಪೋರೇಶನ್) ಸ್ಥಾಪಿಸಲಾಗುವುದು. ಸರಿಯಾದ ಯೋಜನೆ ರೂಪಿಸುವ ಮೂಲಕ ಇಂಟರ್ ಮೊಡಲ್ ಸಂಪರ್ಕ ಸುಗಮಗೊಳಿಸಿ ಏಕೀಕೃತ ಪ್ರಯಾಣಿಕರ ಕಾರ್ಡ್ ನೀಡಲಾಗುವುದು.

## ಬಸ್ ಸಾರಿಗೆ ವಿಸ್ತರಣೆ

- ಬಿಎಂಟಿಸಿ ಬಸ್ ಸಂಖ್ಯೆ ದ್ವಿಗುಣಗೊಳಿಸಲಾಗುವುದು.
- ಕಿರಿದಾದ ರಸ್ತೆಗಳಲ್ಲಿ ಬಸ್ಸುಗಳಿಂದ ಉಂಟಾಗುವ ಸಂಚಾರ ದಟ್ಟಣೆಯನ್ನು ತಗ್ಗಿಸಲು ಬಿಎಂಟಿಸಿ ಮಿನಿಬಸ್ ಸೇವೆಯನ್ನು ಪ್ರಾರಂಭಿಸಲಾಗುವುದು.
- ಸಮೂಹ ಸಾರಿಗೆಯನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ವಾಣಿಜ್ಯ ವಲಯದದಲ್ಲಿರುವ ಕಾರ್ಖಾನೆಗಳು ಹಾಗೂ ಕಚೇರಿಗಳೊಂದಿಗೆ ಒಪ್ಪಂದ ಮಾಡಿಕೊಂಡು ಉದ್ಯೋಗಿಗಳಿಗೆ ವಿಶೇಷ ರಿಯಾಯಿತಿ ಪ್ಯಾಕೇಜ್‌ಗಳನ್ನು ನೀಡಲಾಗುವುದು.

## ವಿನೂತನ ಸಂಪರ್ಕ ವಿಧಾನಗಳು

- ಡಿಜಿಸಿಎ ಜತೆ ಮಾತುಕತೆ ನಡೆಸಿ, ನಗರದೊಳಗೆ, ನಗರಕ್ಕೆ ಹಾಗೂ ನಗರದಿಂದ ಪರ ಸ್ಥಳಗಳಿಗೆ ಹೆಚ್ಚಿನ ಸಂಖ್ಯೆಯ ಹೆಲಿಕಾಪ್ಟರ್ ವ್ಯವಸ್ಥೆ ಕಲ್ಪಿಸಲಾಗುವುದು.
- ಸ್ಟಾರ್ಟ್‌ಅಪ್ ಕಂಪನಿಯ ಸಹಭಾಗಿತ್ವದಲ್ಲಿ ದೊಡ್ಡ ಮಟ್ಟದಲ್ಲಿ ಆರ್ಥಿಕ ಚಟುವಟಿಕೆ ನಡೆಯುವ ಪ್ರದೇಶದಲ್ಲಿ ಬೈಸಿಕಲ್ ಹಬ್‌ಗಳನ್ನು ಸ್ಥಾಪಿಸಲಾಗುವುದು.

## ಸ್ಮಾರ್ಟ್ ಸಂಚಾರ ನಿರ್ವಹಣೆ

- "ಅಡಾಪ್ಟಿವ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್" ಮೂಲಕ ಸುಲಭ ಸಂಚಾರ ನಿರ್ವಹಣೆಗೆ ಅನುವು ಮಾಡಿಕೊಡಲು ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಅತ್ಯಾಧುನಿಕ ಎಲೆಕ್ಟ್ರಾನಿಕ್ ತಂತ್ರಜ್ಞಾನ ಅಳವಡಿಸಲಾಗುವುದು.
- ನಗರದಲ್ಲಿ ಸುಗಮ ಸಂಚಾರಕ್ಕೆ ಬಿಗ್ ಡೇಟಾ ಸಂಗ್ರಹ, ವಿಶ್ಲೇಷಣೆ ಮೂಲಕ "ಅಡಾಪ್ಟಿವ್ ಟ್ರಾಫಿಕ್ ಮ್ಯಾನೇಜ್ಮೆಂಟ್ ಸಿಸ್ಟಮ್"ಗೆ ಪೂರಕವಾಗಿ ಬೆಂಗಳೂರು ಸಂಚಾರ ನಿರ್ವಹಣಾ ಕೇಂದ್ರ ಸ್ಥಾಪಿಸಲಾಗುವುದು.

## ಆಡಳಿತಾತ್ಮಕ ಕ್ರಮಗಳು

- ಅಂತಾರಾಷ್ಟ್ರೀಯ ಗುಣಮಟ್ಟಕ್ಕನುಗುಣವಾಗಿ ಬಿಎಂಟಿಸಿ, ಬಿಎಂಆರ್‌ಸಿಎಲ್ ಮತ್ತು ಉಪನಗರ ರೈಲು ಸಂಪರ್ಕಕ್ಕಾಗಿ ಬೆಂಗಳೂರು ಮೆಟ್ರೋಪಾಲಿಟನ್ ಟ್ರಾನ್ಸಿಟ್ ಅಥಾರಿಟಿ (ಬಿಎಂಟಿಎ) ಸ್ಥಾಪಿಸಲಾಗುವುದು.
- ನಗರದ ಸಾರ್ವಜನಿಕ ಸಾರಿಗೆ ಸುಗಮಗೊಳಿಸಲು ಬಿಎಂಟಿಎ ಮೂಲಕ ಬಿಎಂಟಿಸಿ, ನಮ್ಮ ಮೆಟ್ರೊ, ಉಪನಗರ ರೈಲ್ವೆ ಹಾಗೂ ಸೈಕಲ್ ಶೇರಿಂಗ್‌ಗಳಲ್ಲಿ ಬಳಸಬಹುದಾದ ಏಕೀಕೃತ ಸಾರಿಗೆ ಕಾರ್ಡ್ (ಯುಟಿಸಿ) ಪರಿಚಯಿಸಲಾಗುವುದು.
- ಗಂಭೀರ ಅವಲೋಕನದ ಬಳಿಕ ಕೆಲವು ರಸ್ತೆಗಳನ್ನು ಪಾದಚಾರಿಗಳಿಗಾಗಿ ಮಾತ್ರ ಎಂದು ಗುರುತಿಸಲಾಗುವುದು.

# ಸುರಕ್ಷಿತ ಬೆಂಗಳೂರು

- ಜಾಗತಿಕ ಉದ್ದಿಮೆ ಕೇಂದ್ರವಾದ ಬೆಂಗಳೂರಿನ ಸ್ಥಾನಮಾನಕ್ಕೆ ಅನುಗುಣವಾಗಿ ಜಾಗತಿಕ ದರ್ಜೆಯ ಅಪರಾಧ ನಿಯಂತ್ರಣ ಕ್ರಿಯಾ ಯೋಜನೆ ರೂಪಿಸಲು ಅಪರಾಧ ಗುಣಲಕ್ಷಣಗಳು ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಮಗ್ರ ಅಧ್ಯಯನ ಪ್ರಾರಂಭಿಸಲಾಗುವುದು. ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ವಿಷಯ ಹಾಗೂ ಅಪರಾಧ ಪ್ರಕರಣಗಳ ಸಮಗ್ರ ಅವಲೋಕನದ ಬಳಿಕ ಜಾಗತಿಕ ಮಾನದಂಡಕ್ಕೆ ಅನುಗುಣವಾಗಿ ಅಪರಾಧ ನಿಯಂತ್ರಣಕ್ಕೆ ಕ್ರಿಯಾ ಯೋಜನೆ ರೂಪಿಸಲಾಗುವುದು.
- ನಗರದಲ್ಲಿ ಪೊಲೀಸ್ ಠಾಣೆಗಳ ಸಂಖ್ಯೆಯನ್ನು ದ್ವಿಗುಣಗೊಳಿಸುತ್ತೇವೆ.
- ಬೆಂಗಳೂರನ್ನು ಸುರಕ್ಷಿತವಾಗಿಡಲು ಪೊಲೀಸ್ ಪಡೆಯಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.
- ನಗರದ ಪೊಲೀಸ್ ಪಡೆಯಲ್ಲಿ ಅನುಷ್ಠಾನದಲ್ಲಿದ್ದ 3 ಪಾಳಿಗಳ ವ್ಯವಸ್ಥೆ ಮರು ಸ್ಥಾಪನೆ ಬಗ್ಗೆ ಪರಿಶೀಲಿಸಲಾಗುವುದು.
- ಮಹಿಳಾ ಪೊಲೀಸ್ ಠಾಣೆಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು.
- ಬೆಂಗಳೂರಿನಲ್ಲಿ ತೊಂದರೆಯಲ್ಲಿರುವ ಮಹಿಳೆಯರ ಕರೆಗೆ "ಕಿತ್ತೂರು ರಾಣಿ ಚೆನ್ನಮ್ಮ ಫ್ಲೈಯಿಂಗ್ ಸ್ಕ್ವಾಡ್"ನಿಂದ ತಕ್ಷಣವೇ ಸ್ಪಂದಿಸುವ ವ್ಯವಸ್ಥೆ ಮಾಡಲಾಗುವುದು.
- ಬೆಂಗಳೂರಿನ ಉದ್ಯೋಗಸ್ಥ ಮಹಿಳೆಯರಿಗಾಗಿ ರಾತ್ರಿ 10 ರಿಂದ ಮುಂಜಾನೆ 5 ಗಂಟೆಯವರೆಗೆ ಕೇವಲ ಮಹಿಳೆಯರಿಗಾಗಿ ಇರುವ ಜಿಪಿಎಸ್ ಸೌಲಭ್ಯ ಹೊಂದಿದ ಬಸ್ ಸೇವೆಯನ್ನು ಒದಗಿಸಲಾಗುವುದು.
- ರಾತ್ರಿ 10 ರಿಂದ ಮುಂಜಾನೆ 5 ಗಂಟೆಯವರೆಗೆ ಸೇವೆ ಒದಗಿಸುವ ಮಹಿಳಾ ಆಟೋ ರಿಕ್ಷಾ ಮತ್ತು ಟ್ಯಾಕ್ಸಿಗಳಿಗೆ ಪ್ರೋತ್ಸಾಹ ಧನ ನೀಡುವ ಮೂಲಕ ಉತ್ತೇಜನ ನೀಡಲಾಗುವುದು.
- ಬೆಂಗಳೂರಿನ ಪ್ರತಿ ಆಡಳಿತಾತ್ಮಕ ವಲಯದಲ್ಲಿ "ಸುಭದ್ರ ಕೇಂದ್ರ"ಗಳನ್ನು ಸ್ಥಾಪಿಸಿ, ಸಂಕಷ್ಟದಲ್ಲಿರುವ ಮಹಿಳೆಯರಿಗೆ ಕಾನೂನು, ಭದ್ರತೆ, ಆಪ್ತಸಮಾಲೋಚನೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುವುದು.

- ಸುರಕ್ಷತೆಗಾಗಿ ನಗರದ ಎಲ್ಲ ರಸ್ತೆಗಳಿಗೆ ಉತ್ತಮ ಬೆಳಕಿನ ವ್ಯವಸ್ಥೆ ಮಾಡಲಾಗುವುದು.
- ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ನಾಗರಿಕ ಕೇಂದ್ರಿತ ಗಸ್ತು ವ್ಯವಸ್ಥೆ ಮಾಡಲಾಗುವುದು. ನಂತರದ ವರ್ಷಗಳಲ್ಲಿ ಬೆಂಗಳೂರಿನ ಎಲ್ಲಾ ವಾರ್ಡ್‌ಗಳಲ್ಲಿ ಈ ಯೋಜನೆ ವಿಸ್ತರಿಸಲಾಗುವುದು.
- ಬೆಂಗಳೂರಿನಲ್ಲಿ ನೆಲೆಸಿರುವ ಅಥವಾ ಪ್ರವಾಸಕ್ಕೆ ಆಗಮಿಸುವ ವಿದೇಶಿಯರ ದೂರುಗಳ ಪ್ರಕ್ರಿಯೆಯನ್ನು ಸರಳಗೊಳಿಸಲು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ವಿಶೇಷ ಘಟಕ ಸ್ಥಾಪಿಸಲಾಗುವುದು.

## ಬೆಂಗಳೂರಿನಲ್ಲಿ ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಪ್ರಚಾರ

- ಬೆಂಗಳೂರು ದರ್ಶಿನಿ ಹಾಪ್-ಆನ್-ಹಾಪ್-ಆಫ್ ಬಸ್ಸುಗಳ ಸಂಖ್ಯೆ ಹೆಚ್ಚಿಸಲಾಗುವುದು.
- ನಗರದ ಶ್ರೀಮಂತ ಇತಿಹಾಸ ಮತ್ತು ಸಂಸ್ಕೃತಿ ಪರಿಚಯಿಸಲು ನಗರದಾದ್ಯಂತ ಹೆರಿಟೇಜ್ ವಾಕ್ ಪ್ರಚುರಪಡಿಸಲಾಗುವುದು.
- ಸೋಮೇಶ್ವರ ದೇವಸ್ಥಾನ, ಕಾಡು ಮಲ್ಲೇಶ್ವರ ದೇವಸ್ಥಾನ ಮತ್ತು ಬಸವನಗುಡಿಯಂತಹ ಪ್ರಸಿದ್ಧ ದೇವಾಲಯಗಳನ್ನು ಆಕರ್ಷಕ ಪ್ರವಾಸೋದ್ಯಮ ಸ್ಥಳಗಳಾಗಿ ಪರಿವರ್ತಿಸಿ, ವಿಶ್ವ ದರ್ಜೆಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು.
- ಬೆಂಗಳೂರಿನ ಪಾರಂಪರಿಕ ಸ್ಥಳಗಳನ್ನು ಪುನರುಜ್ಜೀವನ ಗೊಳಿಸಲಾಗುವುದು. ಧ್ವನಿ ಮತ್ತು ಬೆಳಕಿನ ಪ್ರದರ್ಶನಗಳನ್ನು ಪ್ರಾರಂಭಿಸುವ ಮೂಲಕ ಪ್ರವಾಸಿಗರನ್ನು ಸೆಳೆಯಲಾಗುವುದು.
- ಅವೆನ್ಯೂ ರಸ್ತೆ, ವಿ.ವಿ ಪುರಂನ ಫುಡ್ ಸ್ಟ್ರೀಟ್, ಸಿಟಿ ಮಾರ್ಕೆಟ್ ಮುಖ್ಯ ರಸ್ತೆ, ಗಾಂಧಿ ಬಜಾರ್ ಮುಖ್ಯ ರಸ್ತೆ, ಎಂಜಿ ರೋಡ್, ಕಮರ್ಷಿಯಲ್ ಸ್ಟ್ರೀಟ್, ಜಯನಗರ, ಮಲ್ಲೇಶ್ವರ ಸೇರಿದಂತೆ ನಗರದ ಹಲವು ಸ್ಥಳಗಳನ್ನು ಜನಪ್ರಿಯಗೊಳಿಸಲು ವಿಶೇಷ ಪ್ರಚಾರ ಅಭಿಯಾನ ಆರಂಭಿಸಲಾಗುವುದು.
- ನಗರದ 4 ಪ್ರಮುಖ ಸ್ಥಳಗಳಲ್ಲಿ ಸಂಗೀತ ಮತ್ತು ನೃತ್ಯ ಕೇಂದ್ರ ಸ್ಥಾಪಿಸಿ ಅಲ್ಲಿನ ಸಭಾಂಗಣವನ್ನು ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಪ್ರದರ್ಶನಗಳಿಗೆ ಹೆಚ್ಚಿನ ರಿಯಾಯಿತಿ ದರದಲ್ಲಿ ನೀಡಲಾಗುವುದು.
- ಕರ್ನಾಟಕ ಸಂಗೀತ ಮತ್ತು ಸಾಂಪ್ರದಾಯಿಕ ನೃತ್ಯ ಪ್ರಕಾರಗಳಾದ ಭರತನಾಟ್ಯ ಮತ್ತು ಯಕ್ಷಗಾನದಲ್ಲಿ ತರಬೇತಿ ನೀಡಲು ಈ ಸಂಗೀತ ಮತ್ತು ನೃತ್ಯ ಕೇಂದ್ರಗಳನ್ನು ಬಳಸಿಕೊಳ್ಳಲಾಗುವುದು.
- ಕಬ್ಬನ್‌ಪಾರ್ಕ್‌ನಲ್ಲಿರುವ ಶ್ರೀ ಶೇಷಾದ್ರಿ ಐಯ್ಯರ್ ಮೆಮೋರಿಯಲ್ ಲೈಬ್ರರಿಯಲ್ಲಿನ ಸೌಲಭ್ಯಗಳನ್ನು ನವೀಕರಿಸಿ ಗ್ರಂಥಾಲಯದಲ್ಲಿನ ಸಂಗ್ರಹವನ್ನು ನವೀಕರಿಸಲಾಗುವುದು ಮತ್ತು ₹ 10 ಕೋಟಿಗಳಲ್ಲಿ ಗ್ರಂಥಾಲಯದಲ್ಲಿನ ಸಂಗ್ರಹಗಳನ್ನು ಡಿಜಿಟಲೀಕರಣಗೊಳಿಸಿ ನವೀಕರಿಸಲಾಗುವುದು.
- ನಗರದಾದ್ಯಂತ "ಫ್ರೀ ಆರ್ಟ್" ವಲಯಗಳನ್ನು ಸ್ಥಾಪಿಸಲಾಗುವುದು ಹಾಗೂ ಈ ಮೂಲಕ ಬೆಂಗಳೂರಿಗರು ನಗರವನ್ನು ಸುಂದರಗೊಳಿಸುವಂತೆ ಪ್ರೇರೇಪಿಸಲಾಗುವುದು.
- ಪ್ರತಿಯೊಂದು ವಾರ್ಡ್‌ನಲ್ಲಿ ಉದ್ಯಾನ ಸ್ಥಾಪಿಸಿ ಅಲ್ಲಿ ಬಯಲು ರಂಗಮಂದಿರಗಳನ್ನು ತೆರೆದು ಸಂಗೀತ, ನೃತ್ಯ ಮತ್ತು ನಾಟಕ ಪ್ರದರ್ಶನಗಳಿಗೆ ಅವಕಾಶ ಮಾಡಿಕೊಡಲಾಗುವುದು.
- ಬೆಂಗಳೂರು, ಕರ್ನಾಟಕ ಮತ್ತು ಭಾರತದ ಶ್ರೇಷ್ಠತೆಯನ್ನು ಸಂಯೋಜಿಸುವ ಕೇಂದ್ರವನ್ನು ಬೆಂಗಳೂರಿನಲ್ಲಿ ವಿನ್ಯಾಸಗೊಳಿಸಲಾಗುವುದು.

## ಬೆಂಗಳೂರಿನಲ್ಲಿ ಮೂಲಸೌಕರ್ಯ ಅಭಿವೃದ್ಧಿ

- ಬೆಂಗಳೂರಿನ ಕೆರೆಗಳನ್ನು ಸ್ವಚ್ಛಗೊಳಿಸಿ, ಪುನರುಜ್ಜೀವನಗೊಳಿಸಲು ₹ 2,500 ಕೋಟಿ "ನಾಡಪ್ರಭು ಕೆಂಪೇಗೌಡ ನಿಧಿ" ಸ್ಥಾಪಿಸಲಾಗುವುದು.
- "ಅಮೃತ್" (ಅಟಲ್ ನಗರ ನವೀಕರಣ ಮತ್ತು ಪುನಶ್ಚೇತನ ಮಿಷನ್)ನಿಂದ ಶಿಫಾರಸು ಮಾಡಲಾದ ನಗರ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ಶಿಫಾರಸುಗಳ ತ್ವರಿತ ಅನುಷ್ಠಾನ ಮಾಡಲಾಗುವುದು. ವಿಶೇಷವಾಗಿ ನಗರದ ನೀರಿನ ಕೊಳವೆಗಳನ್ನು ನವೀಕರಿಸುವ ಕಾರ್ಯ ತ್ವರಿತಗೊಳಿಸಲಾಗುವುದು.
- 2022ರ ವೇಳೆಗೆ ಎಲ್ಲರಿಗೂ ಸೂರು ನೀಡುವ ಗುರಿ ಹೊಂದಿರುವ ಪ್ರಧಾನ ಮಂತ್ರಿ ಆವಾಸ್ ಯೋಜನೆ (ಪಿಎಂಎವೈ)ಯನ್ನು ಬೆಂಗಳೂರಿನಲ್ಲಿ ಜಾರಿಗೆ ತರಲಾಗುವುದು.
- ಬೆಂಗಳೂರನ್ನು "ಕಸ ಮುಕ್ತ" (ಝೀರೋ ಗಾರ್ಬೇಜ್) ನಗರವನ್ನಾಗಿ ಮಾಡುವ ಭರವಸೆಯನ್ನು ನಾವು ನೀಡುತ್ತೇವೆ.
- ನಗರದ ತ್ಯಾಜ್ಯ ನೀರನ್ನು 100% ಮರುಬಳಕೆ ಸಾಧ್ಯವಾಗಿಸಲಿದ್ದೇವೆ.
- ನಗರದ ಸ್ವಚ್ಛತೆಯನ್ನು ಸುಧಾರಿಸುವ ನಿಟ್ಟಿನಲ್ಲಿ ದಿಟ್ಟ ಕ್ರಮಗಳನ್ನು ಕೈಗೊಳ್ಳುವ ಮೂಲಕ ಬೆಂಗಳೂರನ್ನು ದೇಶದ ಅತಿಸ್ವಚ್ಛ ಮೆಟ್ರೊಪಾಲಿಟನ್ ಸಿಟಿಯನ್ನಾಗಿಸುತ್ತೇವೆ.
- ಪ್ರತಿ ವಾರ್ಡ್‌ಗೆ ಕನಿಷ್ಠ 10 ಸಾರ್ವಜನಿಕ ಶೌಚಾಲಯಗಳಂತೆ ನಗರದೆಲ್ಲೆಡೆ 2,000 ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗುವುದು.
- ಆರೋಗ್ಯ ಸುಧಾರಣೆಗೆ ನಗರದ ಪ್ರತಿ ವಾರ್ಡ್‌ನಲ್ಲಿ "ಆಯುಷ್ಮಾನ್ ಚಿಕಿತ್ಸಾಲಯ"ಗಳನ್ನು ತೆರೆಯುತ್ತೇವೆ.
- ಬೆಂಗಳೂರಿನ ಗರಡಿ ಮನೆಗಳಿಗೆ ಆರ್ಥಿಕ ಸಹಾಯ ಒದಗಿಸುತ್ತೇವೆ.
- ನಗರದ 8 ಆಡಳಿತಾತ್ಮಕ ವಲಯಗಳಲ್ಲಿ ವಿಶ್ವದರ್ಜೆಯ ಕ್ರೀಡಾ ಸಂಕೀರ್ಣ ಸ್ಥಾಪಿಸಿ ಅದರಲ್ಲಿ ಈಜುಕೊಳ ಮುಂತಾದವುಗಳನ್ನು ನಿರ್ಮಿಸಲಾಗುವುದು.
- ನಗರದ ಪ್ರತಿ ವಾರ್ಡ್‌ನಲ್ಲಿ ವಾಯುಗುಣಮಟ್ಟ ಮಾಪಕ ಅಳವಡಿಸಲಾಗುವುದು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಈ ಮಾಪಕಗಳಿಂದ ಸಂಗ್ರಹಿಸಿದ ದತ್ತಾಂಶ ಆಧರಿಸಿ ನಿರ್ದಿಷ್ಟ ಅವಧಿಗಳಲ್ಲಿ ವಾಯು ಗುಣಮಟ್ಟ ಸುಧಾರಿಸಲು ಕ್ರಮ ಕೈಗೊಳ್ಳಲಾಗುವುದು.
- "ಮನೆಗೊಂದು ಮರ" ಕಾರ್ಯಕ್ರಮವನ್ನು ಪ್ರಾರಂಭಿಸಿ, ಪ್ರತಿ ಮನೆಗೂ ಒಂದೊಂದು ಸಸಿ ವಿತರಿಸಿ ಅದನ್ನು ಆರೈಕೆ ಮಾಡುವ ಜವಾಬ್ದಾರಿ ಮನೆಯವರಿಗೆ ನೀಡಿ ಆ ಮರದಿಂದ ಬರುವ ಪ್ರತಿಫಲವನ್ನು ಪಡೆಯುವ ಹಕ್ಕು ಮನೆಯವರಿಗೆ ನೀಡಲಾಗುವುದು.
- ಬೆಂಗಳೂರಿನ ಪ್ರತಿಯೊಂದು ಸರಕಾರಿ ಶಾಲೆಗಳಲ್ಲಿ ಹಸಿರು ಕ್ರಾಂತಿ ಪ್ರಾರಂಭಿಸಿ ನಗರವನ್ನು ಹಸಿರಾಗಿಸುವ ಕಾರ್ಯದಲ್ಲಿ ಮರಗಳ ಮಹತ್ವವನ್ನು ಕಲಿಸಲಾಗುವುದು.
- ಪ್ರತಿಯೊಂದು ಮೆಟ್ರೊ ಹಾಗೂ ಮೇಲ್ಸೇತುವೆ ಸ್ತಂಭದ ಮೇಲೆ ಪುಟ್ಟ ಹಸಿರು ತೋಟ ನಿರ್ಮಿಸಲಾಗುವುದು.

# ಪ್ರಣಾಳಿಕೆ ಸಿದ್ಧವಾಗಿದ್ದು ಹೀಗೆ

ಈ ಪ್ರಣಾಳಿಕೆ ಸಿದ್ಧಪಡಿಸುವ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿ, ಜನರ ಆಶೋತ್ತರ ಹಾಗೂ ಸಮಸ್ಯೆಗಳಿಗೆ ಸ್ಪಂದಿಸಿದೆ. ಈ ಕೆಳಗಿನ ಕಾರ್ಯಕ್ರಮಗಳ ಮೂಲಕ ನಾಡಿನ ಜನರನ್ನು ತಲುಪುವ ಪ್ರಯತ್ನ ಮಾಡಿದೆ

## ನವ ಕರ್ನಾಟಕ ನಿರ್ಮಾಣಕ್ಕಾಗಿ ಪರಿವರ್ತನೆ ಯಾತ್ರೆ

6 ತಿಂಗಳ ಹಿಂದೆ ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ, 2 ಕೋಟಿಗೂ ಹೆಚ್ಚು ಜನರನ್ನು ತಲುಪಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯದ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಿಜೆಪಿ ನಾಯಕರು ಅರ್ಥಮಾಡಿಕೊಂಡಿದ್ದಾರೆ. ಶ್ರೀ ಯಡಿಯೂರಪ್ಪನವರ ನಾಯಕತ್ವದ ಬಗ್ಗೆ ಜನರಿಗಿರುವ ವಿಶ್ವಾಸ ಹಾಗೂ ವಿಶೇಷ ಒಲವು ನಮ್ಮ ಗಮನಕ್ಕೆ ಬಂದಿದೆ.




## ನವ ಕರ್ನಾಟಕ ಜನಪರ ಶಕ್ತಿ ಅಭಿಯಾನ

ನವ ಕರ್ನಾಟಕ ಜನಪರ ಶಕ್ತಿ ಅಭಿಯಾನದಡಿ 15 ವಿಭಿನ್ನ ರಂಗಗಳ 250ಕ್ಕೂ ಹೆಚ್ಚು ಪರಿಣಿತರ ಸಲಹೆ ಸೇರಿದಂತೆ ರಾಜ್ಯಾದ್ಯಂತ ಜನರ ಅಭಿಪ್ರಾಯ ಮತ್ತು ಮನವಿಗಳನ್ನು ಸಂಗ್ರಹಿಸಲಾಗಿದೆ. ಈ ಅಭಿಯಾನದಡಿ 2 ಲಕ್ಷಕ್ಕೂ ಹೆಚ್ಚು ಸಲಹೆ ಸೂಚನೆಗಳು ನಮ್ಮ ಸಲಹಾ ಪೆಟ್ಟಿಗೆ ಸೇರಿದ್ದವು. ಮಿಸ್ಡ್‌ಕಾಲ್ ಮೂಲಕ 3 ಲಕ್ಷ ಸಲಹೆಗಳು ಬಂದಿದ್ದವು. ವೆಬ್‌ಸೈಟ್ ಮೂಲಕ 2 ಲಕ್ಷ ಸಲಹೆಗಳನ್ನು ಸ್ವೀಕರಿಸಿದ್ದೇವೆ.

## ಕರುನಾಡ ಜಾಗೃತಿ ಯಾತ್ರೆ

ನಮ್ಮ ರಾಷ್ಟ್ರೀಯ ಅಧ್ಯಕ್ಷರಾದ ಅಮಿತ್ ಶಾ ಅವರು ರಾಜ್ಯ ಬಿಜೆಪಿ ನಾಯಕರೊಂದಿಗೆ ರಾಜ್ಯಾದ್ಯಂತ ಸಂಚರಿಸಿ, ಜನರೊಂದಿಗೆ ಸಂವಾದ ನಡೆಸುವ ಮೂಲಕ ಅವರು ಎದುರಿಸುತ್ತಿರುವ ಸಮಸ್ಯೆ ಹಾಗೂ ಅಗತ್ಯಗಳನ್ನು ಅರ್ಥಮಾಡಿಕೊಂಡಿದ್ದಾರೆ.




## ನವ ಭಾರತಕ್ಕಾಗಿ ನವ ಬೆಂಗಳೂರು

ನಮ್ಮ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನವ ಬಾರತದ ಕನಸನ್ನು ನನಸಾಗಿಸುವಲ್ಲಿ ಬೆಂಗಳೂರಿನ ಪಾತ್ರ ಅರಿತು, “ನವ ಭಾರತಕ್ಕಾಗಿ ನವ ಬೆಂಗಳೂರು” ಅಭಿಯಾನ ಆರಂಭಿಸಿದೆವು. ನಗರ ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಚರ್ಚೆಗಳನ್ನು ಆಯೋಜಿಸಿದ್ದೆವು. ಈ ಅಭಿಯಾನದದಲ್ಲಿ ಯುವ ಜನತೆಯನ್ನು ತೊಡಗಿಸಿಕೊಳ್ಳಲು ಕಾಲೇಜು ಸ್ಪರ್ಧೆಗಳನ್ನು ನಡೆಸಿದ್ದವು. 5000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಪರಿಹಾರದ ಬಗ್ಗೆ 4 ಚರ್ಚೆಗಳನ್ನು ನಡೆಸಲಾಗಿದೆ. ಬೆಂಗಳೂರಿಗೆ ಸಂಬಂಧಿಸಿದ 25,000ಕ್ಕೂ ಹೆಚ್ಚು ಅಭಿಪ್ರಾಯಗಳು ವೆಬ್‌ಸೈಟ್ ಮೂಲಕ ತಲುಪಿವೆ.

ರಾಜ್ಯದ ಜನರ ಅಭಿಪ್ರಾಯ, ಮನವಿ ಹಾಗೂ ನಾನಾ ಕ್ಷೇತ್ರಗಳ ತಜ್ಞರು ನೀಡಿದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು, ಬಿಜೆಪಿ ಕರ್ನಾಟಕದ ಪ್ರಣಾಳಿಕಾ ಸಮಿತಿಯು ಕರ್ನಾಟಕದ ಜನರ ಆಶಯ ಹಾಗೂ ಬಿಜೆಪಿಯ ದೃಷ್ಟಿಕೋನವನ್ನು ಬಿಂಬಿಸುವಂತಹ ಪ್ರಣಾಳಿಕೆಯನ್ನು ಸಿದ್ಧಪಡಿಸಿದೆ.

ಕರ್ನಾಟಕದ ಜನತೆ ತಮ್ಮ ಆಶೋತ್ತರ ಹಾಗೂ ಕನಸುಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುವ ಮೂಲಕ ಅವರಿಗೆ ಉತ್ತಮ ಸೇವೆ ನೀಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದ ಹೇಳುತ್ತೇವೆ.








# ಭಾರತೀಯ ಜನತಾ ಪಾರ್ಟಿ

ಫಾಲೋ ಮಾಡಿ www.facebook.com/BJP4Karnataka www.twitter.com/BJP4Karnataka

ಈ ಸಂಖ್ಯೆಗೆ ಮಿಸ್ ಕಾಲ್ ಕೊಡಿ +91 6359150150

ಪ್ರಕಟಣೆ: ಬಿಜೆಪಿ ಕರ್ನಾಟಕ

ಪ್ರತಿಗಳು: 500

ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು